Financial Business

DISCUSSION ON VOTING OF DEMANDS FOR GRANTS FOR 1981-82

† ಶ್ರೀ ಬಿ. ಎಸ್. ಕೆಂಗೇಗೌಡ (ಚಾಮರಾಜ).— ಮಾನ್ಯ ಅಧ್ಯಕ್ಷರೇ, ಈಗತಾನೇ ಕಾರ್ಪೊರೇಷನ್ ಬಗ್ಗೆ, ಮುನಿಸಿಪಾಲಿಟಿ ಬಗ್ಗೆ ಎಲೆಕ್ಷನ್ ವಿಷಯದಲ್ಲಿ ಒಂದು ಉತ್ತರವನ್ನು ಮಾನ್ಯ ಸಚಿವರು ಹೇಳುತ್ತಾ ನವೆಂಬರ್ ತಿಂಗಳೊಳಗೆ ನಾವು ಎಲೆಕ್ಷನ್ ಮಾಡುತ್ತೇವೆ, ಈ ಬಗ್ಗೆ ಅಡ್ವೈಸರಿ ಕೌನ್ಸಿಲ್ ಅವಶ್ಯಕತೆ ಇಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ಈ ವಿಚಾರದಲ್ಲಿನಾನು ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛಿಸುತ್ತೇನೆ. ಅದೂ ಸರಿಯೇ. ನವೆಂಬರ್ ತಿಂಗಳಿನಲ್ಲಿ ಎಲೆಕ್ಷನ್ ಮಾಡುತ್ತೇವೆಂದು ತಿಳಿಸಿದ್ದಾರೆ. ಅದರಂತೆ ಎಲೆಕ್ಷನ್ ಆಗುತ್ತದೆ. ಆದರೆ ಸಂದರ್ಭ ಬಂದಾಗ ಎಲೆಕ್ಷನ್ ಅನ್ನು ಮುಂದೂಡುತ್ತಾರೆ. ಅಂಥಾ ಸಂದರ್ಭದಲ್ಲಿ ಈ ಅಡ್ವೈಸರಿ ಕೌನ್ಸಿಲ್ ಇರಬೇಕು ಅಂತ ಕಾನೂನಿನಲ್ಲಿ ಅಳವಡಿಸಬೇಕಾದುದು ಸೂಕ್ತ ಎಂದು ನನ್ನ ಸಲಹೆ. ಇದಕ್ಕೆ ಕಾರಣವಾದರೂ ಇಷ್ಟೆ. ನಾವು ಈ ಅಧಿಕಾರಿಗಳಿಂದ ನಮ್ಮ ಕೆಲಸಕಾರ್ಯಗಳನ್ನು ಮಾಡಿಸುತ್ತಾ ಇದ್ದೇವೆ. ಈ ಒಂದು ಮಿಷನರಿ ಸಹಾಯವನ್ನು ತೆಗೆದುಕೊಂಡು ನಾವು ಈ ಕೆಲಸವನ್ನು ಮಾಡಿಸುತ್ತಿದ್ದೇವೆ. ಆದರೂ ಕೂಡ ಈ ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನದಾಗಿ ಜನರ ಒಂದು ಪಾತ್ರವೂ ಇರಬೇಕು ಎಂದು ಹೇಳುತ್ತೇನೆ. ಯಾವತಾದರೂ ಕೂಡ ಇದರ ಚುನಾವಣೆಯನ್ನು ಮುಂದೂಡಿದರೆ ಯಾವರೀತಿಯಾಗಿ ಅಲ್ಲಿ ಕೆಲಸ ಮಾಡಬೇಕು ಅನ್ನುವುದಕ್ಕೆ ಅದು ಸ್ಥಳೀಯ ಸಂಸ್ಥೆ ಬಗ್ಗೆಯಾಗಲಿ, ಮುನಿಸಿಪಾಲಿಟಿ ಬಗ್ಗೆಯಾಗಲಿ, ಕಾರ್ಪೊರೇಷನ್ ಬಗ್ಗೆಯಾಗಲಿ ಅಥವಾ ಯಾವುದಾದರೂ ನೋಟಿಫೈಡ್ ಏರಿಯಾ ಆಗಲಿ ಅಲ್ಲಿ ಈ ಅಡ್ವೈಸರಿ ಕೌನ್ಸಿಲ್ ಇಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಸ್ವಾಮಿ, ಈ ಆಕ್ಟ್ರಾಯಿ ಬಗ್ಗೆ ಹೇಳಬೇಕಾದರೆ ನಮ್ಮ ಮೈಸೂರು ಕಾರ್ಪೊರೇಷನ್ನಿನಲ್ಲಿ ಒಂದು ಸ್ವಾರಸ್ಯತೆ ನಡೆದಿದೆ. ಅದನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಕಳೆದ ಸಾರಿ ರಿಪೋರ್ಟ್‌ನಲ್ಲಿ ಪೇಜ್‌ನಂಬರ್ ೬ರಲ್ಲಿ ಈ ರೀತಿ ಬರೆದಿದ್ದೀರಾ ? ಅದನ್ನು ಓದುತ್ತೇನೆ. ಈ ರೀತಿ ಇದೆ.—

> "The Corporation was given a total grant of Rs. 1,085 lakhs during the year as compensation for the loss of Octroi".

ಈ ಸಾರಿಯ ಆನ್ಯುಯಲ್ ರಿಪೋರ್ಟಿನಲ್ಲಿ ಈ ರೀತಿ ಕೊಟ್ಟಿದ್ದೀರಾ ? ಅದು ಪೇಜ್‌ನಂಬರ್ ೫ ರಲ್ಲಿ ಇದೆ. ಅದರಲ್ಲಿ ನಮ್ಮ ಮೈಸೂರು ನಗರಕ್ಕೆ ೧,೯೯ ಲಕ್ಷ ಅಂದರೆ ೯೯ ಲಕ್ಷ ರೂಪಾಯಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದ್ದೀರಾ. ಈ ಬಗ್ಗೆ ಆಕ್ಟ್ರಾಯಿಯನ್ನು ತೆಗೆಯುತಕ್ಕಂಥಾ ಸಂದರ್ಭದಲ್ಲಿ ಈ ಸಂಬಂಧದಲ್ಲಿ ಸರ್ಕಾರದ ಒಂದು ನೀತಿ ಏನೆಂದರೆ ವರ್ಷೇ ವರ್ಷೇ ಅದರ ಗ್ರೋಯಿಂಗ್ ಇನ್‌ಕಂ ಸುಮಾರು ೧೦ ರಿಂದ ೧೫ ಪರ್ಸೆಂಟ್‌ನವರೆಗೆ ಆಗುತ್ತದೆ. ಅದನ್ನು ಜಾಸ್ತಿ ಮಾಡಿಕೊಂಡು ಹೋಗುತ್ತದೆ ಆದರೆ ಈಗ ಇರತಕ್ಕಂಥಾದ್ದನ್ನು ಕಡಿಮೆ ಮಾಡುವುದಿಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ನಾನು ಹೇಳುವುದೇನೆಂದರೆ ಕೇವಲ ಒಂದೇ ಒಂದು ವರ್ಷದಲ್ಲಿ ನಮ್ಮ ಮೈಸೂರು ನಗರ ಕಾರ್ಪೊರೇಷನ್ನಿಗೆ ಸುಮಾರು ೧೦-೧೫ ಪರ್ಸೆಂಟ್ ಕಡಿಮೆ ಮಾಡಿದ್ದೀರಿ. ದಯವಿಟ್ಟು ಮಂತ್ರಿಗಳು ಇದನ್ನು ನೋಟ್ ಮಾಡಿಕೊಂಡು ಈಗ ಕಡಿಮೆ ಕೊಟ್ಟಿರುವುದನ್ನು ಭರ್ತಿ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಏತಕ್ಕೆಂದರೆ ಈಗಾಗಲೇ ಸಂಬಳ ಕೊಡುವುದಕ್ಕೆ ಅಲ್ಲಿ ದುಡ್ಡು ಇಲ್ಲ ನನಗೆ ಕಾಂಪನ್ಸೇಷನ್ ಆಕ್ಟ್ರಾಯಿ ನಿಂದ ೨೦ ರಿಂದ ೩೫ ಸಾವಿರದವರೆಗೆ ವಸೂಲಿಯಾಗುತ್ತಿತ್ತು. ಇದರಿಂದ ಅಲ್ಲಿಯ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗೂ ಕೂಡ ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತಿತ್ತು. ನಾವು ೩-೪ ತಿಂಗಳಿನಿಂದಲೂ ಕೂಡ ಇದರ ಬಗ್ಗೆ ತಗಾದೆ ಕೊಟ್ಟಿದ್ದೇವೆ. ಅಲ್ಲಿ ಹಣ ಇಲ್ಲದೆ ಯಾವ ಅಭಿವೃದ್ಧಿ ಕಾರ್ಯಗಳನ್ನೂ ಸಹ ತೀವ್ರವಾಗಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲದೇ ಇದ್ದ ಹಾಗೆ ಇದೆ. ಆದರೂ ಕೂಡ ಈ ಬಗ್ಗೆ ಸರ್ಕಾರದವರು ಕೊಡುವಂಥಾ ಹಣದಲ್ಲಿ ಏನು ಒಂದು ನೀತಿ ಇಟ್ಟುಕೊಂಡಿದ್ದಾರೆ ಅದಕ್ಕೆ ಇದು ಸ್ವಲ್ಪ ವಿರುದ್ಧವಾಗಿದೆ ಎಂದು ನನಗೆ ಅನಿಸಿಕೆಯಾಗಿದೆ. ಅದು ಏನೇ ಇರಲಿ ನಮಗೆ ಈಗ ೧೦-೧೫ ಪರ್ಸೆಂಟ್ ಹಣ ಏನು ಕಡಿಮೆ ಕೊಟ್ಟಿದ್ದೀರೋ ಅದನ್ನು ಕೂಡಿಸಿ ಕೊಡಬೇಕು ಎಂದು ಕೇಳುತ್ತೇನೆ ಇನ್ನು ಮೈಸೂರು ನಗರ ಕಾರ್ಪೊರೇಷನ್ ಆಕ್ಟ್ರಾಯಿ ಕಾಂಪನ್ಸೇಷನ್ ಬಗ್ಗೆ ಎರಡು ಮಾತುಗಳನ್ನು ತಿಳಿಸುವುದಕ್ಕೆ ಇಚ್ಛಿಸುತ್ತೇನೆ.

ಅವರು ಈ ಒಂದು ಸಂಶಯವನ್ನು ಉತ್ತರದಲ್ಲಿ ಹೇಳಬಹುದು ಎಂದು ತಿಳಿದುಕೊಂಡಿದ್ದೇನೆ. ಒಂದು ವೇಳೆ ಈ ಮುನಿಸಿಪಾಲಿಟಿಯವರು ಸಾಲ ಏನಾದರೂ ತೆಗೆದುಕೊಂಡಿದ್ದರೆ ಅದನ್ನು ವಜಾ ಮಾಡಿಕೊಂಡು ಇಷ್ಟು ಹಣವನ್ನು ಅಂದರೆ ೯೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಈ ರಿಪೋರ್ಟ್‌ನಲ್ಲಿ ಹೇಳಬೇಕಾಗಿತ್ತು. ಈ ರಿಪೋರ್ಟ್‌ನಲ್ಲಿ ಏನು ಕೊಟ್ಟಿದ್ದಾರೆ ಎಂದರೆ ಕಾಂಪನ್ಸೇಷನ್ ಅಂತ ಹೇಳಿ ಈ ಕಾರ್ಪೋರೇಷನ್ ಹೆಸರುಗಳ ಒಂದು ಪಟ್ಟಿಯನ್ನು ಮಾಡಿದ್ದಾರೆ. ಅದರಲ್ಲಿ ಈ ರೀತಿ ಇದೆ. They have prepared a list mentioning the names of the Corporations who acquired grants to compensate the loss of Octroi. ಅಂತ ಇದೆ.

ಆ ಸಾಲ ವಜಾ ಮಾಡಿದೆಯೆಂದು ಎಲ್ಲೂ ಕಾಣಿಸಿಲ್ಲ. ಅದನ್ನು ಕಾಣಿಸಿದ್ದಿದ್ದರೆ ಮತ್ತೆ ಅದನ್ನು ಹೇಳುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಮೈಸೂರು ನಗರದಲ್ಲಿ ಅವರಿಗೆ ಹಣದ ಕೊರತೆ ಇರುವುದರಿಂದ ಈ ಸಾಲವನ್ನು ವಜಾ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ಆದಷ್ಟು ಬೇಗ ಅದನ್ನು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ಈ ೧೯೮೨ನೇ ಸಾಲಿಗೆ ಮೈಸೂರು ನಗರದಲ್ಲಿ ಕನ್ನಡ ವಿಶ್ವ ಸಮ್ಮೇಳನವನ್ನು ಮಾಡಬೇಕು ಎಂದು ಸರ್ಕಾರದ ಒಂದು ನಿರ್ಣಯವಿದೆ. ಈ ಕನ್ನಡ ವಿಶ್ವ ಸಮ್ಮೇಳನದ ಕಾರ್ಯಕ್ರಮವನ್ನು ಜರುಗಿಸುವುದಕ್ಕೆ ನಮ್ಮ ಮೈಸೂರು ನಗರವನ್ನು ಮುಖ್ಯ ಸ್ಥಳವನ್ನಾಗಿ ಸರ್ಕಾರದವರು ಮಾಡಿಕೊಂಡಿದ್ದಾರೆ. ಈ ಕನ್ನಡ ವಿಶ್ವಸಮ್ಮೇಳನಕ್ಕೆ ಹೊರಗಿನಿಂದ ಸಾಕಷ್ಟು ಜನರು ಬರುತ್ತಾರೆಂದು ಇದರಿಂದ ನಮಗೆ ಗೊತ್ತಾಗುತ್ತಿದೆ. ಅವರು ಇಲ್ಲಿಗೆ ಬಂದು ನೋಡಿದಾಗ ನಿಜವಾಗಿಯೂ ಕೂಡ ಮೈಸೂರು ನಗರ ಒಂದು ಮಾದರಿಯಾದ ನಗರ ಎಂದು ಅವರು ಹೇಳುವಂತಿರಬೇಕು, ಹಿಂದೆ ಮೈಸೂರಿಗೆ ಮಾದರಿಯಾದ ನಗರ ಎನ್ನತಕ್ಕಂಥ ಹೆಸರು ಇತ್ತು. ಈಗ ಹಣದ ಮುಗ್ಗಟ್ಟಿನಿಂದ ಅಲ್ಲಿ ಕೆಲವು ದುರಸ್ತಿ ಕೆಲಸಕಾರ್ಯಗಳು ಜಾಗ್ರತೆ ಆಗದೇ ಇರುವುದರಿಂದ ಮೊದಲು ಅದಕ್ಕೆ ಏನೊಂದು ಹೆಸರು ಇತ್ತೋ ಒಳ್ಳೆಯ ನಗರ, ಮಾದರಿ ನಗರ ಎಂದು—ಅದು ಸ್ವಲ್ಪ ಕುಂಠಿತವಾಗಿದೆ. ಈ ಸಂದರ್ಭದಲ್ಲಾದರೂ ಕೂಡ ದುರಸ್ತಿ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸರ್ಕಾರದವರು ಸೂಕ್ತವಾಗಿ ಯೋಚನೆ ಮಾಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಸುಮಾರು ೧೦ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟು ಅಲ್ಲಿ ದುರಸ್ತಿ ಕಾರ್ಯಕ್ರಮಗಳನ್ನು, ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದರೆ ನಮಗೆ ಒಳ್ಳೆಯ ಹೆಸರು ಬರುತ್ತದೆ. ಈ ಕನ್ನಡ ವಿಶ್ವ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರು ನಗರಕ್ಕೆ ರಾಜ್ಯದ ನಾನಾ ಭಾಗಗಳಿಂದ ಜನರು ಬರುತ್ತಾರೆ. ಮೈಸೂರು ನಗರದಲ್ಲಿ ಹರಿಜನರು ವಾಸ ಮಾಡುತ್ತಾ ಇರತಕ್ಕಂಥ ಸ್ಥಳ ಪ್ರತ್ಯೇಕವಾಗಿ ಇರುತ್ತದೆ. ಅದು ಅಶೋಕಪುರಂ. ಇದಲ್ಲದೇ ಗಾಂಧಿನಗರ, ಕೈಲಾಸಪುರಂ, ಗೋಕುಲ, ಪಡುವಾರಹಳ್ಳಿ, ಕುಂಬಾರಕೊಪ್ಪಲು ಮತ್ತು ಇನ್ನೂ ಅನೇಕ ಸ್ಥಳಗಳು ಇವೆ, ಆ ಸ್ಥಳಗಳಲ್ಲಿ ಹೆಚ್ಚಿನ ಇಂಪ್ರೂವ್‌ಮೆಂಟ್ ಆಗಿಲ್ಲ. ಅದನ್ನು ಇಂಪ್ರೂವ್ ಮಾಡುವುದಕ್ಕಾಗಿ ಸಾಕಷ್ಟು ದುಡ್ಡನ್ನು ಇಲ್ಲಿಯವರೆಗೆ ಖರ್ಚು ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ ಕನ್ನಡ ವಿಶ್ವಸಮ್ಮೇಳನ ನಡೆಸುವ ಈ ಸಂದರ್ಭವನ್ನು ಉಪಯೋಗಿಸಿಕೊಂಡು ಇದಕ್ಕಾಗಿ ಹೆಚ್ಚಿನ ಹಣವನ್ನು ಕೊಟ್ಟು ಈ ಸ್ಥಳಗಳನ್ನೆಲ್ಲಾ ಕೂಡ ಅಭಿವೃದ್ಧಿಪಡಿಸಬೇಕು, ಹೊರಗಿನಿಂದ ಬರತಕ್ಕಂಥ ಡೆಲಿಗೇಟ್ಸ್ ಇದನ್ನೆಲ್ಲಾ ನೋಡಿ ಮೆಚ್ಚುವ ರೀತಿಯಲ್ಲಿ ಈ ಕೆಲಸವನ್ನು ಮಾಡಬೇಕು. ಈ ಮೈಸೂರು ನಗರಕ್ಕೆ ಸಂಬಂಧಪಟ್ಟಂತೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಎಷ್ಟರಮಟ್ಟಿಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಿದ್ದಾರೆ ಎಂದು ಅವರೆಲ್ಲಾ ಆಶ್ಚರ್ಯಚಕಿತರಾಗುವಂತಿರಬೇಕು. ನಾವು ಇವತ್ತಿನ ದಿವಸ ಹರಿಜನರು ವಾಸಮಾಡುತ್ತಿರತಕ್ಕಂಥ ಬಡಾವಣೆಗಳಿಗೆ ಹೋಗಿ ನೋಡುವುದಾದರೆ ಅಲ್ಲಿನ ಪರಿಸ್ಥಿತಿ ನಿಜಕ್ಕೂ ಶೋಚನೀಯ. ಈ ದೃಷ್ಟಿಯಿಂದ ಇದಕ್ಕಾಗಿ ಹೆಚ್ಚಿನ ಹಣವನ್ನು ಕೊಟ್ಟು ಈ ಕೊಳಚೆ ಪ್ರದೇಶ ಇರತಕ್ಕಂಥ ಕಡೆಗಳಲ್ಲಿ ಮತ್ತು ಹೆಚ್ಚಾಗಿ ಈ ಹರಿಜನರು ಗಿರಿಜನರು ವಾಸ ಮಾಡುತ್ತಿರತಕ್ಕಂಥ ಸ್ಥಳಗಳಲ್ಲಿ ಆ ಹಣವನ್ನು ಖರ್ಚುಮಾಡಿ ನಮ್ಮಲ್ಲಿ ಬೇರೆ ಬೇರೆ ಸ್ಥಳಗಳು ಎಷ್ಟು ಚೆನ್ನಾಗಿದೆಯೋ ಅದೇ ಮಟ್ಟಕ್ಕೆ ಅವನ್ನೆಲ್ಲಾ ತರುವುದಕ್ಕೆ ಈ ದುರಸ್ತಿ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಸರ್ಕಾರದವರಿಗೆ ಸಲಹೆಯನ್ನು ಕೊಡುವುದಕ್ಕೆ ಬಯಸುತ್ತೇನೆ, ಮತ್ತೆ ಈ ಲ್ಯಾಂಡ್ ಅಕ್ವಿಜಿಷನ್ ಬಗ್ಗೆ ಹೇಳಬೇಕಾದರೆ ಈ ಲ್ಯಾಂಡ್ ಅಕ್ವಿಜಿಷನ್ ಯಾವಾಗ ಯಾವ ಸಂದರ್ಭದಲ್ಲಿ ಆಗುತ್ತದೆ ಎಂಬುದು ತಮಗೆ ಗೊತ್ತು. ನಗರ ಬಡಾವಣೆ ಮಾಡತಕ್ಕಂಥ ಸಂದರ್ಭದಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಗಬೇಕು. ಬಿಡಿಎ ಅವರಾಗಲೀ, ಕಾರ್ಪೋರೇಷನ್

ನವರಾಗಲೀ, ಸಿಐಟಿಬಿ ಯವರಾಗಲೀ, ಮುನಿಸಿಪಾಲಿಟಿಯವರಾಗಲೀ ಅಕ್ವಿಜಿಷನ್ ಮಾಡತಕ್ಕಂಥ ಸಂದರ್ಭದಲ್ಲಿ ಏನು ಮಾಡುತ್ತಾರೆ. ಯಾವ ಉದ್ದೇಶದಿಂದ ಅಕ್ವಿಜಿಷನ್ ಮಾಡುತ್ತಾರೆ ಎಂಬುದು ನಮಗೆ ಗೊತ್ತಾಗುವುದಿಲ್ಲ. ಲ್ಯಾಂಡ್ ಅಕ್ವಿಜಿಷನ್ ಆದಮೇಲೆ ಲೇಔಟ್ ಮಾಡಿ ಕಾಂಪ್ರಹೆನ್ಸಿವ್ ಆಗಿ ಸಮಗ್ರವಾಗಿ ಬಡಾವಣೆ ಮಾಡಬೇಕು. ಅಥವಾ ನಗರ ಬಡಾವಣೆ ಮಾಡಬೇಕೆಂದು ಹೇಳಿ ಅವರು ಕೆಲವಾರು ಯೋಜನೆಗಳನ್ನು ಹಾಕಿಕೊಳ್ಳುತ್ತಾರೆ. ಹಾಗೆ ಯೋಜನೆ ಹಾಕಿಕೊಳ್ಳುವ ಸಂದರ್ಭದಲ್ಲಿ ನೋಟಿಫಿಕೇಷನ್ ಇಷ್ಯೂ ಮಾಡುತ್ತಾರೆ, ಇದರಲ್ಲಿ ಮಧ್ಯೆ ಮಧ್ಯೆ ಕೆಲವು ಸರ್ವೆ ನಂಬರುಗಳನ್ನು ಬಿಟ್ಟುಬಿಟ್ಟಿರುತ್ತಾರೆ. ಹೀಗೆ ಬಿಡುವುದರಿಂದ ೩-೪ ವರ್ಷಗಳಲ್ಲಿ ಅಂತರ ಜಾಸ್ತಿಯಾಗುತ್ತದೆ. ಲ್ಯಾಂಡನ್ನು ಪೂರ್ಣವಾಗಿ ಅಕ್ವೈರ್ ಮಾಡಿಕೊಂಡಿದ್ದರೂ ಮಧ್ಯೆ ಮಧ್ಯೆ ಕೆಲವು ಸರ್ವೆ ನಂಬರುಗಳನ್ನು ಬಿಟ್ಟುಬಿಡುವುದರಿಂದ ಅದು ನಮ್ಮ ಕೈಗೆ ಬರುವುದಕ್ಕೆ ತಡವಾಗುತ್ತದೆ ಮತ್ತು ಕೆಲಸ ಕಾರ್ಯಗಳಲ್ಲಿ ತಡವಾಗುತ್ತದೆ, ಆ ಮೇಲೆ ಅದನ್ನು ಅವರು ಗಮನಕ್ಕೆ ತೆಗೆದುಕೊಂಡು ಅದನ್ನು ಸರಿಪಡಿಸುವ ಹೊತ್ತಿಗೆ ಮತ್ತೆ ಪ್ರಿಲಿಮಿನರಿ ನೋಟಿಫಿಕೇಷನ್ ಆಗಬೇಕಾದರೆ ೩-೪ ವರ್ಷ ಕಳೆದಿರುತ್ತದೆ. ಪುನಃ ಅದರ ಮೌಲ್ಯ ಜಾಸ್ತಿಯಾಗಿಬಿಡುತ್ತದೆ. ಇದನ್ನು ಎಗ್ಜಾಮಿನ್ ಮಾಡಬೇಕು. ಇಂತಹ ತೊಂದರೆಗಳನ್ನು ತಪ್ಪಿಸಬೇಕಾದರೆ ಲ್ಯಾಂಡ್ ಅಕ್ವಿಜಿಷನ್ ಮಾಡತಕ್ಕಂಥ ಸಂದರ್ಭದಲ್ಲಿ ಲ್ಯಾಂಡ್ ಅಕ್ವಿಜಿಷನ್ ಆಫೀಸರ್‌ರವರು ಇದರಲ್ಲಿ ಸರಿಯಾಗಿ ವ್ಯವಹಾರ ಮಾಡಿದ್ದಾರೆಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡಬೇಕು. ಅಲ್ಲಿ ಎಲ್ಲಾ ಸರ್ವೆ ನಂಬರುಗಳನ್ನು ಸೇರಿಸಿದ್ದಾರೆಯೋ ಅಥವಾ ಬಿಟ್ಟಿದ್ದಾರೆಯೋ ಎನ್ನತಕ್ಕಂಥಾದ್ದನ್ನು ಎಗ್ಜಾಮಿನ್ ಮಾಡುವುದಕ್ಕೆ ಸರ್ಕಾರ ತೀವ್ರ ಗಮನಹರಿಸಬೇಕು. ಇಂತಹ ಒಂದು ಸಂದರ್ಭ ಏನಾದರೂ ಉಂಟಾಗತಕ್ಕಂಥಾದ್ದು ಇದ್ದರೆ ಅದು ಆಗಬಾರದು ಎಂದು ನಾನು ಸಲಹೆ ಕೊಡುತ್ತೇನೆ. ಆಮೇಲೆ ಮಧ್ಯೆ ಮಧ್ಯೆ ಈ ಬಡಾವಣೆಗಳನ್ನು ಮಾಡುವಾಗ, ಅಕ್ವಿಜಿಷನ್ ಮಾಡುವಾಗ ಸಿಐಟಿಬಿ ಯವರಾಗಲೀ, ಬಿಡಿಎ ಅವರಾಗಲೀ ಈ ಬಗ್ಗೆ ಅಭಿವೃದ್ಧಿ ಕಾರ್ಯವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಬಡಾವಣೆ ಆದಾಗ ಕೊನೇ ಲೈನ್‌ನಲ್ಲಿ ಕೊನೆಯವರೆಗೆ ಡೆವಲಪ್‌ಮೆಂಟ್ ಮಾಡುತ್ತಾರೆ. ಅದರ ಪಕ್ಕದಲ್ಲಿರತಕ್ಕಂಥ ಜಮೀನ್ದಾರರು ನಮ್ಮದು ಡೆವಲಪ್‌ಮೆಂಟ' ಆಗಿದೆ ಎನ್ನುವ ಅಭಿಪ್ರಾಯದಲ್ಲಿ ನೀವೇನು ಬೆಟರ್‌ಮೆಂಟ್ ಲೆವಿಯನ್ನು ಹಾಕುತ್ತೇವೆಂದು ಹೇಳುತ್ತೀರಿ ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಅವರು ಪ್ರಯತ್ನ ಪಡುತ್ತಾರೆ. ಆದ್ದರಿಂದ ಈ ಬಗ್ಗೆ ನನ್ನ ಸಲಹೆ ಏನೆಂದರೆ ಬಡಾವಣೆ ಮಾಡುವಾಗ ಅರ್ಧ ಮೈಲಿತನಕ ಡೆವೆಲಪ್‌ಮೆಂಟ್ ಮಾಡಿದರೆ, ಅಕ್ವೈರ್ ಮಾಡಿದಂಥ ಜಮೀನನ್ನು ಸಂಪೂರ್ಣವಾಗಿ ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡರೆ ಬಡಾವಣೆಯ ಬಾಜೂನಲ್ಲಿ ಅದರ ಅನುಕೂಲ ಪಡೆದು ಯಾರೂ ಡೆವೆಲಪ್‌ಮೆಂಟ್ ಮಾಡುವುದಕ್ಕೆ ಅವಕಾಶವಿರುವುದಿಲ್ಲ ಮತ್ತು ಅವರು ಸುಮ್ಮಸುಮ್ಮನೆ ಹಣಕಾಸಿನ ಒಂದು ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವುದಕ್ಕೆ ವೈಯಕ್ತಿಕವಾಗಿ ಪ್ರಯತ್ನ ಪಡತಕ್ಕಂಥ ಕಾರ್ಯವೂ ಕೂಡ ಕಡಿಮೆಯಾಗುತ್ತದೆ. ಈ ಒಂದು ದೃಷ್ಟಿಯಿಂದ ನೀವು ಹೆಚ್ಚಾಗಿ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳಬೇಕು. ಮತ್ತು ಅದನ್ನು ಡೆವೆಲಪ್‌ಮೆಂಟ್ ಮಾಡುವಾಗ ಸಾಕಷ್ಟು ಅಂತರವನ್ನು ಬಿಟ್ಟಿರಬೇಕು. ಅರ್ಧ ಫರ್ಲಾಂಗ್ ಅಥವಾ ಕಾಲು ಫರ್ಲಾಂಗ್‌ನಷ್ಟು ನಿಮ್ಮ ಜಮೀನು ಇದು ಮುಂದಕ್ಕೆ ಅನ್‌ಡೆವಲಪ್ಡ್ ಲ್ಯಾಂಡನ್ನು ಅಕ್ವೈರ್ ಮಾಡುವಾಗ ಅದೇ ರೀತಿ ಮಾಡಿಕೊಂಡು ಹೋಗುತ್ತಾ ಇದ್ದರೆ ಈ ಪ್ರೈವೇಟ್ ಓನರ್ಸ್‌ಗೆ ಇದರಲ್ಲಿ ಪ್ರವೇಶ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಇದನ್ನು ಸಿಐಟಿಬಿಯವರು ನೋ ಲಾಸ್ ಅಂಡ್ ನೋ ಪ್ರಾಫಿಟ್ ಬೇಸಿಸ್ ಮೇಲೆ ಮಾಡತಕ್ಕಂಥಾದ್ದು ಇದೆ. ಇದಕ್ಕೆ ಸರ್ಕಾರದಿಂದ ಹಣ ಖರ್ಚಾಗುವುದಿಲ್ಲ. ನೀವು ಏನಿದ್ದರೂ ಈ ಯೋಜನೆಗಳಿಗೆ ಮಂಜೂರಾತಿ ಕೊಡುತ್ತೀರೇ ಹೊರತು ಹಣವನ್ನು ಕೊಡುವುದಿಲ್ಲ. ಈ ದೃಷ್ಟಿಯಿಂದ ಅದಕ್ಕೆ ಅವಕಾಶವಿದೆ. ಆದ್ದರಿಂದ ಸಿಐಟಿಬಿಯವರಾಗಲೀ ಬಿಡಿಎಯವರಾಗಲೀ ಸರಿಯಾಗಿ ಕೆಲಸಕಾರ್ಯಗಳನ್ನು ಮಾಡಿದ್ದೇ ಆದರೆ ಈ ಕಾರ್ಯವನ್ನು ಮಾಡಬಹುದು. ಅದನ್ನು ಅವರು ಯೋಚನೆ ಮಾಡಿ ಮಾಡಬೇಕು. ಇದನ್ನು ನಾನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಮತ್ತೆ ನಮ್ಮ ಮೈಸೂರು ನಗರದಲ್ಲಿ ಒಂದು ಸಿಟಿ ಸೆಂಟರ್ ಕಾಂಪ್ಲೆಕ್ಸ್ ಎಂದು ಹೇಳಿ ೧೯೭೦-೭೧ರಲ್ಲಿ ಆರಂಭವಾಯಿತು. ಅಲ್ಲಿ ೧೦-೧೧ ವರ್ಷದಿಂದ ವಿಶ್ವೇಶ್ವರಯ್ಯ ಭವನ ಎಂದು ಇದೆ. ಮತ್ತು ಕೆ.ಆರ್. ಸರ್ಕಲ್ ಅಂತ ಇದೆ, ಅದರ ಹಿಂಭಾಗದಲ್ಲಿ ೨ ಕೋಟಿ ೪೪ ಲಕ್ಷ ರೂಪಾಯಿಗಳ ಆ ಒಂದು ಯೋಜನೆಯನ್ನು ಮಾಡಬೇಕೆಂದಿದ್ದಾರೆ. ಅದನ್ನು ೧೦-೧೧ ವರ್ಷದಿಂದ ಕೇವಲ ಲ್ಯಾಂಡ್ ಅಕ್ವಿಜಿಷನ್‌ಗೆ ೧೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದು ಇದೆ ಅಂತ ಹೇಳಿ ಒಂದಲ್ಲ ಒಂದು ಕಾರಣದಿಂದ ಅದನ್ನು ಮುಂದೂಡುತ್ತಾ ಬರುತಿ

ದ್ದಾರೆ. ಅದನ್ನು ತೀವ್ರಗತಿಯಿಂದ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ. ಏಕೆಂದರೆ ೧೦ ವರ್ಷದ ಹಿಂದೆ ಈ ಒಂದು ಕಾರ್ಯಕ್ರಮವನ್ನು ಜರುಗಿಸಿದ್ದಿದ್ದರೆ ಎಷ್ಟೋ ಲಕ್ಷ ರೂಪಾಯಿಗಳ ಖರ್ಚು ಕಡಿಮೆಯಾಗುತ್ತಿತ್ತು. ಈ ೧೦ ವರ್ಷದಿಂದ ಕೂಡ ವರ್ಷೇವರ್ಷೇ ಈ ಪಿಡಬ್ಲ್ಯೂಡಿಯವರು ರೇಟ್ಸನ್ನು ರಿವೈಸ್ ಮಾಡುತ್ತಾರೆ, ಕಾಸ್ಟ್ ಆಫ್ ಷೆಡ್ಯೂಲ್ಡ್ ರೇಟ್ಸನ್ನು ೨೫ ಪರ್ಸೆಂಟ್‌ನಷ್ಟು ಜಾಸ್ತಿ ಮಾಡಿಕೊಂಡು ಹೋಗುತ್ತಿರುತ್ತಾರೆ. ಇದರ ಜೊತೆಗೆ ಇನ್ನೂ ಬೇರೆ ಬೇರೆ ಕಾರಣಗಳಿಂದ ಇದನ್ನು ಜಾಸ್ತಿ ಮಾಡುತ್ತಿರುತ್ತಾರೆ. ಇದು ಆಗಬಾರದು ಎಂದು ಹೇಳುತ್ತೇನೆ. ಇದನ್ನು ಮುಂದುವರಿಸದೇ ಆದಷ್ಟು ಬೇಗ ಈ ಒಂದು ಕಾರ್ಯ ಬೇಗ ಆಗಬೇಕು ಎಂದು ನಾನು ಮಾನ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸೈಟುಗಳನ್ನು ವಿಲೇ ಮಾಡುವಾಗ ನಮ್ಮ ಡಿಮ್ಯಾಂಡ್ ಏನಿದೆ ಅದನ್ನು ಖಂಡಿತವಾಗಿಯೂ ಗಮನಕ್ಕೆ ತೆಗೆದುಕೊಳ್ಳಬೇಕು. ನಾನು ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮ ಮೈಸೂರು ನಗರದಲ್ಲಿ ಬಡ್‌ಮಖಾನ್, ಘೋಷಿಯಾನಗರ ಮತ್ತು ಅಲೀಮ್ ನಗರ ಎಂದು ಇದೆ. ಅಲ್ಲಿ ಜನರು ಅವರವರೇ ಗುಡಿಸಲುಗಳನ್ನು ಹಾಕಿಕೊಂಡು ಸುಮಾರು ೩೦೦–೪೦೦ ಮನೆಗಳು ಅಲ್ಲಿ ಡೆವಲಪ್ ಆಗಿವೆ. ಅದನ್ನು ನಾನು ವಿರೋಧ ಮಾಡುತ್ತಾ ಇಲ್ಲ. ಆ ಜನರಿಗೆ ಜಾಗ ಇಲ್ಲದೇ ಹೋದರೆ ಎಲ್ಲಿ ಜಾಗ ಇದೆ ಅಲ್ಲಿ ಗುಡಿಸಲುಗಳನ್ನು ಹಾಕಿಕೊಳ್ಳುತ್ತಾರೆ. ಅದು ಮನುಷ್ಯನ ಸ್ವಭಾವ. ಆದರೂ ಕೂಡ ನಾವು ಆಡಳಿತ ನಡೆಸತಕ್ಕಂಥ ಜನ ಆ ಸ್ವಭಾವವನ್ನು ಗಮನದಲ್ಲಿಟ್ಟುಕೊಂಡು ಜನರ ಡಿಮ್ಯಾಂಡ್ ಏನಿದೆ ಅದನ್ನೂ ಗಮನದಲ್ಲಿಟ್ಟುಕೊಂಡು ತೀವ್ರಗತಿಯಿಂದ ಹೆಚ್ಚು ಹೆಚ್ಚಾಗಿ ಈ ಸೈಟುಗಳನ್ನು ಮಾಡಿ ಕೊಡುವುದಾದರೆ ಮುಂದೆ ಇಂತಹ ಒಂದು ಅವಕಾಶ ಅವರಿಗೆ ಬರುವುದಿಲ್ಲ. ನಾವು ಏನು ಮಾಡುತ್ತೇವೆ ಎಂದರೆ ಅನ್‌ಆತರೈಸ್ಡ್ ಕಂಸ್ಟ್ರಕ್ಷನ್ ಮಾಡಿದ್ದನ್ನು ಹೊಡೆದು ಹಾಕುವುದಕ್ಕೆ ಹೋಗುತ್ತೇವೆ. ಅಲ್ಲಿ ಅನ್‌ಆತರೈಸ್ಡ್ ಕಂಸ್ಟ್ರಕ್ಷನ್ ಮಾಡುವುದಕ್ಕೆ ಅವಕಾಶ ಕೊಡುವವರು ಯಾರು? ನಾವೇ. ಆದ್ದರಿಂದ ಅವರ ಡಿಮ್ಯಾಂಡ್ ಏನಿದೆ ಅದರ ಪ್ರಕಾರ ಎಲ್ಲರಿಗೂ ಸೈಟ್‌ಗಳನ್ನು ರಿಲೀಸ್ ಮಾಡಿ ಕೊಡದೇ ಹೋದರೆ ಸರಿ ಹೋಗುವುದಿಲ್ಲ. ಮತ್ತೆ ಆ ಸೈಟುಗಳನ್ನು ಸೆಗ್ರಿಗೇಟ್ ಮಾಡುತ್ತಿದ್ದಾರೆ. ಹರಿಜನರು–ಗಿರಿಜನರು ಪ್ರತ್ಯೇಕವಾಗಿ ವಾಸ ಮಾಡಬೇಕು ಎನ್ನತಕ್ಕಂಥ ಅಭಿಪ್ರಾಯ ಮನಸ್ಸಿನಲ್ಲಿ ಏನಿದೆ ಅದರಂತೆ ಬಡಾವಣೆ ಮಾಡುವಾಗ ಅದು ಆಗಬಾರದು, ಇಂತಹ ಕಡೆ ಹರಿಜನರಿಗೆ, ಇಂತಹ ಕಡೆ ಗಿರಿಜನರಿಗೆ. ಇಂತಹ ಕಡೆ ಒಕ್ಕಲಿಗರಿಗೆ, ಇಂತಹ ಕಡೆ ಬ್ರಾಹ್ಮಣರಿಗೆ ಸೈಟ್ ಕೊಡಬೇಕು ಎನ್ನುವ ಸಂದರ್ಭ ಏನಿದೆ ಅದನ್ನು ಉಂಟುಮಾಡಿಕೊಳ್ಳಬಾರದು. ಕಾಸ್ಮೊಪಾಲಿಟನ್ ಟೈಪ್‌ನಲ್ಲಿ ಬಡಾವಣೆಗಳು ಬೆಳೆಯಬೇಕು. ಅದರಲ್ಲಿ ಎಲ್ಲರಿಗೂ ಅವಕಾಶ ಮಾಡಿಕೊಡಬೇಕು. ಇದು ಕಾರ್ಯಾಚರಣೆಯಲ್ಲಿ ಬರದೇ ಹೋದರೆ ಒಂದಲ್ಲ ಒಂದು ದಿವಸ ತೊಂದರೆಯಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಸೈಟ್ ಅಲಾಟ್‌ಮೆಂಟ್‌ಗೆ ನೀವು ನೇಮ್ಸ್ ಸೆಲೆಕ್ಟ್ ಮಾಡುತ್ತೀರಿ, ಆ ರೀತಿ ನೇಮ್ಸ್ ಸೆಲೆಕ್ಟ್ ಮಾಡುವಾಗ ಇಂತಹವರಿಗೆ ಇಂತಹ ಕಡೆ ಕೊಡಬೇಕು ಎಂಬುದಾಗಿ ನಿರ್ಧಾರ ಮಾಡದೇ ಯಾರಿಗೆ ಎಲ್ಲಿಯಾದರೂ ಬರಲಿ ೧೦೦ ಜನಕ್ಕೆ ಲಾಟರಿ ಎತ್ತಿಬಿಟ್ಟು ಹರಿಜನರೇ ಮಧ್ಯ ಬರಲಿ ಅಥವಾ ಸವರ್ಣೀಯರೇ ಮಧ್ಯ ಬರಲಿ ಅವರೆಲ್ಲರಿಗೂ ಸೈಟ್‌ಗಳನ್ನು ಕೊಡಬೇಕು ಈ ರೀತಿ ಕಾಸ್ಮೊಪಾಲಿಟನ್ ಟೈಪ್‌ನಲ್ಲಿ ಬಡಾವಣೆಗಳು ಬೆಳೆಯಬೇಕು. ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತಾ, ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

1-30 p.m.

ST. JOHN SINCLAIR MARLEY (Nominated).— Hon'ble Speaker Sir, In rising to support the demands which are before this august House, I have certain observations to make. I thank you for the opportunity given to me to speak on them. First I am very pleased to see that the Municipal Elections are due to be held in November and this is a sort of surety in view of the statement made

by the hon. Minister some months ago that these elections will be held in November. There are a number of hon. Members who seem to have been very agitated about this matter. So I am very pleased that this most important point is now going to be effectively carried out.

The second point I would like to make out is about the street lights. I find from the Report that an amount of Rs. 4 crores is to be spent on improving the street lights. But I just cannot understand this because in the Report it says that the finance of the Municipalities in general are in a poor shape. This, to me, seems a sort of contradiction. On the one hand they are saying that they do not have enough money and on the other hand they are wanting to invest a sum of Rs. 4 crores on street lighting. What is the reason for this? A reference is made about the road from the Airport. I remember very clearly that when the lights were fitted from Domlur to Airport, they were excellent because they were burning. I do believe, if you drive down right now, you will find at least 50% of the lights out of order. I should like to suggest here that you certainly do improve the street lights, but before going in for all these elaborate lights, why don't we see that the Department that is responsible for the correct functioning of the lights, do their job? Even if you drive around the city at night, you see some of the beautiful lights which are not functioning. Why should we spend money unnecessarily to put up mercury vapour lamps or this type of lamps and that type of lamps and they could be put into good working order? I would like to digress here. Just look the lighting here, in the House, We find nothing wrong with it. Why can't we do the same thing for the people on the streets? I would suggest that before this large sum of money is expended, certain care must be taken to find out what is the reason, why our street lights are not burning and put them into good working order.

In regard to our roads. Here, I find that indiscriminately the Posts & Telegraphs Department and the Karnataka Electricity Board, within two weeks after a new Road is laid, start digging up. Or, it is even the Sewerage Department. Is there a lack of co-operation

between these Departments? Is there some short of planning that when a road is to be laid they have to inform the other Departments about that? Could not there be some sort of cooperation between these various Departments so that the public are not put to inconvenience unnecessarily. When these roads are dug up in a aphazard manner, the earth is just put back and then it takes months for them, to be attend to. Is there any specific reason for this? Why not these roads be put into good use immediately? Why should they lie like this?

I should like to touch the next point, I think many people have spoken about it, and i.e., the high-rise buildings. A question was answered that the present Government is not responsible because these licences were issued by the previous Government. I am not against high rise buildings. But what I am really against is the indiscriminate manner in which sanction has been granted for these monstrosities in our fair City. You see that have got problems rearding your roads, water, electricity and sewerage. I am speaking from experience because I have my own house in contonment area and anybody can come over there and see there, nine of these monstrosities are coming up. And who is to suffer? We poor people. Who have come here the financiers from outside the State. Their only concern is one thing *i.e.*, making profit. They do not care about our people and the inconveniences we are being put to. It may be too late to withdraw these licences right now. I should like to make a suggestion. Why don't we restrict the height? One ground floor, first floor, second floor and third floor. Nothing more than that. Because, you are going to aggravate the situation as it is prevailing in the City today in so far as water and roads are concerned. I would request the Government to think seriously about this matter.

Now I am going to touch a subject that has been coming up very frequently and that is about abolition of Octroi. If the Government ever took a wise decision, it was when they took it to abolish Octroi. Many people here have spoken. But I wonder if the hon. Members who have spoken about Octroi had anything to do with it, the way it was recovered, the inconvenience put to the business community when it was in the City. I am pretty sure,

if they had known it, they would never speak to defend Octroi. I would appeal to the Government never to re-introduce it. It is out-moded. It is just obnoxious way of leaving taxes. I am sure if the Government have to get taxes, there must be many ways in which they could get it.

Now, water. This is another important point. I think this requires the highest priority. I know that there are certain schemes and they all require money—it may be I Stage, II Stage or III Stage, but can not the Government think of some way of giving this the highest priority and to see that something is done about the citizens getting enough water ? A question was raised here about muddy water and contamination. I do not want to talk of contamination because it was confirmed that leaking sewage pipe and leaking pipe water in some way or the othea got mixed up. But what I feel from what I have seen from the Bangalore Water Supply and Sewarage Department is that when they lay the pipes, nobody supervises the pipes before they are connected. Invaribly they attach the pipe with lot of earth and when the water flows through the pipe, naturally you and I get muddy water in our taps. It is a very simple matter. There are Supervisors who should see that when once pipes are connected, any extraneous matter that is inside there pipes should be removed. After all it is only 16 feet. Each one should be cleaned before it is connected up and I am sure here would be no complaints about Muddy and dirty water.

My last point is about beggars. I do not know what we intend to do about this menace. I should call it is a menace because I feel that these people are infiltrated from other States because the Government are giving some sort of help to beggars. There are people coming in from other states and especially the unfortunate leper patients. Something must be done not to allow these patients to roam about the City. They are sleeping in our Market place and they are squatting on high ways. People say ' they are unfortunates.' Certainly, but cannot something be done by the Government to put a stop to this? There are many sanatorium where these people can be kept. You will notice that every Friday they come in groups but I do not know from where they are coming. It is unfortunate that the Government is not concerned about these poor people. I think the Government should really consider this very very seriously and

see that something is done. I think I have said that this is my last point. I hope you would permit me to raise one thing. This is only a suggestion. This is with regard to the appointment of Administrator, when the Corporation is superseded. Tremendous powers are vested in one single man. I would like to suggest to the Government that when an opportunity like this arises, for the appointment of Administrator, would they consider appointing an Advisory Body to help the Administrator in the execution of his duties? With these few words, I thank you for the opportunity given to me.

ಶ್ರೀ ಕೆ. ಲಕ್ಷ್ಮಣ್ (ಗಾಂಧಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಗರಾಭಿವೃದ್ಧಿ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವಂತಹ ೩೦, ೩೧ ಹಾಗೂ ೩೨ನೇ ನಂಬರ್ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸಿ ಕೆಲವು ಸಲಹೆಗಳನ್ನು ಕೊಡಲು ಇಷ್ಟಪಡುತ್ತೇನೆ. ಇಲ್ಲಿ ೩ ಬೇಡಿಕೆಗಳನ್ನೂ ಸೇರಿಸಿ ಒಟ್ಟು ೬೫.೨೧ ಕೋಟಿ ರೂ, ಗಳನ್ನು ಕೇಳಿದ್ದಾರೆ. ಈ ಹಣ ಕರ್ನಾಟಕ ರಾಜ್ಯದ ನಗರಾಭಿವೃದ್ಧಿ ಕೆಲಸಕಾರ್ಯಗಳಿಗೋ ಅಥವಾ ನೌಕರರ ಸಂಬಳಸಾರಿಗೆಗೋ ಎಂದು ಕಂಡುಹಿಡಿಯುವುದು ಕಷ್ಟವಾಗಿದೆ.

ಅಧ್ಯಕ್ಷರು.—ತಮಗೆ ಒದಗಿಸಿರುವ ದೊಡ್ಡ ಬಜೆಟ್ ಪುಸ್ತಕದಲ್ಲಿ ಯಾವಯಾವ ಬಾಬುಗಳಿಗೆ ಎಷ್ಟೆಷ್ಟು ಖರ್ಚು ಮಾಡಲಾಗುತ್ತದೆ ಎಂಬುದನ್ನು ತಿಳಿಸಿರುತ್ತಾರೆ. ಅದನ್ನು ತಾವು ಓದಿಕೊಂಡು ಬರಬೇಕು.

ಶ್ರೀ ಕೆ. ಲಕ್ಷ್ಮಣ್.—ಈ ವಾರ್ಷಿಕ ವರದಿಯಲ್ಲಿ ಅದನ್ನೆಲ್ಲಾ ಕೊಟ್ಟಿಲ್ಲ. ಆದಕಾರಣ ಇಲ್ಲಿ ಕೇಳಿರುವ ಹಣ ಸಿಬ್ಬಂದಿ ಖರ್ಚಿಗೋ ಅಥವಾ ಅಭಿವೃದ್ಧಿ ಕಾರ್ಯಗಳಿಗೋ ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತದೆ. ಒಟ್ಟಿನಲ್ಲಿ ಇಲ್ಲಿ ಕೇಳಿರುವ ೬೫ ಕೋಟಿ ರೂ. ಗಳು ಸಾಲದು. ೨೫೦ ಕೋಟಿ ರೂ. ಗಳನ್ನಾದರೂ ಒದಗಿಸಬೇಕು. ಏಕೆಂದರೆ, ನಗರಾಭಿವೃದ್ಧಿ ಮಂತ್ರಿಗಳಿಗೆ ಅಷ್ಟೊಂದು ಕೆಲಸವಿದೆ.

ಇನ್ನು ನಮ್ಮ ಬೆಂಗಳೂರು ನಗರಾಭಿವೃದ್ಧಿ ಬಗ್ಗೆ ಮತ್ತು ಏನೇನು ಕೆಲಸಗಳಾಗಿವೆ ಎಂಬ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇವೆ. ನಮ್ಮ ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಕಳೆದ ಒಂದೂವರೆ ವರ್ಷದಿಂದ ಸರಾಸರಿ ೩ ತಿಂಗಳುಗಳಿಗೆ ಒಬ್ಬರಂತೆ ಆಡಳಿತಾಧಿಕಾರಿಗಳು ಬರುತ್ತಿದ್ದಾರೆ. ಈ ಆಡಳಿತಾಧಿಕಾರಿಯವರ ಒಂದು ಕಾಲು ಕಾರ್ಪೊರೇಷನ್‌ನಲ್ಲಿದ್ದರೆ ಮತ್ತೊಂದು ಕಾಲು ವಿಧಾನಸೌಧದಲ್ಲಿರುತ್ತದೆ. ಇದರಿಂದ ಅವರು ಯಾವುದೇ ಒಂದು ನಿಗದಿಯಾದಂಥ ಕೆಲಸವನ್ನು ಸಕಾಲದಲ್ಲಿ ಮಾಡಲು ಸಾಧ್ಯವಾಗುತ್ತಿಲ್ಲ. ಅವರು ಬೆಳಿಗ್ಗೆಯಿಂದ ಸಾಯಂಕಾಲದವರೆಗೆ ಮೀಟಿಂಗ್‌ಗಳಲ್ಲಿಯೇ ಇರುತ್ತಾರೆ. ಇನ್ನು ಕೆಲಸಕಾರ್ಯಗಳು ಯಾವ ರೀತಿ ಆಗಬೇಕು ? ೩೧ ಲಕ್ಷ ಜನಸಂಖ್ಯೆ ಇರುವ ಬೆಂಗಳೂರು ನಗರಕ್ಕೆ ಒಬ್ಬ ಪೂರ್ಣ ಸಮಯವನ್ನು ವ್ಯಯ ಮಾಡತಕ್ಕಂಥ ಆಡಳಿತಾಧಿಕಾರಿಯನ್ನು ನೇಮಕ ಮಾಡುವುದಕ್ಕೆ ಈ ಸರ್ಕಾರಕ್ಕೆ ಇನ್ನೂ ಆಗಿಲ್ಲದಿರುವುದು ಶೋಚನೀಯವಾದಂಥಾ ವಿಷಯ.

ಇನ್ನು ಬೆಂಗಳೂರು ನಗರ ಕಾರ್ಪೊರೇಷನ್ ಅವರು ವಸೂಲಿ ಮಾಡುತ್ತಿದ್ದ ಆಕ್ಟ್ರಾಯನ್ನು ೨ ವರ್ಷಗಳ ಹಿಂದೆ ಈ ಹಿಂದಿನ ಸರ್ಕಾರ ರದ್ದುಪಡಿಸಿತು. ಅದರ ಪರಿಹಾರವಾಗಿ ೧೪ ಕೋಟಿ ರೂಪಾಯಿಗಳನ್ನು ಸರ್ಕಾರ ನಗದು ಕಾರ್ಪೊರೇಷನ್‌ಗೆ ಪ್ರತಿವರ್ಷವೂ ಕೊಡಬೇಕಾಗಿತ್ತು. ಆದರೆ ಕಳೆದ ಎರಡು ವರ್ಷಗಳಲ್ಲಿ ಒಂದು ಕಂತೂ ಸಹ ಸರಿಯಾಗಿ ಬಂದಿಲ್ಲ. ಇದುವರೆಗೆ ೫.೬೫ ಕೋಟಿ ರೂ. ಗಳನ್ನು ಮಾತ್ರ ಕೊಟ್ಟಿದ್ದಾರೆ. ಇಷ್ಟು ಅಲ್ಪ ಹಣದಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಮಾಡಲು ಯಾವ ರೀತಿ ಸಾಧ್ಯವಾಗುತ್ತದೆ ? ಆದ್ದರಿಂದ ಪರಿಹಾರವನ್ನು ಪೂರ್ತಿಯಾಗಿ ಕೊಡಿ, ಇಲ್ಲದಿದ್ದರೆ ಪುನಃ ಆಕ್ಟ್ರಾಯನ್ನು ಜಾರಿಗೆ ತೆಗೆದುಕೊಂಡು ಬನ್ನಿ. ಇದರ ಜೊತೆಗೆ ಕಾರ್ಪೊರೇಷನನ್ನು ಇಂಡಿಪೆಂಡೆಂಟ್ ಮಾಡಿ, ಅದು

ಸ್ವತಂತ್ರವಾಗಿ ಹಣ ಖರ್ಚು ಮಾಡುವುದರ ಮೂಲಕ ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುವುದಕ್ಕೆ ಉತ್ತೇಜನ ಕೊಡಬೇಕು. ಈ ಮೊದಲು ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಆಕ್ಟ್ರಾಯ್ ಮೂಲಕ ೨೨ ಕೋಟಿ ರೂ. ಗಳ ಆದಾಯ ಬರುತ್ತಿತ್ತು. ಅಷ್ಟು ಹಣವನ್ನು ಸರ್ಕಾರದಿಂದ ಪರಿಹಾರದ ರೂಪದಲ್ಲಿ ಒದಗಿಸಿಕೊಟ್ಟರೆ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲು ಸಾಧ್ಯವಾಗುತ್ತದೆ. ಹಣ ಕೊಟ್ಟು ಕೆಲಸ ಮಾಡದಿದ್ದರೆ ಏತಕ್ಕೆ ಮಾಡಲಿಲ್ಲ ಎಂದು ನಾವು ಕೇಳಬಹುದು, ಆದರೆ ಹಣವನ್ನೇ ಕೊಡದಿದ್ದರೆ ಅವರು ಏನು ಕೆಲಸ ಮಾಡುತ್ತಾರೆ ? ಮಾನ್ಯ ಧರ್ಮಸಿಂಗ್ ಅವರು ಉತ್ಸಾಹದಿಂದ ಕೆಲಸ ಮಾಡುವುದನ್ನು ನೋಡಿ ನಮಗೆ ಆನಂದ ಮತ್ತು ಬಹಳ ಸಂತೋಷವಾಗುತ್ತದೆ. ಆದರೆ ಅವರ ಒಂದು ಉತ್ಸಾಹಕ್ಕೆ ತಕ್ಕಂತೆ ಅಧಿಕಾರಿಗಳೂ ಸಹ ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳಲ್ಲಿ ಒಂದುರೀತಿಯ ನಿರುತ್ಸಾಹ ಇದೆ. ಈ ಉತ್ಸಾಹ ಮತ್ತು ನಿರುತ್ಸಾಹ ಎರಡೂ ಹೊಂದಿಕೊಂಡು ಹೋಗುತ್ತವೆ. ಇದರ ಒಂದ ಪ್ರೋಗ್ರೆಸ್ ಎಂದರೆ ಜೀರೋ ? ಮಾನ್ಯ ಮಂತ್ರಿಗಳು ೧೯೮೧ ರ ಜನವರಿ ತಿಂಗಳಲ್ಲಿ ನಗರದ ಎಲ್ಲ ಶಾಸಕರನ್ನು ಕರೆಸಿ ಪ್ರತಿ ಶಾಸಕರ ಕ್ಷೇತ್ರದಲ್ಲಿ ಎರಡು ಮೂರು ತಿಂಗಳೊಳಗಾಗಿ ಹತ್ತು ಲಕ್ಷ ರೂ. ಗಳ ವೆಚ್ಚದಲ್ಲಿ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೋ ಅದನ್ನೆಲ್ಲಾ ಮಾಡಿಸುವುದಾಗಿ ಹೇಳಿದರು. ಆದರೆ ಅದರಂತೆ ಕೆಲಸಗಳು ಆಗಲಿಲ್ಲ. ಈಗ ನಾವು ೭ನೇ ತಿಂಗಳಲ್ಲಿ ಇದ್ದೇವೆ. ಇವರು ಜನವರಿ ತಿಂಗಳಲ್ಲಿ ಈ ಮಾತು ಹೇಳಿದ್ದು. ಇಲ್ಲಿ ೧.೧೯ ಕೋಟಿ ರೂ. ಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಹಣವನ್ನು ಯಾವಾಗ ಮತ್ತು ಎಲ್ಲಿ ಖರ್ಚು ಮಾಡಿದ್ದಾರೆಂಬುದನ್ನು ಮಾನ್ಯ ಮಂತ್ರಿಗಳು ಈ ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಜಾಸ್ತಿ ಆಗುತ್ತಿದೆ. ಇದರ ಜೊತೆಗೆ ಮತ್ತೆ ಹೊಸದಾಗಿ ಡೈರೆಕ್ಟರೇಟ್ ಆಫ್ ಮುನಿಸಿಪಲ್ ಆಡ್ಮಿನಿಸ್ಟ್ರೇಷನನ್ನು ಫಾರ್ಮೇಷನ್ ಮಾಡಲು ಹೊರಟಿದ್ದಾರೆ. ಒಬ್ಬರು ಐ. ಎ. ಎಸ್. ಅಧಿಕಾರಿಗೆ ಕೆಲಸ ಕೊಡಲು ಇದನ್ನು ಮಾಡುವುದಿದ್ದರೆ ನಾನು ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ, ಏನೆಂದರೆ, ಐ. ಎ. ಎಸ್. ಆಫೀಸರ್‌ನ್ನು ಇದಕ್ಕೆ ನೇಮಕ ಮಾಡುವುದರಿಂದ ನಮ್ಮ ರಾಜ್ಯದ ಸಮಸ್ಯೆಗಳು ಪರಿಹಾರವಾಗುವುದಿಲ್ಲ ಎಂದು ನಿಮ್ಮನ್ನೂ ಮಾಡುವುದಕ್ಕೆ ಬಿಡುವುದಕ್ಕೆ ಅವರಿಗೂ ಮಾಡುವುದಕ್ಕೆ ಟೈಮಿಲ್ಲ. ಡೈರೆಕ್ಟರು ಇಂಥಾದ್ದನ್ನು ಮಾಡಿ ಬೆಂಗಳೂರು ನಗರವನ್ನು ಅಧೋಗತಿಗೆ ತರುತ್ತಿದ್ದಾರೆ, ಇಂಥಾದ್ದಕ್ಕೆ ಉತ್ತೇಜನ ಕೊಡಬೇಡಿ ಎಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಈ ವರದಿಗಳಲ್ಲಿ ಏನೇನು ಹೇಳಿದ್ದಾರೋ ಇದೆಲ್ಲಾ ನಡೆಯುತ್ತಿರುವುದು ೧೯೫೭ ರಿಂದ ನಡೆದು ಬಂದಿರುವಂಥ ಬೆಂಗಳೂರು ಸಿಟಿಯಿಂದ ಎಂದು ಹೇಳುತ್ತಾ ಇದ್ದೇನೆ. ೧೯೫೬-೫೭ ಕ್ಕೆ ಹಿಂದೆ ಯಾ ವರೀತಿ ಇತ್ತೋ ಅದೇ ರೀತಿ ಬೆಂಗಳೂರು ಸಿಟಿ ಇವತ್ತೂ ಇದೆ. ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರವನ್ನೇ ತೆಗೆದುಕೊಳ್ಳಿ. ಬಹಳ ಮುಖ್ಯವಾದಂಥ ಪ್ರದೇಶವಾಗಡಿ ರೋಡಿನಲ್ಲಿ ಗೋಪಾಲಪುರ ಇದೆ. ಮಾನ್ಯ ರಾಮಕೃಷ್ಣ ಅವರು ಆ ಜಾಗದಿಂದ ಬಂದವರು. ಅವರು ಮಂತ್ರಿ ಆದಮೇಲೆ ಅಲ್ಲಿಗೆ ಹೋಗಲಿಲ್ಲ. ಮಂತ್ರಿ ಆದಮೇಲೆ ಅಲ್ಲಿಗೆ ನೋಡುವುದಕ್ಕೆ ಹೋಗಲಿಲ್ಲ. ಅಲ್ಲಿ ನೀರು ಇಲ್ಲ, ರೋಡಿಗೆ ಟಾರ್ ಇಲ್ಲ, ಲೈಟ್ ಇಲ್ಲ, ಆ ಜಾಗವನ್ನು ಇವರು ನೋಡಲೇ ಇಲ್ಲ. ಇಂತಹ ಜಾಗಗಳನ್ನು ನಮ್ಮ ಕಾರ್ಪೊರೇಷನ್‌ನವರು ಸ್ವಲ್ಪ ಅಭಿವೃದ್ಧಿ ಮಾಡಬೇಕು. ಅಲ್ಲಿ ಹರಿ ಜನರು ಮತ್ತು ಮುಸ್ಲಿಮರು ಮಾತ್ರ ಇದ್ದಾರೆ. ೧೮ ಪರ್ಸೆಂಟ್‌ನಲ್ಲಿ ಹಣತೆಗೆದುಕೊಳ್ಳುತ್ತಾರೆ, ಅಲ್ಲಿ ಕೊಡುವುದಿಲ್ಲ. ಆದುದರಿಂದ ಇಂತಹ ಜಾಗಗಳನ್ನು ಅಭಿವೃದ್ಧಿ ಮಾಡಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ, ಇನ್ನೊಂದು ವಿಷಯವನ್ನು ಹೇಳುವುದಾದರೆ, ಆಸ್ಪತ್ರೆ ಕೊಡುತ್ತೇವೆ ಎಂದು ಹೇಳುತ್ತಾರೆ. ಜಯನಗರದಲ್ಲಿ ಆಸ್ಪತ್ರೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ ಆಸ್ಪತ್ರೆಯನ್ನು ರಾಮಚಂದ್ರ ಪುರದಲ್ಲಿ ಏಕೆ ಕೊಡಬಾರದು, ಸ್ವತಂತ್ರಪಾಳ್ಯದಲ್ಲಿ ಏಕೆ ಕೊಡಬಾರದು, ಇಲ್ಲಿ ಕೊಟ್ಟರೆ ಬಡ ಜನರಿಗೆ ಸಹಾಯವಾಗುತ್ತದೆ, ನೀವು ಜಯನಗರ, ಬಸವನಗುಡಿ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್‌ನಲ್ಲಿ ಆಸ್ಪತ್ರೆ ಕಟ್ಟುವುದು ಏಕೆಂದರೆ, ಸೆಕ್ರೆಟರಿಗಳು ಅಲ್ಲಿಂದ ಬರುತ್ತಾರೆ, ತಾವು ಅಂತಹ ಜಾಗಗಳಲ್ಲಿ ಇದ್ದೀರಿ, ಆದರಿಂದ ಕೊಡುತ್ತೀರಿ. ನಾನು ತಮ್ಮಲ್ಲಿ ಮುಖ್ಯವಾಗಿ ಕೇಳಿಕೊಳ್ಳುವುದೇನೆಂದರೆ, ಬಡವರು ಇರುವಂಥ ಜಾಗಗಳನ್ನು ಅಭಿವೃದ್ಧಿ ಮಾಡಲು ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ,

(ಮಾನ್ಯ ಶ್ರೀ ಭಾಸ್ಕರನಾಯ್ಡುರವರು ಅಧ್ಯಕ್ಷ ಪೀಠವನ್ನಲಂಕರಿಸಿದರು) ಇನ್ನು ವಾಟರ್ ಸಪ್ಲೈ ಸ್ಕೀಂ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮಾನ್ಯ ಅಮ್ಮಂಗಾರವರು ಈ ಬಗ್ಗೆ ಹೇಳಿದ್ದಾರೆ, ಅವರು ಈಗ ಸಭೆಯಲ್ಲಿ ಇಲ್ಲ. ನಾನು ಬಹಳ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಕೊಡುವಂಥ ನೀರು ಇಡೀ ಭಾರತ ದೇಶದಲ್ಲೇ ಬೇರೆ ಯಾವ ನಗರದಲ್ಲೂ ಸಿಕ್ಕುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಾಂಬೆ ನಗರದಲ್ಲಿ, ಕಲ್ಕತ್ತಾ ನಗರದಲ್ಲಿ ಒಳ್ಳೆಯ ನೀರು ಸಿಗುತ್ತದೆ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಆದರೆ ನೂರಕ್ಕೆ ನೂರು ಭಾಗ ಫಿಲ್ಟರ್ ಮಾಡಿದಂಥ ನೀರು ಬೆಂಗಳೂರು ನಗರದಲ್ಲಿ ಮಾತ್ರ ಸಿಗುತ್ತಿದೆ. ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ನಲ್ಲಿ ನಾನು ಹೇಳುತ್ತಾ ಇಲ್ಲ. ತುಂಗಭದ್ರ ಕಾವೇರಿಗಿಂತ ಒಳ್ಳೆಯದಲ್ಲ. ಕಾವೇರಿ ಒಳ್ಳೆಯದು. ಬೆಂಗಳೂರು ನಗರದಲ್ಲಿ ಒಳ್ಳೆಯ ನೀರು ಸಿಗುತ್ತಿದೆ. ಆದರೆ ಟ್ಯಾಬುಗಳು ಕೆಟ್ಟುಹೋಗಿವೆ, ೩೦–೪೦ ವರ್ಷಗಳ ಹಿಂದೆ ಹಾಕಿಸುವಂಥ ವಾಟರ್ ಟ್ಯಾಪುಗಳನ್ನು ಬದಲಾವಣೆಮಾಡಿ ನಾಗರೀಕರಿಗೆ ಒಳ್ಳೆಯ ನೀರನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಬಿನ್ನವಿಸುತ್ತಾ ಇದ್ದೇನೆ. ಏನೆಂದರೆ ಕಾವೇರಿ ಎರಡನೇ ಸ್ಟೇಜಿನ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ನಗರಾಡಳಿತ ಮಂತ್ರಿಗಳು ಇಬ್ಬರೂ ಇನ್ನು ೮–೧೦ ತಿಂಗಳಿಗೆ ಕರ್ನಾಟಕ ರಾಜ್ಯದ ೨೫ನೇ ವರ್ಷದ ಸಮಾರಂಭದಂದು ಅಂದೇ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ, ಈ ರಿಪೋರ್ಟ್ ಪ್ರಕಾರ ಮತ್ತು ಅಲ್ಲಿ ನೋಡಿದ ಪ್ರಕಾರ ಇನ್ನು ಒಂದೆರಡು ಮೂರು ವರ್ಷಗಳಾದರೂ ಕಾವೇರಿ ಎರಡನೇ ಸ್ಟೇಜ್ ಆಗುವುದಿಲ್ಲ ಎಂದು ವಿಷಾದದಿಂದ ತಿಳಿಸಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ನಗರಾಡಳಿತ ಮಂತ್ರಿಗಳು ಕೊಟ್ಟಂಥ ಭರವಸೆ ಏನಾಯಿತು. ೨೫ನೇ ವರ್ಷದ ಕನ್ನಡ ರಾಜ್ಯೋತ್ಸವದಲ್ಲಿ ನೀರು ಕೊಡುತ್ತೇವೆ ಎಂದು ಹೇಳಿದಿರಿ, ಅಥವಾ ತಡವಾದರೂ ಎಷ್ಟು ವರ್ಷಗಳಲ್ಲಿ ಆಗಬಹುದು, ಈ ವರ್ಷದ ಕೊನೇವರೆಗೆ ಆಗುವುದಿಲ್ಲ. ೩೦ ಕೋಟಿ ರೂಪಾಯಿಗಳಿಗೆ ೩ ಕೋಟಿ ಮಾತ್ರ ಅವರ ಹತ್ತಿರ ಇದೆ, ಇದ್ದಕ್ಕೆ ಏನು ಅರೇಂಜ್‌ಮೆಂಟ್ ಮಾಡುತ್ತೀರಿ ಎನ್ನುವುದನ್ನು ದಯವಿಟ್ಟು ಸಭೆಯಲ್ಲಿ ತಿಳಿಸಬೇಕು ಎಂದು ಕೇಳಿಕೊಂಡು, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆತ್ಮಾನಂದ (ಮಂಡ್ಯ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಡಳಿತ ಸಚಿವರು ಏನು ಈ ಸದನದಲ್ಲಿ ಬೇಡಿಕೆಯನ್ನು ಮಂಡಿಸಿದ್ದಾರೋ ಅದನ್ನು ಪುಷ್ಟೀಕರಿಸಿ, ಕೆಲವಾರು ಅಂಶಗಳನ್ನು ಮಾತನಾಡಲು ಇಚ್ಛಿಸುತ್ತೇನೆ. ನಿನ್ನೆ ಮತ್ತು ಈದಿನ ಅನೇಕ ಮಾನ್ಯ ಸದಸ್ಯರು ನಗರಸಭೆ ಹಾಗೂ ಪುರಸಭೆಗಳ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನಾನು ಅನುಮೋದಿಸುತ್ತೇನೆ. ಏಕೆಂದರೆ, ಈಗ ಏನು ನಗರಸಭೆಗಳಲ್ಲಿ ಆರ್ಥಿಕ ಪರಿಸ್ಥಿತಿ ಇದೆಯೋ ಅದು ಅವರ ಸಿಬ್ಬಂದಿವರ್ಗಕ್ಕೆ ಸಂಬಳ ಕೊಡುವುದಕ್ಕೆ ಸಾಲುವುದಿಲ್ಲ. ಇನ್ನು ಅಭಿವೃದ್ಧಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಬಹಳ ದೂರವಾದ ಮಾತು. ಕೆಲವಾರು ಭಾಗ ಸರ್ಕಾರದಿಂದ ಪುರಸಭೆಗಳಿಗೆ ನೆರವು ಸಿಗುತ್ತದೆ, ಆ ನೆರವು ಸಿಗುವ ಭಾಗ ಹೆಚ್ಚಾಗಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ, ವಾಹನ ತೆರಿಗೆಯ ಒಂದು ಅಂಶ ಸ್ಥಳೀಯ ಸಂಸ್ಥೆಗಳಿಗೆ ಸಿಗುತ್ತದೆ. ೧೯೬೭ನೇ ಇಸವಿಯಲ್ಲಿ ಇದ್ದಂಥ ವಾಹನಗಳ ಆಧಾರದ ಮೇಲೆ ನಗರಸಭೆಗಳಿಗೆ, ಪುರಸಭೆಗಳಿಗೆ ಕೊಡುವುದನ್ನು ಫಿಕ್ಸ್ ಮಾಡಿದ್ದಾರೆ. ಈಗ ವಾಹನಗಳ ಸಂಖ್ಯೆ ಜಾಸ್ತಿಯಾಗಿದೆ. ಅವರೆ ರಸ್ತೆಗಳ ನಿರ್ವಹಣೆ ಪುರಸಭೆಗಳ ಮೇಲೆ ಹೆಚ್ಚಾಗಿದೆ. ಆದುದರಿಂದ ವಾಹನಗಳ ತೆರಿಗೆಗಳಿಂದ ಬರುವ ಹಣದಲ್ಲಿ ಮುನಿಸಿಪಾಲಿಟಿಗಳಿಗೆ ಕೊಡತಕ್ಕ ಅಂಶವನ್ನು ಹೆಚ್ಚಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇವೆ. ಈ ಪುರಸಭೆಗಳಿಗೆ ಬರತಕ್ಕ ನೇರವಾದ ಆದಾಯ ಅಂದರೆ, ಬಿಲ್ಡಿಂಗ್ ಟ್ಯಾಕ್ಸ್, ಸೈಟಿನ ಮೇಲೆ ಹಾಕುವ ತೆರಿಗೆ. ಸಾಮಾನ್ಯವಾಗಿ ತಮಗೆ ಗೊತ್ತಿರಬಹುದು, ಪುರಜನರಿಂದ ಬಿಲ್ಡಿಂಗ್ ಟ್ಯಾಕ್ಸ್ ಬಾಕಿ ನಿಂತಿರುತ್ತದೆ, ಅವರು ಸರಿಯಾಗಿ ಕೊಟ್ಟಿರುವುದಿಲ್ಲ. ನಗರಸಭೆಯವರು ಯಾವುದಾದರೂ ಯೋಜನೆ ಮಾಡಿದರೆ ಅದಕ್ಕೆ ನೇರವಾಗಿ ಹಣ ಕೊಡಬೇಕಾಗುತ್ತದೆ. ಈ ಅಂಶವನ್ನು ಗಮನಿಸಿ ಸರ್ಕಾರ ಹೆಚ್ಚಿನ ರೀತಿಯಲ್ಲಿ ಹಣ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ. ಮತ್ತೆ ಕೆಲವೊಂದು ಸರ್ಕಾರಿ ಶಾಲೆಗಳ ಕಟ್ಟಡ ಕಟ್ಟುವ ನಿರ್ವಹಣೆ ಈ ನಗರಸಭೆಗಳ ಮೇಲೆ ಬಿದ್ದಿರುತ್ತದೆ. ಆದುದರಿಂದ ಎಜುಕೇಷನ್ ಸೆಸ್, ಹೆಲ್ತ್ ಸೆಸ್‌ಗಳಲ್ಲಿ ಹೆಚ್ಚಾಗಿ ನಗರ ಸಭೆಗಳಿಗೆ ಕೊಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೆ ಆಕ್ಟ್ರಾಯನ್ನು ತೆಗೆದುಹಾಕಿದ್ದೀರಿ, ಅದಕ್ಕೆ ಬದಲಾಗಿ ಆಕ್ಟ್ರಾಯ್ ಕಾಂಪನ್ಸೇಷನ್

---

† Indicates that remarks or speeches have not been revised by the member concerned

ಕೊಡುತ್ತಾ ಇದ್ದೀರಿ. ೩ ತಿಂಗಳಿಗೊಮ್ಮೆ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯ್ ಕಾಂಪನ್‌ಸೇಷನ್ ಕೊಡು ವುದರಿಂದ ಮುನಿಸಿಪಾಲಿಟಿಗಳಿಗೆ ತಾಪತ್ರಯವಾಗುತ್ತದೆ, ಅಲ್ಲದೆ ದಿನನಿತ್ಯ ಕಾರ್ಯಕ್ರಮಗಳನ್ನು ನಿರ್ವಹಿಸಲು ಆಗುವುದಿಲ್ಲ. ೧೯೭೮-೭೯ರಲ್ಲಿ ಏನು ಆಕ್ಟ್ರಾಯ್‌ನಿಂದ ಉತ್ಪತ್ತಿ ಬರುತ್ತಿತ್ತು ಅದರ ಆಧಾರದ ಮೇಲೆ ನಿಗದಿ ಮಾಡಿದ್ದೀರಿ. ಇದನ್ನು ಪುನರ್ವಿಮರ್ಶಿಸಬೇಕು ಎಂದು ಹೇಳುತ್ತೇನೆ. ಏಕೆಂದರೆ, ದಿನನಿತ್ಯ ಬಳಸುವ ವಸ್ತುಗಳ ಬೆಲೆ ಹೆಚ್ಚಾಗಿದೆ. ಆಕ್ಟ್ರಾಯ್ ಇದ್ದಿದ್ದರೆ ಮುನಿಸಿಪಾಲಿಟಿಗಳಿಗೆ ಇನ್ನೂ ಹೆಚ್ಚಿನ ಆದಾಯ ಸಿಗುತ್ತಿತ್ತು. ಆದುದರಿಂದ ಈ ಒಂದು ಅಂಶವನ್ನು ಗಮನಕ್ಕೆ ತೆಗೆದುಕೊಂಡು ಆಕ್ಟ್ರಾಯ್ ಕಾಂಪನ್‌ಸೇಷನ್ ಹೆಚ್ಚಾಗಿ ಕೊಡಬೇಕು, ಪ್ರತಿ ತಿಂಗಳಿಗೊಮ್ಮೆ ಆಕ್ಟ್ರಾಯ್ ಕಾಂಪನ್‌ಸೇಷನ್ ಕೊಡುವುದನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ.

ಇನ್ನು ಪುರಸಭೆಗಳಿಗೆ ಮತ್ತು ನಗರಸಭೆಗಳಿಗೆ ಡೆವಲಪ್‌ಮೆಂಟ್ ಗ್ರ್ಯಾಂಟ್ ಕೊಡುತ್ತಿದ್ದಾರೆ, ಡೆವಲಪ್‌ಮೆಂಟ್ ಗ್ರ್ಯಾಂಟ್ ಕೊಡುವುದಕ್ಕೆ ಗೈಡ್‌ಲೈನ್ಸ್ ಏನಿದೆಯೋ ನನಗೆ ಗೊತ್ತಿಲ್ಲ. ಕೆಲವೊಂದು ಮುನಿಸಿಪಾಲಿಟಿಗಳಿಗೆ ಹೆಚ್ಚಿಗೆ ಕೊಡುತ್ತಿದ್ದಾರೆ, ಕೆಲವು ಮುನಿಸಿಪಾಲಿಟಿಗಳಿಗೆ ಕಡಿಮೆ ಕೊಡುತ್ತಿದ್ದಾರೆ, ಈ ಒಂದು ತಾರತಮ್ಯವನ್ನು ಹೋಗಲಾಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಾಗೂ ಈ ಪುರಸಭೆಗಳಲ್ಲಿ, ನಗರಸಭೆಗಳಲ್ಲಿ ಅಭಿವೃದ್ಧಿ ಸ್ಕೀಮುಗಳು ನಡೆಯಬೇಕಾದರೆ ಇದಕ್ಕೆ ಒಂದು ಪ್ರತ್ಯೇಕವಾದ ನಿರ್ದೇಶನಾಲಯ ಇರಬೇಕು ಎಂದು ನನ್ನ ಅನಿಸಿಕೆ. ಈ ಒಂದು ರೆವಿನ್ಯೂ ಇಲಾಖೆಯಿಂದ ನಗರಸಭೆಗಳ ಆಡಳಿತವನ್ನು ದೂರ ಮಾಡಬೇಕು, ನಗರಸಭೆ ಮತ್ತು ಪುರಸಭೆಗಳಿಗೆ ಪ್ರತ್ಯೇಕವಾದ ನಿರ್ದೇಶನಾಲಯವನ್ನು ಸ್ಥಾಪಿಸಬೇಕು ಎಂದು ನಾನಾದರೂ ಹೇಳಲಿಕ್ಕೆ ಇಷ್ಟಪಡುತ್ತೇನೆ.

೨-೦೦ ಪಿ. ಎಂ.

ಹಾಗೆಯೇ ಇವತ್ತು ನಗರಗಳಲ್ಲಿ ದೀಪದ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ ಕೊಟ್ಟಿದ್ದೀರಿ ಅದೇ ರೀತಿ ಪುರಸಭೆಗಳಿಗೂ ಸಹ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಒಂದೊಂದು ಸಲ ದೀಪ ಕೆಟ್ಟು ಹೋಗಿದ್ದನ್ನು ನಗರಸಭೆಯವರ ಗಮನಕ್ಕೆ ತಂದರೂ ಸಹ ಅದನ್ನು ಅವರು ಸರಿಪಡಿಸುವುದೇ ಇಲ್ಲ, ಅದಕ್ಕೆ ತಿಂಗಳು ಗಟ್ಟಲೆ ತೆಗೆದುಕೊಳ್ಳುತ್ತಾರೆ. ಆದುದರಿಂದ ಇದರ ಬಗ್ಗೆ ಸಹ ಹೆಚ್ಚಿನ ಗಮನ ವನ್ನು ಮಾನ್ಯ ಮಂತ್ರಿಗಳವರು ಹರಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಮಂಡ್ಯಾ ನಗರಸಭೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಕಾವೇರಿ ನೀರನ್ನು ಮಂಡ್ಯಾ ನಗರಕ್ಕೆ ಪೂರೈಸುವ ಬಗ್ಗೆ ಕೆಲಸ ಪ್ರಾರಂಭ ಮಾಡಿ ೩ ವರ್ಷಗಳಾಯಿತು ಇನ್ನೂ ಮುಗಿದಿಲ್ಲ. ಆದುದರಿಂದ ಅದನ್ನು ಆದಷ್ಟು ಜಾಗ್ರತೆ ಮುಗಿಸಿಕೊಡಬೇಕೆಂದು ಹೇಳುತ್ತೇನೆ. ಮತ್ತೆ ಮಂಡ್ಯಾದಲ್ಲಿ ಸುಮಾರು ೨೦ ಸ್ಲಂಗಳು ಇವೆ ಇಲ್ಲಿಯವರೆಗೆ ಯಾವ ಅಭಿವೃದ್ಧಿಯ ಕೆಲಸಕಾರ್ಯಗಳೂ ಆಗಿಲ್ಲ. ಇನ್ನು ವಸತಿ ಬಗ್ಗೆ ಹೇಳುವುದಾದರೆ, ಮನೆಗಳನ್ನು ಕಟ್ಟಿಕೊಡುವುದಕ್ಕೆ ೩ ತರಹ ನೆರವನ್ನು ಕೊಡುತ್ತಿದ್ದೀರಿ. ಒಂದು ಹುಡ್ಕೋ ಸ್ಕೀಂ, ಇನ್ನೊಂದು ಎಕ್ಸ್‌ಪೆರಿಮೆಂಟ್ ಸ್ಕೀಂ ಮತ್ತು ಬ್ಯಾಂಕಿನಿಂದ ಸಹಾಯ ಒದಗಿಸಿ ಕೊಟ್ಟು ಮನೆಗಳನ್ನು ಕಟ್ಟಿಸಿ ಕೊಡತಕ್ಕ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಬ್ಯಾಂಕ್‌ನಿಂದ ಒಂದೂವರೆ ಸಾವಿರ ರೂ. ಗಳನ್ನು ಕೊಡುತ್ತಿದ್ದೀರಿ ಮತ್ತು ನಿಮ್ಮ ಯೋಜನೆಯಿಂದ ೫೦೦ ರೂ.ಗಳನ್ನು ಕೊಡುತ್ತಿದ್ದೀರಿ ಮಿಕ್ಕದ್ದನ್ನು ಅವನು ಹಾಕಿಕೊಂಡು ಕಟ್ಟಿಸಿಕೊಳ್ಳಬೇಕಾಗಿದೆ. ಆದರೆ ಇವತ್ತಿನ ದಿವಸ ಪದಾರ್ಥಗಳ ಬೆಲೆಯು ವಿಪರೀತವಾಗಿ ಏರಿರುವುದರಿಂದ ಅವನು ಮನೆಯನ್ನು ಕಟ್ಟಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಆದುದರಿಂದ ತಾವು ೧೫೦೦ ರೂ.ಗಳ ಲೋನ್ ಏನು ಕೊಡಿಸುತ್ತಿದ್ದೀರಿ ಅದನ್ನು ಇನ್ನು ಹೆಚ್ಚಿಸಬೇಕೆಂದು ಸಲಹೆ ಕೊಡಬಯಸುತ್ತೇನೆ. ಇನ್ನು ೧೯೭೫ನೇ ಇಸವಿಯಲ್ಲಿ ಗರೀಬಿ ಹಟಾವೋ ಸ್ಕೀಂ ಮುಖಾಂತರ ಬೇಕಾದಷ್ಟು ಜಮೀನುಗಳನ್ನು ಅಕ್ವೈರ್ ಮಾಡಿಕೊಂಡಿದ್ದೀರಿ. ಆದರೆ ಇಲ್ಲಿಯವರೆಗೆ ಆ ಜಮೀನಿನ ಮಾಲೀಕರಿಗೆ ಕಾಂಪನ್‌ಸೇಷನ್ ಕೊಟ್ಟಿಲ್ಲ. ನಮ್ಮ ಮಂಡ್ಯಾ ತಾಲ್ಲೂಕಿಗೆ ೧೬ ಲಕ್ಷ ಬಾಕಿ ಇದೆ. ಆದುದ ರಿಂದ ಇವತ್ತಿನ ದಿವಸ ಯಾರು ಜಮೀನುಗಳನ್ನು ಕಳೆದುಕೊಂಡಿದ್ದಾರೆ ಅವರಿಗೆ ಪರಿಹಾರ ಧನವನ್ನು ಆದಷ್ಟು ಜಾಗ್ರತೆ ಒದಗಿಸಿ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಡಳಿತ ಸಚಿವರು ಮಂಡಿಸಿರತಕ್ಕಂಥ ಬೇಡಿಕೆ ಏನಿದೆ ಅದನ್ನು ಸ್ವಾಗತಿಸುತ್ತಾ ನಾನು ಕೇವಲ ಜನತಾ ಮನೆಗಳ ಬಗ್ಗೆ ನಾಲ್ಕಾರು ವಿಷಯಗಳನ್ನು ಮಾತ್ರ ಪ್ರಸ್ತಾಪ ಮಾಡಬೇಕೆಂದು ಬಯಸಿದ್ದೇನೆ. ನಿಜವಾಗಿಯೂ ಮಾನವ

ರಾದವರಿಗೆ ಮನೆಯು ಅಗತ್ಯ ಬಹಳವಾಗಿರುತ್ತದೆ. ಹಕ್ಕಿಗೂ ಒಂದು ಗೂಡು ಹೇಗೆ ಬೇಕೋ ಹಾಗೆಯೇ ಮನುಷ್ಯನಾದವನಿಗೆ ಒಂದು ಮನೆಯು ಅಗತ್ಯವಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಜನತಾ ಮನೆಗಳ ಮಂಜೂರಾತಿ ಬಹಳ ಕಡಿಮೆಯಾಗಿದೆ. ನಿಜವಾಗಿಯೂ ಹೇಳಬೇಕು ಎಂದರೆ ಹಿಂದೆ ಇದ್ದುದಕ್ಕಿಂತಲೂ ಇವತ್ತು ಜನತಾ ಮನೆಗಳ ಬೇಡಿಕೆ ನಮ್ಮ ಕ್ಷೇತ್ರದಲ್ಲಿ ಸಾಕಷ್ಟು ಇದೆ. ನನ್ನ ಒಂದು ಕ್ಷೇತ್ರದ ಬಗ್ಗೆ ಹೇಳುವುದಾದರೆ ೧೯೭೯-೮೦ರಲ್ಲಿ ಒಂದು ಸಾವಿರ ಮನೆಗಳನ್ನು ದೊರೆತಿದ್ದರೆ ಹೋದ ವರ್ಷ ಕೇವಲ ೩೫೦ ಮನೆಗಳು ಮಾತ್ರ, ಮತ್ತೆ ಈ ಸಾರಿ ಎಕ್ಸ್‌ಟ್ರಾ ಅಲಾಟ್‌ಮೆಂಟ್ ಬೇಕು ಎಂದು ಕೇಳಿದ್ದೆವು ಅದರ ಬಗ್ಗೆ ಮಾನ್ಯ ಮಂತ್ರಿಗಳವರು ಗಮನ ಕೊಟ್ಟ ಹಾಗೆ ಕಾಣಲಿಲ್ಲ. ಸಾಮಾನ್ಯ ಜನರಿಗೆ ಬಹು ಮುಖ್ಯವಾಗಿ ಬೇಕಾಗಿರತಕ್ಕಂಥದ್ದು, ಇರಲು ಮನೆ, ಕುಡಿಯುವ ನೀರು ಮತ್ತು ದೀಪ. ಆದರೆ ಇವರು ಇರಲಿಕ್ಕೆ ಮನೆಗಳನ್ನು ಕೊಡುವುದರ ಬಗ್ಗೆ ಕಡೆಗಣಿಸಿರುವುದರ ಬಗ್ಗೆ ನಿಜವಾಗಿಯೂ ವಿಷಾದವೆನ್ನಿಸುತ್ತದೆ. ಜೊತೆಗೆ ಒಂದು ಮನೆ ಕಟ್ಟಲು ೩ ಸಾವಿರ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ನಮ್ಮ ಮಲೆನಾಡು ಕ್ಷೇತ್ರದಲ್ಲಿ ೩ ಸಾವಿರ ರೂ.ಗಳಿಗೆ ಮನೆ ಕಟ್ಟಿದರೆ ಅದು ೩ ದಿವಸ ಸಹ ಉಳಿಯುವುದಿಲ್ಲ. ಹೋದ ಸಾರಿ ಬಂದ ಭಾರಿ ಮಳೆಯಿಂದ ಮನೆಗಳು ಬಿದ್ದುಹೋದವು. ಅವರಿಗೆ ಸರ್ಕಾರದಿಂದ ಇಲ್ಲಿಯ ವರೆಗೆ ಪರಿಹಾರ ದೊರೆತಿಲ್ಲ. ಇದರಿಂದ ಸಾಕಷ್ಟು ಜನರು ಕಷ್ಟಪಡುತ್ತಿದ್ದಾರೆ ಹೀಗಾಗಿರುವುದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದಿಷ್ಟೆ ಜನತಾ ಮನೆಗಳಿಗೆಂದು ತಾವು ಏನು ೩ ಸಾವಿರ ರೂ.ಗಳನ್ನು ಕೊಡುತ್ತಿದ್ದೀರಿ ಅದನ್ನು ೫ ಸಾವಿರ ರೂ.ಗಳಿಗೆ ಹೆಚ್ಚಿಸಬೇಕೆಂದು ಹೇಳಬಯಸುತ್ತೇನೆ. ಏತಕ್ಕೆಂದರೆ ಇವತ್ತಿನ ದಿವಸ ರಾ ಮೆಟೀರಿಯಲ್ಸ್ ಬೆಲೆ ಏರಿದೆ, ಮರಗಳ ಬೆಲೆ ಜಾಸ್ತಿಯಾಗಿದೆ, ಆದುದರಿಂದ ನೀವು ಕೊಡುವ ಕೇವಲ ೩ ಸಾವಿರ ರೂ.ಗಳಲ್ಲಿ ಎಂಥಾ ಮರದಿಂದ ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯವೆಂಬುದನ್ನು ದಯವಿಟ್ಟು ಯೋಚನೆ ಮಾಡಬೇಕು, ಅದಕ್ಕೋಸ್ಕರವಾಗಿ ತಾವು ಇದರ ಬಗ್ಗೆ ಆಲೋಚನೆ ಮಾಡಿ ಇದನ್ನು ಹೆಚ್ಚಿಸಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಹೇಳಬಯಸುತ್ತೇನೆ. ಮತ್ತೆ ನನ್ನ ಕ್ಷೇತ್ರದಲ್ಲಿರುವ ಆದಿವಾಸಿಗಳಿಗಾಗಿ ಕೇವಲ ೬೦ ಮನೆಗಳನ್ನು ಮಾತ್ರ ಕಟ್ಟಿಸಿದ್ದೀರಿ. ಆದರೆ ನನ್ನ ಕ್ಷೇತದಲ್ಲಿ ಸುಮಾರು ೧ ಸಾವಿರ ಹತ್ತಿರದವರೆಗೂ ಇದ್ದಾರೆ. ಆದುದರಿಂದ ತಾವು ಕೇವಲ ೬೦ ಮನೆಗಳನ್ನು ಕಟ್ಟಿಸಿ ಕೊಟ್ಟಿರುವುದು ಏನೂ ಸಾಲದು ಆದುದರಿಂದ ಅದನ್ನು ಸಹ ಹೆಚ್ಚಿಸಬೇಕೆಂದು ಕಳಕಳಿಯಿಂದ ಹೇಳಬಯಸುತ್ತೇನೆ. ನಮ್ಮ ಮಲೆನಾಡಿನಲ್ಲಿ ಮನೆಗಳ ಸಮಸ್ಯೆ ತುಂಬಾ ಇದೆ. ಹೌಸಿಂಗ್ ಬೋರ್ಡ್‌ನಿಂದ ನಿಮ್ಮ ಅಧಿಕಾರಿಗಳವರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದು ಒಳ್ಳೆಯದು. ನಮ್ಮಲ್ಲಿಗೆ ಎಷ್ಟೋ ಜನ ವರ್ಗವಾಗಿ ಬರತಕ್ಕಂಥ ಅಧಿಕಾರಿಗಳಿಗೆ ಮನೆಗಳು ಸಿಗದೇ ಇರುವುದರಿಂದ ಅವರು ಅಲ್ಲಿ ಡ್ಯೂಟಿಗೆ ರಿಪೋರ್ಟ್ ಮಾಡಿಕೊಳ್ಳುವುದಿಲ್ಲ. ಅಲ್ಲಿಗೆ ವರ್ಗವಾಗಿರತಕ್ಕಂಥ ಡಾಕ್ಟರ್‌ಗಳೇ ಆಗಲೀ, ಲೆಕ್ಚರರ್‌ಗಳೇ ಆಗಲೀ ಯಾವ ಅಧಿಕಾರಿಯನ್ನೇ ಆಗಲೀ ಅವರು ತಮ್ಮ ಫ್ಯಾಮಿಲಿ ಸಮೇತ ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ಆಗುತ್ತಿಲ್ಲ. ಇದರಿಂದ ಅವರು ಅಲ್ಲಿಂದ ಪುನಃ ತಮ್ಮ ಆರ್ಡರ್‌ನ್ನು ಕ್ಯಾನ್ಸಲ್ ಮಾಡಿಸಿಕೊಂಡಿರತಕ್ಕಂಥ ಎಷ್ಟೋ ಪ್ರಕರಣಗಳು ಇವೆ. ಇದರ ಬಗ್ಗೆ ನಾನು ಹೌಸಿಂಗ್ ಕಮಿಷನರ್‌ರವರನ್ನು ಮೀಟ್ ಮಾಡಿದಾಗ ಪ್ರಸ್ತಾಪ ಮಾಡಿದಾಗ ಅಲ್ಲಿ ಜಮೀನು ಕೊಡಿಸಿ ಕೊಡಿ ಎಂದು ಹೇಳಿದ್ದರು. ಅದಕ್ಕೆ ನಾವು ಅಲ್ಲಿ ಜಾಗವನ್ನು ಒದಗಿಸಿ ಕೊಟ್ಟಿದ್ದೇವೆ. ೫ ಎಕರೆ ಪ್ರದೇಶದಲ್ಲಿ ಕೇವಲ ೨ ಎಕರೆ ಪ್ರದೇಶದಲ್ಲಿ ಮಾತ್ರ ಹೌಸಿಂಗ್ ಬೋರ್ಡ್‌ನವರು ಮನೆಯನ್ನು ಕಟ್ಟಿಸಿ ಕೊಟ್ಟಿದ್ದಾರೆ ಮಿಕ್ಕ ಜಾಗವನ್ನು ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ, ಆದುದರಿಂದ ಆ ಜಾಗದಲ್ಲಿ ಇನ್ನು ಕೆಲವು ಮನೆಗಳನ್ನು ಕಟ್ಟಿಸಿ ಕೊಟ್ಟರೆ ಈ ಸಮಸ್ಯೆ ಬಗೆಹರಿಯುತ್ತದೆ ಮತ್ತು ಅಲ್ಲಿಗೆ ಬರತಕ್ಕ ಅಧಿಕಾರಿಗಳಿಗೇ ಆಗಲೀ ಅಥವಾ ಆ ಊರಿನಲ್ಲಿ ವಾಸಕ್ಕೆ ಮನೆ ಇಲ್ಲದೇ ಇರತಕ್ಕವರಿಗೆ ಅನುಕೂಲವಾಗುತ್ತದೆಂದು ಹೇಳಬಯಸುತ್ತೇನೆ. ತಮಗೆ ಉದಾಹರಣೆಗೆ ಹೇಳುವುದಾದರೆ ಲೇಬರ್ ಅಸಿಸ್ಟೆಂಟ್ ಕಮಿಷನರ್ ರವರು ಒಂದೂವರೆ ವರ್ಷದಿಂದ ಮನೆ ಇಲ್ಲದೇ ಇರುವುದರಿಂದ ಅವರು ಹೋಟೆಲ್‌ನಲ್ಲಿ ವಾಸವಾಗಿದ್ದಾರೆ ಆದುದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳವರು ಗಮನ ಕೊಡಬೇಕೆಂದು ಮತ್ತೊಮ್ಮೆ ಒತ್ತಾಯ ಪಡಿಸಿ ಹೇಳಬಯಸುತ್ತೇನೆ. ಇನ್ನು ಡೆವಲಪ್‌ಮೆಂಟ್ ಗ್ರ್ಯಾಂಟ್ ಬಗ್ಗೆ ಹೇಳುವುದಾದರೆ ನಮ್ಮ ಚಿಕ್ಕಮಗಳೂರಿನ ಬಗ್ಗೆ ಒಂದೆರಡು ವರ್ಷಗಳ ಹಿಂದೆಯೇ ೫೮ ಲಕ್ಷ ರೂ.ಗಳ ಒಂದು ಪ್ರೊಪೋಜಲ್‌ನ್ನು ಕಳುಹಿಸಿದ್ದೆವು. ೨ ವರ್ಷವಾದರೂ ಆ ಪ್ರಪೋಸಲ್ಸ್ ಏನಾಯಿತು ಎನ್ನುವುದರ ಬಗ್ಗೆ ಗೊತ್ತಾಗಲಿಲ್ಲ. ತಾವು ಸಹ ಅದರ ಬಗ್ಗೆ ಗಮನ ಹರಿಸಿದ ಹಾಗೆ ಕಾಣುತ್ತಿಲ್ಲ. ಇದೇ ರೀತಿ ನೀರಿನ ಸಮಸ್ಯೆ ಹೇಳುವುದಾದರೆ ೨-೩ ತಿಂಗಳ ಹಿಂದೆ ಆಸ್ಪತ್ರೆಗಳಲ್ಲಿ ಮತ್ತು ಜೈಲುಗಳಲ್ಲಿ ನೀರು ಇಲ್ಲದೆ, ಆಸ್ಪತ್ರೆ ಎಲ್ಲಾ ಕೊಳಕು ನಾರುತ್ತಿತ್ತು. ಅಲ್ಲಿಗೆ ನೀರನ್ನು

ಒದಗಿಸುವುದಕ್ಕೆ ೨ ಲಕ್ಷ ರೂ.ಗಳನ್ನು ಕೊಟ್ಟಿದ್ದೀರಿ, ಅದು ಏನೂ ಸಾಲದು ಇನ್ನೂ ಹೆಚ್ಚಿಗೆ ಕೊಟ್ಟು ಅಲ್ಲಿ ಇರುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ ಎಂ.ಎಲ್.ಎ.ಗಳಿಗೆ ತಾಲ್ಲೂಕ್ ಬೋರ್ಡ್‌ಗಳ ಮೇಲೆ ಸ್ವಲ್ಪ ಕಂಟ್ರೋಲ್ ಇದೆ ಆದರೆ ಇವತ್ತು ಮುನಿಸಿಪಾಲಿಟಿಗಳ ಮೇಲೆ ನಮಗೆ ಯಾವ ನೇರವಾದ ಸಂಪರ್ಕ ಇಲ್ಲ. ಹೀಗಾಗಿ ಅಲ್ಲಿಯ ಆಗುಹೋಗುಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಎಂ.ಎಲ್.ಎ.ಗಳಿಗೂ ಸಹ ಮುನಿಸಿಪಾಲಿಟಿಗಳ ಕೆಲಸಕಾರ್ಯಗಳ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರೆ ಆಗ ಅಲ್ಲಿಯ ಕೆಲಸಕಾರ್ಯಗಳನ್ನು ಮಾನ್ಯ ಸದಸ್ಯರುಗಳು ಸ್ವಲ್ಪ ಜವಾಬ್ದಾರಿಯಿಂದ ನೋಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಸ್. ಆರಕೇರಿ (ಬಳ್ಳೊಳ್ಳಿ) ––ಸನ್ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ನಗರಾಭಿವೃದ್ಧಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಒಂದೆರಡು ಸಲಹೆಗಳನ್ನು ಕೊಡ ಬಯಸುತ್ತೇನೆ. ಮುಖ್ಯವಾಗಿ ಟೌನ್ ಪ್ಲಾನಿಂಗ್ ಇಲಾಖೆಯ ಬಗ್ಗೆ ಹೇಳುವುದಾದರೆ, ಅದರ ಡೈರೆಕ್ಟರಾಗಲೀ, ಅವರ ಸಿಬ್ಬಂಧಿ ವರ್ಗದವರಾಗಲೀ ಹಾಗೂ ಜಿಲ್ಲಾ ಮಟ್ಟದ ಡೈರೆಕ್ಟರುಗಳಾಗಲೀ ಸರಿಯಾಗಿ ಕೆಲಸ ಮಾಡದೆ ಇರುವುದರಿಂದ ಪಟ್ಟಣ ಪ್ರದೇಶಗಳು ಯೋಜನಾಬದ್ಧವಾಗಿ ಬೆಳೆಯುತ್ತಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಈ ಇಪ್ಪತ್ತನೇ ಶತಮಾನದಲ್ಲಿ ಅರ್ಬನ್ ಏರಿಯಾಗಳು ಹೆಚ್ಚುತ್ತಿವೆ, ಆದರೆ ಟೌನ್ ಪ್ಲಾನಿಂಗ್ ಇಲಾಖೆ ಮಾತ್ರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮನೆಗಳನ್ನು ಯಾವ ರೀತಿ ಕಟ್ಟಬೇಕು, ರಸ್ತೆಗಳನ್ನು ಯಾವ ರೀತಿ ಮಾಡಬೇಕು ಅದಕ್ಕೆ ಯೋಜನೆಗಳನ್ನು ಯಾವ ರೀತಿ ಹಾಕಬೇಕೆಂಬುದು ಗೊತ್ತಿಲ್ಲ. ಪುರಸಭೆ ಇರಲಿ ಅಥವಾ ನಗರಸಭೆ ಇರಲಿ ಅದಕ್ಕೆ ಕೋ-ಆರ್ಡಿನೇಟ್ ಮಾಡಿಕೊಂಡು ಸರಿಯಾಗಿ ಯೋಜನೆಗಳನ್ನು ಹಾಕುತ್ತಿಲ್ಲ. ನಮ್ಮ ಬಿಜಾಪುರ ಜಿಲ್ಲೆ ೧೨-೧೩ನೇ ಶತಮಾನದಲ್ಲಿ ಪ್ರಸಿದ್ಧವಾದ ಸ್ಥಳವಾಗಿತ್ತು. ಆದರೆ ಇವತ್ತು ಅದನ್ನು ನೋಡಿದರೆ, ಅಲ್ಲಿ ಸರಿಯಾದ ರಸ್ತೆಗಳು ಇಲ್ಲ, ಬಡಾವಣೆಗಳು ಸರಿಯಾಗಿಲ್ಲ, ಮನೆಗಳನ್ನು ಯಾವ ಪ್ಲಾನ್ ಪ್ರಕಾರ ಕಟ್ಟಿಸಬೇಕೆಂಬುದು ಇಲ್ಲ, ಜನರು ತಮ್ಮ ಮನಸ್ಸಿಗೆ ಬಂದಹಾಗೆ ಮನೆಗಳನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಅದನ್ನು ನೋಡಿದಾಗ ಹೇಗೆ ಕಾಣುತ್ತದೆಂಬುದನ್ನು ತಾವೇ ಊಹಿಸಿಕೊಳ್ಳಬಹುದು. ಇದರ ಬಗ್ಗೆ ಟೌನ್ ಪ್ಲಾನಿಂಗ್ ಡೈರೆಕ್ಟರಿಗೆ ಸೂಕ್ತ ನಿರ್ದೇಶನವನ್ನು ಮಾನ್ಯ ಸಚಿವರು ನೀಡಿ ಇದೇ ರೀತಿ ಯೋಜನೆಗಳನ್ನು ಹಾಕಬೇಕೆಂದು ಕಡ್ಡಾಯಗೊಳಿಸದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಟೌನ್ ಪ್ಲಾನಿಂಗ್ ಡೈರೆಕ್ಟರ್‌ರವರ ಹೊಣೆಗಾರಿಕೆ ಹೆಚ್ಚಾಗಿ ಇದೆ. ಈ ಸಂದರ್ಭದಲ್ಲಿ ಪ್ರತಿಯೊಂದು ಜಿಲ್ಲೆಗೂ ಒಬ್ಬೊಬ್ಬರು ಟೌನ್ ಪ್ಲಾನಿಂಗ್ ಡೆಪ್ಯೂಟಿ ಡೈರೆಕ್ಟರನ್ನು ಹಾಕತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ, ಏನೂ ಪ್ರಯೋಜನವಾಗುವುದಿಲ್ಲವೆಂದು ಹೇಳುತ್ತಾ ಈ ಒಂದು ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರಬೇಕೆಂದೂ ಮತ್ತು ಪುರಸಭೆ ಹಾಗೂ ನಗರಸಭೆಗಳೊಡನೆ ಹೊಂದಿಕೊಂಡು ಹೋದರೆ ಸುಂದರವಾದ ನಗರವನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಎರಡನೆಯದಾಗಿ, ಮಾನ್ಯ ಸಚಿವರ ಅಧೀನದಲ್ಲಿ ಸುಮಾರು ಬೋರ್ಡುಗಳು ಇವೆ. ಅವರನ್ನು ಬೇಕಾದರೆ ಬೋರ್ಡುಗಳ ರಾಜ ಎಂದು ಕರೆಯಬಹುದು. ಉದಾಹರಣೆಗೆ ನೀರು ಸರಬರಾಜು ಮಂಡಲಿ, ಡ್ರೈನೇಜ್ ಬೋರ್ಡ್, ಬಿ.ಡಿ.ಎ. ಹೀಗೆ ಹತ್ತಾರು ಬೋರ್ಡುಗಳಿವೆ. ಇವತ್ತಿನ ದಿವಸ ಅವುಗಳಲ್ಲಿ ಸರಿಯಾಗಿ ಕೆಲಸಗಳು ನಡೆಯುತ್ತಿಲ್ಲ. ಕಾರಣವೇನೆಂದರೆ, ಒಬ್ಬೊಬ್ಬ ಸೂಪರ್ ಟೈಂ ಸ್ಕೇಲ್ ಅಧಿಕಾರಿಗಳು ೩-೪ ಬೋರ್ಡುಗಳ ಅಧ್ಯಕ್ಷರಾಗಿದ್ದಾರೆ. ಅವರು ಒಂದು ಬೋರ್ಡಿನಿಂದ ಇನ್ನೊಂದು ಬೋರ್ಡಿಗೆ ಹಾರಾಟ ನಡೆಸುತ್ತಿರುವುದರಿಂದ ಅಲ್ಲಿ ಸರಿಯಾಗಿ ಕಾರ್ಯಕ್ರಮಗಳು ನಡೆಯುತ್ತಿಲ್ಲ. ಆದ್ದರಿಂದ, ಮಾನ್ಯ ಸಚಿವರು ಇದನ್ನು ಯಾವ ರೀತಿ ವ್ಯವಸ್ಥೆಗೊಳಿಸಲು ಸಾಧ್ಯ ಎಂಬುದನ್ನು ಆಲೋಚಿಸಬೇಕು. ಸ್ಲಂ ಕ್ಲಿಯರೆನ್ಸ್ ಬೋರ್ಡಿನಲ್ಲಿ ಕಳೆದ ಒಂದು ವರ್ಷದಿಂದ ಕಾರ್ಯ ಸ್ಥಗಿತವಾಗಿದೆ. ಕೊಳಚೆ ಪ್ರದೇಶಗಳಿರುವ ಭಾಗಗಳಿಗೆ ಇವತ್ತಿಗೂ ಅಧ್ಯಕ್ಷರಾದವರು ಭೇಟಿ ನೀಡಿಲ್ಲ. ಅಲ್ಲಿ ಏನೇನು ಕೆಲಸ ಕಾರ್ಯಗಳು ನಡೆದಿವೆ ಎಂಬುದನ್ನು ನೋಡದೆ ಬರೀ ಹಣ ಖರ್ಚು ಮಾಡಿದರೆ ಏನೂ ಪ್ರಯೋಜನವಾಗುವುದಿಲ್ಲ. ಕೊಳಚೆ ಪ್ರದೇಶಗಳ ನಿರ್ಮೂಲನಾ ಸಲುವಾಗಿ ಏನು ಪ್ರತ್ಯೇಕ ಬೋರ್ಡನ್ನು ಮಾಡಿದ್ದೀರಿ ಅದು ಉತ್ಸುಕತೆಯಿಂದ ಕೆಲಸ ಮಾಡುತ್ತಿಲ್ಲ. ಇದನ್ನು ನೋಡಿದರೆ ವಿಷಾದ ಅನ್ನಿಸುತ್ತದೆ.

ಆದ್ದರಿಂದ, ಅದಕ್ಕೆ ಹೆಚ್ಚಿನ ಆಸ್ಥೆ ವಹಿಸಬೇಕೆಂದು ಹೇಳುತ್ತೇನೆ. ಬಡವರ ಕೊಳಚೆಯನ್ನು ನಿರ್ಮೂಲನ ಮಾಡಿ ಅವರಿಗೆ ಆರೋಗ್ಯಕರವಾದ ಮನೆಗಳನ್ನು ಕಟ್ಟಿಕೊಡಬೇಕೆಂಬ ಯೋಜನೆ ಇದ್ದರೂ ಕೂಡ ಅದನ್ನು ಸರಿಯಾಗಿ ಕಾರ್ಯಗತ ಮಾಡದೆ ಇದ್ದರೆ ಆದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಮೂರನೆಯದಾಗಿ, ಹೌಸಿಂಗ್ ಬೋರ್ಡ್ ಬಗ್ಗೆ ಹೇಳುವುದಾದರೆ ಇದು ಬಹಳ ದೊಡ್ಡ ಸಮಸ್ಯೆ. ಶ್ರೀಮಂತಿ ಮೋಟಮ್ಮನವರು ಮಾತನಾಡುತ್ತಾ ಹಕ್ಕಿಗೂ ಗೂಡು ಬೇಕೆಂದರು. ಸರ್ವಜ್ಞ ಕೂಡ ಮನೆಯ ಬಗ್ಗೆ ಹೀಗೆ ಹೇಳುತ್ತಾನೆ.

ಬೆಚ್ಚನೆಯ ಮನೆಯಿದ್ದು,
ವೆಚ್ಚಕ್ಕೆ ಹಣವಿದ್ದು, ಇಚ್ಛೆಯನರಿತು

ನಡೆವ ಸತಿಯಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ. ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ, ವಾಸಕ್ಕೆ ಮನೆ ಇವು ಮೂರೂ ಬಹಳ ಅವಶ್ಯಕ. ಅದರಲ್ಲಿ, ವಾಸಕ್ಕೆ ಬೇಕಾದ ಮನೆಯ ಬಗ್ಗೆ ಸನ್ಯಾಸಿಯಾದ ಸರ್ವಜ್ಞನು ಎಷ್ಟು ಮಹತ್ವವನ್ನು ಕೊಟ್ಟಿದ್ದಾನೆಂಬುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಹೌಸಿಂಗ್ ಬೋರ್ಡ್ ಎಂಬುದು ಇಂಥ ಮಹತ್ವದ್ದಾಗಿದೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಇದಂ ಯಾವ ದೃಷ್ಟಿಯಿಂದ ಯೋಜನೆಗಳನ್ನು ಹಾಕಿಕೊಂಡು ಮುನ್ನಡೆಯುತ್ತಿದೆ ಎಂಬುದನ್ನು ತಾವು ಯೋಚಿಸಬೇಕು. ಇವತ್ತು ಅದರ ಯೋಜನೆಗಳಿದ್ದರೂ ಕೂಡ ತಾಲ್ಲೂಕು ಮಟ್ಟದಲ್ಲಾಗಲೀ, ಜಿಲ್ಲಾ ಮಟ್ಟದಲ್ಲಾಗಲೀ, ರಾಜ್ಯ ಮಟ್ಟದಲ್ಲಾಗಲೀ ವಸತಿ ಸಮಸ್ಯೆ ಬಗೆಹರಿದಿಲ್ಲ. ಅದರಲ್ಲೂ ಹರಿಜನ–ಗಿರಿಜನರಿಗಂತೂ ಅವರು ಅರ್ಜಿ ಸಲ್ಲಿಸಿದರೂ ಮನೆಗಳು ಸಿಗುತ್ತಿಲ್ಲ. ಶ್ರೀಮಂತರು ಹೇಗೋ ಮನೆಗಳನ್ನು ಅಲಾಟ್ ಮಾಡಿಸಿಕೊಳ್ಳುತ್ತಾರೆ. ಅದ್ದರಿಂದ, ಹರಿಜನಗಿರಿಜನರಿಗೋಸ್ಕರ ಪ್ರತ್ಯೇಕವಾಗಿ ಯಾವುದಾದರೂ ಒಂದು ಯೋಜನೆಯನ್ನು ಹಾಕಿಕೊಂಡರೆ ಒಳ್ಳೆಯದಾಗುತ್ತದೆಂಬ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ವಿಶ್ವಬ್ಯಾಂಕಿನ ಸಹಾಯವನ್ನು ಪಡೆದ ಹುಡ್ಕೋ ಯೋಜನೆಯಿಂದ ಕಳೆದ ೨-೩ ವರ್ಷಗಳ ಹಿಂದೆ ತಾಲ್ಲೂಕು ಮಟ್ಟದವರೆಗೆ ಪ್ರಯೋಜನ ದೊರೆಯುತ್ತಿತ್ತು. ಆದರೆ, ಇತ್ತೀಚೆಗೆ ಅದರ ಯಾವುದೇ ಪ್ರಗತಿ ಕಂಡುಬರುತ್ತಿಲ್ಲ. ಯಾವ ಹೊಸ ಯೋಜನೆಗಳು ಕಾಣುತ್ತಿಲ್ಲ. ನಿವೇಶನಗಳನ್ನು ಕೊಡುವುದಾಗಲೀ ಅಥವಾ ಜಮೀನನ್ನು ಸ್ವಾಧೀನಪಡಿಸಿಕೊಂಡು ಹುಡ್ಕೋ ಯೋಜನೆಯನ್ನು ಮುಂದುವರಿಸಬೇಕೆಂಬ ಯೋಜನೆಗಳು ಕಾಣುತ್ತಿಲ್ಲ. ಏನು ಒಂದು ಗುರಿ ಸಾಧನೆ ಮಾಡಬೇಕಾಗಿತ್ತೋ ಅದನ್ನು ಮಾಡದಿರುವುದು ವಿಷಾದನೀಯ ಎಂದು ಹೇಳಬಯಸುತ್ತೇನೆ. ಇವತ್ತಿನ ದಿವಸ ಅನೇಕ ತೊಂದರೆಗಳಿವೆ. ಉದಾಹರಣೆಗೆ, ಲೋ ಇನ್‌ಕಂ ಗ್ರೂಪ್‌ನವರಿಗಾಗಲೀ ವೀಕರ್ ಸೆಕ್ಷನ್‌ನವರಿಗಾಗಲೀ ಮನೆಗಳು ದೊರೆಯದೆ ಮಿಡಲ್ ಇನ್‌ಕಂ ಗ್ರೂಪ್‌ನವರಿಗೆ ದೊರೆಯುತ್ತವೆ. ಆ ಮನೆಗಳ ಸಲುವಾಗಿ ಯಾರು ಏನು ಠೇವಣಿ ಹಣವನ್ನು ಇಟ್ಟಿರುತ್ತಾರೆ ಅವರಿಗೆ ಮನೆಗಳು ಸಿಗಲಿಲ್ಲವೆಂದು ಗೊತ್ತಾದ ಮೇಲೂ ಕೊಡದೆ ಪುನಃ ಅವರು ಅರ್ಜಿ ಹಾಕಿದ ಮೇಲೆ ಹಣವನ್ನು ವಾಪಸ್ಸು ಕೊಡುವ ಪದ್ಧತಿ ಇದೆ. ಇದರಿಂದ ಅವರಿಗೆ ಬಹಳ ತೊಂದರೆಯಾಗುತ್ತದೆ. ಯಾವ ಮನೆಗಗನ್ನು ಅರ್ಜಿದಾರರಿಗೆ ಕೊಡಲಿಲ್ಲವೋ ಅವರಿಗೆ ಕೂಡಲೇ ಠೇವಣಿ ಇಟ್ಟಿದ್ದ ಹಣವನ್ನು ವಾಪಸ್ಸು ಕೊಡತಕ್ಕ ವ್ಯವಸ್ಥೆ ಆಗಬೇಕೆಂದು ಹೇಳುತ್ತೇನೆ ಇವತ್ತಿನ ದಿವಸ ಬಿಜಾಪುರ ಜಿಲ್ಲೆಯಲ್ಲಿ ನೂರಾರು ಜನರು ಮನೆಗಳಿಗಾಗಿ ಅರ್ಜಿ ಹಾಕಿ ಮನೆಗಳೂ ಸಿಗದೆ, ಠೇವಣಿ ಕೂಡ ವಾಪಸ್ಸು ದೊರೆಯದೆ ಬಹಳ ತೊಂದರೆಪಡುತ್ತಿದ್ದಾರೆ, ಇದನ್ನು ನೋಡಿದಾಗ ಹೌಸಿಂಗ್ ಬೋರ್ಡ್ ಹೇಗೆ ಕೆಲಸ ಮಾಡುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ ಈ ಹೊಣೆಗಾರಿಕೆಯನ್ನು ಆ ಬೋರ್ಡಿನ ಅಧ್ಯಕ್ಷರ ಮೇಲೆ ಹಾಕಬೇಕೇ ಅಥವಾ ಯಾರ ಮೇಲೆ ಹಾಕಬೇಕು ಎಂಬುದನ್ನು ವಿಚಾರ ಮಾಡಬೇಕು. ಇಂಥ ಅನೇಕ ಸಮಸ್ಯೆಗಳು ನಮ್ಮಲ್ಲಿ ತುಂಬಿವೆ, ಇನ್ನು ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ, ಏಕೆಂದರೆ ನಿನ್ನೆ ಅನೇಕ ಮಾನ್ಯ ಮಿತ್ರರು ಅದರ ಬಗ್ಗೆ ಮಾತನಾಡಿದ್ದಾರೆ. ನಾನೂ ಕೂಡ ಒಂದೆರಡು ಸಾರಿ ಛೀಫ್ ಇಂಜಿಯರನ್ನು ಮತ್ತು ಅಧ್ಯಕ್ಷರನ್ನು ಭೇಟಿಯಾಗಿದ್ದೇನೆ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಅದರೂ ಕೂಡ ಅಲ್ಲಿ ಮುಖ್ಯವಾಗಿ ಹರಿಜನಗಿರಿಜನರಿಗೆ (೧೮ ಪರ್ಸೆಂಟ್) ಉದ್ಯೋಗ ನೀಡಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ ; ಉಳಿದದ್ದನ್ನು ಹೇಳಬಯಸುವುದಿಲ್ಲ. ಮುಖ್ಯವಾಗಿ ಹೌಸಿಂಗ್ ಬೋರ್ಡಿನಲ್ಲಿ ಸರಿಯಾಗಿ ಕೆಲಸ ನಡೆಯುತ್ತಿಲ್ಲವಾದ್ದರಿಂದ ಆ ಬಗ್ಗೆ ಮಾನ್ಯ ಸಚಿವರು ತೀವ್ರ ಗಮನ ಹರಿಸಿ ಆ ಮೂಲಕ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತಂದು ಕೊನೇ ಪಕ್ಷ ೧೦ ವರ್ಷಗಳಲ್ಲಾದರೂ ನಾಡಿನ ಎಲ್ಲ ಜನರಿಗೂ ವಸತಿ ಸೌಕರ್ಯವನ್ನು ಒದಗಿಸಿಕೊಡತಕ್ಕ ಪ್ರಯತ್ನ ಮಾಡಿದರೆ ಅವರ ಹೆಸರು ಉಳಿಯುತ್ತದೆಂದು ಹೇಳಬಯಸುತ್ತೇನೆ.

ಇನ್ನು ಪುರಸಭೆ ಮತ್ತು ನಗರ ಸಭೆಗಳ ಬಗ್ಗೆ ಒಂದು ಮಾತು ಹೇಳಬಯಸುವುದೇನೆಂದರೆ, ಆಕ್ಟ್ರಾಯ್ ಅನ್ನು ರದ್ದು ಮಾಡಿದ್ದರಿಂದ ಪ್ರತಿಯೊಂದು ಪುರಸಭೆಗಳು ಇವತ್ತು ದಿವಾಳಿ ಸ್ಥಿತಿಗೆ ಬಂದಿವೆ. ಅವುಗಳಿಗೆ ಸರ್ಕಾರದಿಂದ ಕೊಡತಕ್ಕ ಧನ ಸಹಾಯ ಏನೇನು ಸಾಲದು. ಅದನ್ನು ತೆಗೆಯುವುದರಿಂದ ಎಷ್ಟು ಅನುಕೂಲವಾಗುತ್ತದೆಂದು ಅಂದು ಭಾವಿಸಲಾಗಿತ್ತೊ ಅಷ್ಟೇ ಅನಾನುಕೂಲ ಇಂದು ಆಗಿದೆ. ಪುರಸಭೆಗಳಲ್ಲಿ, ಸಿಬ್ಬಂದಿ ವರ್ಗದವರಿಗೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಕೊಡುವುದಕ್ಕೆ ಹಣ ಸಾಲುತ್ತಿಲ್ಲ. ಆದುದರಿಂದ, ಪುನ: ಆಕ್ಟ್ರಾಯ್ ತಿರಿಗೆಯನ್ನು ವಿಧಿಸತಕ್ಕ ಪದ್ಧತಿಯನ್ನು ಜಾರಿಗೆ ತರಬೇಕಾಗುತ್ತದೆ. ಆದ್ದರಿಂದ, ಆಯಾಯ ಪುರಸಭೆಗಳು ಆರ್ಥಿಕವಾಗಿ ಬೆಳೆಯುವುದಕ್ಕೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳಲಿಕ್ಕೆ ಸಾಧ್ಯ ಎಂಬ ವಿಚಾರವನ್ನು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದರಿಂದ ಯಾರಿಗೂ ಭಾರವಾಗುವುದಿಲ್ಲ ಎಂಬ ಮಾತನ್ನು ಕೂಡ ಹೇಳುವುದಕ್ಕೆ ಬಯಸುತ್ತೇನೆ.

ಬಿಜಾಪುರ ಮುನಿಸಿಪಾಲಿಟಿ ಬಗ್ಗೆ ಹೇಳುವುದಾದರೆ ೨೦ ಲಕ್ಷ ರೂಪಾಯಿಗಳನ್ನು ಬಿಜಾಪುರ ಮುನಿಸಿಪಾಲಿಟಿಗೆ ಕೊಡುತ್ತೇವೆಂದು ೨೦ ಸಲ ಹೇಳಿದರೂ ಕೂಡ ಕೊಡಲಿಲ್ಲ. ಅಲ್ಲದೆ ೮೬ ಲಕ್ಷ ರೂಪಾಯಿನ ಡ್ರೈನೇಜ್ ಯೋಜನೆ ತಮ್ಮ ಮುಂದಿದೆ. ಆದರೆ ಅದಕ್ಕೆ ಇನ್ನೂ ಸ್ಯಾಂಕ್ಷನ್ ಕೊಟ್ಟಿಲ್ಲ. ಅಪ್ರೂವಲ್ ಕೊಟ್ಟಿಲ್ಲ, ಮತ್ತು ದುಡ್ಡನ್ನೂ ಬಿಡುಗಡೆ ಮಾಡಿಲ್ಲ. ಬಿಜಾಪುರ ಒಳ್ಳೆಯ ಇತಿಹಾಸವಿರುವ ಪಟ್ಟಣ. ಗೋಲ್‌ಗುಂಬಜ್ ಇರತಕ್ಕ ಪ್ರಸಿದ್ಧವಾದ ನಗರ. ಗೋಲ್‌ಗುಂಬಜ್ ಪ್ರಪಂಚದ ೭ನೇ ಅದ್ಭುತಗಳಲ್ಲಿ ಒಂದು. ಒಂದಾನೊಂದು ಕಾಲದಲ್ಲಿ ರಾಜಧಾನಿಯಾಗಿದ್ದಂಥ ನಗರ. ಇಂಥ ಐತಿಹಾಸಿಕವಾದ ನಗರ ಇವತ್ತು ಹಾಳು ಊರಿನ ಹಾಗೆ ಕಾಣಿಸುತ್ತಿದೆ. ಸನ್ಮಾನ್ಯ ಸಚಿವರು ಒಂದು ಸಾರಿಯಾದರೂ ಅಲ್ಲಿಗೆ ಹೋಗಿ ಬರಲಿ. ಅಲ್ಲಿಯ ಘಟಾರಗಳ ವ್ಯವಸ್ಥೆ ನೋಡಿದಾಗ ಇಂಥ ಪಟ್ಟಣಗಳೂ ಇವೆಯೋ ಎಂದೆನಿಸುತ್ತದೆ. ಅಲ್ಲಿ ಗಟಾರಗಳು ಗಬ್ಬು ವಾಸನೆಯಿಂದ ತುಂಬಿ ಹರಿಯುತ್ತಿದೆ. ಅದು ಯಾವುದೋ ಕಾಲದ ಗಟಾರಗಳು. ಮಾನ್ಯ ಮಂತ್ರಿಗಳು ಈ ಕಡೆ ಸ್ವಲ್ಪ ನೋಡಬೇಕು. ಕೇವಲ ಗುಲ್ಬರ್ಗ ಮಾತ್ರವಲ್ಲದೆ ಬಾಂಬೇ ಕರ್ನಾಟಕದ ಮೇಲೂ ಕೂಡ ಮಾನ್ಯ ಮಂತ್ರಿಗಳಿಗೆ ಪ್ರೀತಿ ಇದೆ ಎಂದು ತಿಳಿದುಕೊಂಡಿದ್ದೇನೆ. ಹಳೇ ಕರ್ನಾಟಕದವರು ಹೇಗೋ ಅನುಕೂಲ ಮಾಡಿಕೊಂಡಿದ್ದಾರೆ. ಆದರೆ ಹಿಂದುಳಿದವರು ಹೈದರಾಬಾದ್ ಮತ್ತು ಬಾಂಬೆ ಕರ್ನಾಟಕ ಭಾಗದವರು. ನಮ್ಮ ಕಡೆ ಮುನಿಸಿಪಾಲಿಟಿಗಳಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲ. ಹಣ ಇಲ್ಲ. ಪರಿಸ್ಥಿತಿ ಹದಗೆಟ್ಟಿದೆ. ಆದ್ದರಿಂದ ಮಾನ್ಯ ಸಚಿವರು ದಯಮಾಡಿ ಬಿಜಾಪುರ ಪಟ್ಟಣಕ್ಕೆ ಕೂಡಲೇ ೮೬ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುತ್ತಾರೆ ಮತ್ತು ೨೦ ಲಕ್ಷ ರೂಪಾಯಿಗಳನ್ನು ಕೂಡಲೆ ಮುನಿಸಿಪಾಲಿಟಿಗೆ ಕೊಡುತ್ತಾರೆ ಎಂದು ಆಶಿಸುತ್ತೇನೆ. ಇನ್ನು ಕೊನೆಯದಾಗಿ ಬೆಂಗಳೂರು ನಗರ ಕಾರ್ಪೊರೇಷನ್ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ.

ಛೇರ್ಮನ್.— ಅದರ ಬಗ್ಗೆ ಸಾಕಷ್ಟು ಬೇರೆಯವರು ಮಾತನಾಡಿದ್ದಾರೆ.

ಶ್ರೀ ಎಸ್. ಎಸ್. ಅರಕೇರಿ.— ನಾನು ಯಾರೂ ಹೇಳದೇ ಇರುವ ಅಂಶವನ್ನು ಹೇಳುತ್ತೇನೆ. ಬೆಂಗಳೂರು ನಗರ ಕಾರ್ಪೊರೇಷನ್ ವಿಚಾರವಾಗಿ ಅನೇಕ ಸಲ ನಾನು ಸಚಿವರನ್ನು ಕಂಡು ಮಾತನಾಡಿದ್ದೇನೆ. ಅಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಅಧಿಕಾರಿಗಳಿಗೆ ನ್ಯಾಯ ದೊರಕಿಲ್ಲ. ಹಿಂದೆ ಶ್ರೀ ದೊರೈ ರಾಜ್ ಅವರು ಕಮೀಷನರ್ ಆಗಿದ್ದರು. ಅವರ ಕಾಲದಲ್ಲೂ ಏನು ಆಗಲಿಲ್ಲ. ಈಗ ತೆರೇಸಾ ಭಟ್ಟಾಚಾರ್ಯ ಅವರು ಕಮಿಷನರ್ ಆಗಿ ಬಂದಿದ್ದಾರೆ. ಇವರು ಒಳ್ಳೆಯವರು ಎಂದು ಕೇಳಿದ್ದೇನೆ. ಇವರು ಮದರ್ ತೆರೇಸಾ ತರಹ ಆಗಲಿ ಎಂದು ಆಶಿಸುತ್ತೇನೆ. ಅಲ್ಲಿ ಜೂನಿಯರ್‌ನವರೆಲ್ಲಾ ಮೇಲೆ ಬಂದಿದ್ದು ಸೀನಿಯರ್ ಆಗಿರುವ ಎಸ್.ಸಿ. ಎಸ್.ಟಿ. ಅಧಿಕಾರಿಗಳ ಬಗ್ಗೆ ಸೀನಿಯಾರಿಟಿ ರೆಸ್ಟೋರ್ ಮಾಡಿಲ್ಲ. ಉದಾಹರಣೆಗೆ ಡಾಕ್ಟರುಗಳ ಬಗ್ಗೆ ಅಂದರೆ ಮೆಡಿಕಲ್ ಆಫೀಸರ್‌ಗಳ ಬಗ್ಗೆ ಹೇಳುವುದಾದರೆ ೧೯೭೭ ರಲ್ಲಿ ಸೀನಿಯಾರಿಟಿ ಲಿಸ್ಟ್ ಮಾಡಿದ್ದಾರೆ. ಲಿಸ್ಟ್ ಮಾಡಿದ ನಂತರ ಒಂದರಿಂದ ಎಂಟು ಜನರಿಗೆ ಎಂ.ಓ.ಹೆಚ್. ಆಗಿ ಪ್ರೋಮೋಷನ್ ಕೊಟ್ಟಿದ್ದಾರೆ. ಆದರೆ ೭ನೇ ಸೀರಿಯಲ್ ನಂಬರ್‌ನವರಿಗೆ ಇಲಾಖಾ ಪರೀಕ್ಷೆ ಮಾಡಿಲ್ಲ ಎಂದು ಪ್ರೊಮೋಷನ್ ಕೊಟ್ಟಿಲ್ಲ. ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್ ಎಂ.ಓ.ಹೆಚ್. ಇದ್ದು ಇವರು ಇಲಾಖಾ ಪರೀಕ್ಷೆಯಲ್ಲಿ ಪಾಸಾಗಿದ್ದರೂ ಇವರಿಗೆ ಮೊದಲಿನ ಪ್ರಿನ್ಸಿಪಲ್ ಅಪ್ಲೈ ಮಾಡುತ್ತಿಲ್ಲ. ಏತಕ್ಕೆಂದರೆ ಇವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ಆತನನ್ನು

ಒಂದು ವರ್ಷದಲ್ಲಿ ೬ ಸಲ ಟ್ರಾನ್ಸ್‌ಫರ್ ಮಾಡಿದ್ದಾರೆ. ಅಲ್ಲಿ ಹೇಳುವವರು ಕೇಳುವವರು ಯಾರೂ ಇಲ್ಲವೇ? Are we orphans in this State? ಮಂತ್ರಿಗಳಿದ್ದಾರೋ ಇಲ್ಲವೋ, ಕಾರ್ಪೊರೇಷನ್ ಕಮಿಷನರ್ ಮತ್ತು ಅಡ್ಮಿನಿಸ್ಟ್ರೇಟರ್ ನ್ಯಾಯವಾಗಿ ನಡೆದುಕೊಳ್ಳುತ್ತಿದ್ದಾರೋ ಇಲ್ಲವೋ ಎಂಬ ಶಂಕೆಯುಂಟಾಗುತ್ತಿದೆ. ಇದೇನು ಹೈದರಾಬಾದ್ ನಿಜಾಮನ ರಾಜ್ಯವೇನೋ ಎಂದೆನಿಸುತ್ತಿದೆ. No rules, nothing. Injustice is being done constantly to SCs/STs employees. Harassment is being faced by SCs/STs employees ಆದ್ದರಿಂದ ಸರಿಯಾದ ನ್ಯಾಯ ನಮಗೆ ಸಿಗುವಂತಾಗಬೇಕು. ಇಲ್ಲವಾದರೆ ನಿಜವಾಗಿಯೂ ಮನಸ್ಸಿಗೆ ಅಸಮಾಧಾನವಾಗುತ್ತದೆ. ಎಸ್.ಸಿ. ಎಸ್.ಟಿ. ನೌಕರರು ಏನಿದ್ದಾರೆ ಅವರಿಗೆ ಸಿನಿಯಾರಿಟಿ ಮತ್ತು ಇನ್ನಿತರ ಎಲ್ಲ ಸೌಲಭ್ಯಗಳನ್ನೂ ಕೊಡಬೇಕು. ಆರೋಗ್ಯ ಇಲಾಖೆ ಡೈರೆಕ್ಟರ್ ಅವರನ್ನು ಮತ್ತಿತರರನ್ನು ಮೂರು ವರ್ಷವಾದ ಮೇಲೆ ಬದಲಾವಣೆ ಮಾಡಿ. ಯಾರು ಯಾರು ಅನ್‌ಕ್ವಾಲಿಫೈಡ್ ಇದ್ದಾರೆ ಅವರಿಗೆ why should you give promotions when other qualified candidates are there to go and held the post of M.H.O. ಆದ್ದರಿಂದ ಮಾನ್ಯ ಮಂತ್ರಿಗಳು ಇಂಥ ಅನ್ಯಾಯಗಳಿಗೆ ಫುಲ್‌ಸ್ಟಾಪ್ ಹಾಕುತ್ತೀರಿ ಎಂದು ಆಶಿಸಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಮಾಳಗಿ (ಬ್ಯಾಡಗಿ).— ಮಾನ್ಯ ಅಧ್ಯಕ್ಷರೇ, ಮಾನ್ಯ ಪೌರಾಡಳಿತ ಸಚಿವರು ಮಂಡಿಸಿರತಕ್ಕ ಬೇಡಿಕೆಯನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಾ ಈ ಇಲಾಖೆಗಳಲ್ಲಿ ಆಗಿರತಕ್ಕ ಪ್ರಗತಿಯ ಕೆಲಸ ಕಾರ್ಯಗಳನ್ನು ಹಾಗೂ ಅಲ್ಲಲ್ಲಿ ಕಂಡುಬರುವ ನ್ಯೂನತೆಗಳನ್ನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇನೆ, ನಮ್ಮ ರಾಜ್ಯದಲ್ಲಿ ಐದು ಸಿಟಿ ಕಾರ್ಪೊರೇಷನ್‌ಗಳು ೧೩ ಸಿಟಿ ಮುನಿಸಿಪಲ್ ಕೌನ್ಸಿಲ್‌ಗಳು, ೨೧೪ ಟೌನ್ ಮುನಿಸಿಪಲ್ ಕೌನ್ಸಿಲ್‌ಗಳು ಇವೆ. ಅಲ್ಲಿ ಚುನಾಯಿತ ಪ್ರತಿನಿಧಿಗಳಿಂದ ಆಡಳಿತ ನಡೆಸಲ್ಪಡುತ್ತಿವೆ. ಈ ಸಂಸ್ಥೆಗಳಿಗೆ ಇರತಕ್ಕ ಅಧಿಕಾರ ವ್ಯಾಪ್ತಿಯನ್ನು ನಾವು ಸೂಕ್ಷ್ಮವಾಗಿ ನೋಡಿದರೆ ಏನೂ ಇಲ್ಲ ಎಂದು ಹೇಳಬಹುದು. ೨೪ ವರ್ಷಗಳ ಕಾಲ ನಾನು ನಗರಸಭಾ ಸದಸ್ಯನಾಗಿ ಕೆಲಸ ಮಾಡಿದ್ದೇನೆ. ಈಗಲೂ ಕೂಡ ಕೆಲಸ ಮಾಡುತ್ತಿದ್ದೇನೆ. ಅಲ್ಲಿ ಅಧಿಕಾರ ವ್ಯಾಪ್ತಿ ಎಲ್ಲಾ ಅಧಿಕಾರಿಗಳ ಕೈಯಲ್ಲಿ ಮತ್ತು ಸರ್ಕಾರದ ಕೈಯಲ್ಲಿ ಇದೆ. ನಾವು ಬಾಂಬೆ ಕರ್ನಾಟಕ ಏರಿಯಾದಿಂದ ಬಂದಿರತಕ್ಕವರು. ಕರ್ನಾಟಕ ಪ್ರಾಂತೀಕರಣದ ಪೂರ್ವದಲ್ಲಿ ಮುಂಬೈ ಮುನಿಸಿಪಲ್ ಆಕ್ಟಿನಲಿ ನಗರ ಸಭೆಗೆ ಸಂಪೂರ್ಣವಾಗಿ ಹೆಚ್ಚು ಕೆಲಸ ಮಾಡತಕ್ಕ ಅಧಿಕಾರಿಗಳನ್ನು ಆಳವಡಿಸಿಕೊಳ್ಳಲಾಗಿತ್ತು. ಆದರೆ ಇವತ್ತು ಏನಾಗಿದೆಯೆಂದರೆ ಕರ್ನಾಟಕ ಪ್ರಾಂತೀಕರಣವಾದ ಮೇಲೆ ಇಡೀ ರಾಜ್ಯಕ್ಕೆ ಒಂದೇ ತರಹದ ಕಾನೂನನ್ನು ಜಾರಿಗೆ ಕೊಡಬೇಕಾದುದು ನ್ಯಾಯ, ಬೇರೆ ಬೇರೆ ಕಡೆಗೆ ಬೇರೆ ಬೇರೆ ತರಹದ ಕಾನೂನುಗಳು ಇರಬಾರದು ಎಂಬ ಉದ್ದೇಶದಿಂದ ಸರ್ಕಾರ ಒಂದು ಸಮಗ್ರವಾದ ಕಾನೂನನ್ನು ಇಡೀ ರಾಜ್ಯದ ಎಲ್ಲ ನಗರಸಭೆಗೆ ಅಳವಡಿಸಿ ಕಾನೂನು ರಚನೆ ಮಾಡಿದೆ. ಈ ರೀತಿ ರಚನೆ ಮಾಡುವಾಗ ಇದರಲ್ಲಿ ಕೊಟಿರತಕ್ಕ ಅಧಿಕಾರ ವ್ಯಾಪ್ತಿಯಾದರೂ ಏನು ಎಂಬುದನ್ನು ನೋಡಬೇಕಾಗಿದೆ. ನಗರ ಸಭೆಯ ಕೆಲವು ಅಧಿಕಾರಿಗಳನ್ನು ನೌಕರರನ್ನು ನೇಮಿಸಿಕೊಳ್ಳತಕ್ಕ ಅಧಿಕಾರ ಡಿವಿಜನಲ್ ಕಮಿಷನರ್‌ರವರಿಗೆ ಮಾತ್ರ ಇದೆ. ನಾಲ್ಕನೇ ದರ್ಜೆ ನೌಕರರನ್ನು, ಕಸ ಗುಡಿಸುವವರನ್ನು ಗಟಾರದ ಕೆಲಸ ಮಾಡುವವರನ್ನು ನೇಮಿಸಿಕೊಳ್ಳುವುದು ಮುನಿಸಿಪಾಲಿಟಿಗಳು. ಈ ರೀತಿ ತಾರತಮ್ಯ ಇರುವುದರಿಂದ ನಗರಸಭೆಯು ಹೆಚ್ಚು ಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಕಾಮಗಾರಿಗಳನ್ನು ಮಾಡುವಾಗ ಮೂರು ಸಾವಿರ ರೂಪಾಯಿಗೆ ಒಳಪಟ್ಟಿದ್ದರೆ ಸ್ಥಾಯಿ ಸಮಿತಿಯಲ್ಲಿ ಮತ್ತು ವರ್ಕ್ಸ್ ಕಮಿಟಿಯಲ್ಲಿ ಎಸ್ಟಿಮೇಟನ್ನು ಮಂಜೂರು ಮಾಡಬೇಕು, ೫೦ ಸಾವಿರ ರೂಪಾಯಿ ಒಳಗಿರುವ ಕೆಲಸಕಾರ್ಯಗಳನ್ನು ಮುನ್ಸಿಪಲ್ ಕೌನ್ಸಿಲ್‌ಗಳು ಎಸ್ಟಿಮೇಟನ್ನು ಮಂಜೂರು ಮಾಡಿ ಕೆಲಸ ಮಾಡಿಸುವ ವ್ಯವಸ್ಥೆ ಇದ್ದು ೫೦ ಸಾವಿರಕ್ಕೂ ಮೇಲ್ಪಟ್ಟಿದ್ದರೆ ಲೋಕೋಪಯೋಗಿ ಇಲಾಖೆಯವರಿಗೆ ಕೆಲಸವನ್ನು ವಹಿಸ ಬೇಕು ಎಂದಿದೆ. ಅವರಿಗೆ ವಹಿಸಿ ಹನ್ನೆರಡೂವರೆ ಪರ್ಸೆಂಟ್ ಸೂಪರ್‌ವೈಸಿಂಗ್ ಚಾರ್ಜ್ ಕೊಡಬೇಕು. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿರುವ ಜೂನಿಯರ್ ಇಂಜಿನಿಯರ್ ಗ್ರೇಡಿನವರು ನಗರಸಭೆಯಲ್ಲಿ ಒಬ್ಬರು ಇಂಜಿನಿಯರ್ ಆಗಿ ಇರುತ್ತಾರೆ ಎಲ್ಲಾ ಕೆಲಸ ಕಾರ್ಯಗಳನ್ನೂ ಇವರು ನೋಡಿಕೊಳ್ಳುತ್ತಾರೆ. ಇದರ ಜೊತೆಗೆ ಪಿ.ಡಬ್ಲ್ಯೂ.ಡಿ.ಗೆ ಹೆಚ್ಚಿನ ತೆರಿಗೆ ಕೊಡಬೇಕಾಗಿದೆ. ಈ ಅಧಿಕಾರ ವ್ಯಾಪ್ತಿ ನಗರ ಸಭೆಗೇ ಇದ್ದರೆ ಇನ್ನೂ ಹೆಚ್ಚಿನ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾಮಗಾರಿ

ಗಳನ್ನು ಕೂಡಲೇ ತ್ವರಿತಗತಿಯಿಂದ ಮಾಡಬೇಕು. ಅಲ್ಲಿರತಕ್ಕ ನಾಗರೀಕರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಿಕೊಡಬೇಕು ಎಂದು ಲವಲವಿಕೆಯಿಂದ ಕೆಲಸ ಮಾಡುವುದಕ್ಕೆ ಈಗಿರತಕ್ಕ ನಿಯಮಗಳು ಅಡ್ಡಿಯಾಗಿವೆ. ಈಗಿನ ನಿಯಮದ ಪ್ರಕಾರ ಯಾವುದಾದರೂ ಕಾರ್ಯದ ಬಗ್ಗೆ ಯೋಜನೆ ತಯಾರು ಮಾಡಿದರೂ ಅದನ್ನು ಎಗ್ಸಿಕ್ಯುಟೀವ್ ಇಂಜಿನಿಯರ್‌ರವರಿಗೆ ಸ್ಕ್ರೂಟಿನಿಗೆ ಕಳುಹಿಸಿಕೊಡಬೇಕು. ಅವರು ಎಗ್ಸಿಕ್ಯುಟೀವ್ ಇಂಜಿನಿಯರಿಗೆ ಕಳುಹಿಸಬೇಕು. ಅವರು ೧೫ ದಿವಸವೋ ತಿಂಗಳೋ ಇಟ್ಟುಕೊಂಡು ಅವಕಾಶ ಸಿಕ್ಕಿದಾಗ ಬಂದು ಸ್ಥಳಪರೀಕ್ಷೆ ಮಾಡಿ ಎಸ್ಟಿಮೇಟ್ ಸ್ಕ್ರೂಟಿನಿ ಮಾಡಿ ನಂತರ ನಗರಸಭೆಗೆ ಕಳುಹಿಸಬೇಕು. ಹೀಗೆ ಕೆಲಸವಾಗಲು ವಿಳಂಬವಾಗುವುದರಿಂದ ನಗರ ಸಭೆಯವರು ಸಾರ್ವಜನಿಕರಿಗೆ ಮಾಡಬೇಕಾದ ಕೆಲಸಕಾರ್ಯಗಳೂ ವಿಳಂಬವಾಗುತ್ತಿವೆ. ಆದ್ದರಿಂದ ಮಾನ್ಯ ಸಚಿವರು ಈ ದಿಸೆಯಲ್ಲಿ ತೀವ್ರಗತಿಯಿಂದ ಗಮನ ಕೊಟ್ಟು ನಗರಸಭೆಗೆ ಹೆಚ್ಚಿನ ಅಧಿಕಾರ ಮತ್ತು ಆರ್ಥಿಕ ಕೊಟ್ಟು ಅಧಿಕಾರಿಗಳನ್ನೂ ಕೂಡ ಹೆಚ್ಚಾಗಿ ಕೊಟ್ಟು ಕೆಲಸಕಾರ್ಯಗಳು ಶೀಘ್ರಗತಿಯಲ್ಲಿ ಸಾಗಲು ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಗರ ಸಭೆಯ ನೌಕರರ ವಿಷಯದಲ್ಲಿ ಹೇಳುವುದಾದರೆ ಅಲ್ಲಿ ಕೆಲವು ಮೇಲ್ದರ್ಜೆ ನೌಕರರನ್ನು ಮಾತ್ರ ಸರ್ಕಾರೀ ನೌಕರರು ಎಂದು ಪರಿಗಣಿಸಿ ಕೆಳದರ್ಜೆ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿಲ್ಲ. ನನ್ನ ದೃಷ್ಟಿಯಲ್ಲಿ ನಗರಸಭೆಯಲ್ಲಿ ಕೆಲಸ ಮಾಡತಕ್ಕ ಎಲ್ಲ ನೌಕರರನ್ನೂ ಸರ್ಕಾರಿ ನೌಕರರೆಂದು ಪರಿಗಣಿಸಿದರೆ ಸಂತೋಷ. ಅಲ್ಲಿರತಕ್ಕ ಸಣ್ಣ ಸಣ್ಣ ನೌಕರರನ್ನು ಒಂದು ನಗರ ಸಭೆಯಿಂದ ಇನ್ನೊಂದು ನಗರಸಭೆಗೆ ವರ್ಗಾವಣೆ ಮಾಡಿದರೆ ತೊಂದರೆಯಾಗುತ್ತದೆಂಬ ದೃಷ್ಟಿಯಿಂದ ಅಲ್ಲೇ ಕೆಲಸ ಮಾಡುವಂತೆ ಮಾಡುವುದರ ಜೊತೆಗೆ ಅಲ್ಲಿನ ನೌಕರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಸರ್ಕಾರೀ ನೌಕರರಿಗೆ ನೀಡುವ ಎಲ್ಲ ಸವಲತ್ತುಗಳನ್ನೂ ನೀಡಿದರೆ ಆ ನೌಕರರು ತಮ್ಮ ಜೀವನದಲ್ಲಿ ಏನಾದರೂ ಸಾಧನೆ ಮಾಡಿಕೊಳ್ಳುವುದಕ್ಕೆ ಸಾಧ್ಯ. ಸರ್ಕಾರದಲ್ಲಿ ನಾಲ್ಕನೇ ದರ್ಜೆ ನೌಕರರಿಗೆ ಕೂಡ ಪೆನ್‌ಷನ್ ಸಿಗುತ್ತದೆ.

೨-೩೦ ಪಿ. ಎಂ.

೧೦೦ಕ್ಕೆ ೨೦-೩೦ ರೂಪಾಯಿ ಬಡ್ಡಿಯನ್ನು ಕೊಟ್ಟು ನಿರ್ಮೂಲವಾಗುತ್ತಿದ್ದಾರೆ. ಆದ್ದರಿಂದ ಇದನ್ನು ಇಲ್ಲಿ ಪರಿಗಣಿಸಿ ಕೋ ಆಪರೇಟೀವ್ ಸೊಸೈಟಿ ಮಾಡತಕ್ಕಂಥ ಏರ್ಪಾಡು ಮಾಡಿ ಇದರಲ್ಲಿ ೪೦-೪೫ ಷೇರು ಬಂಡವಾಳವೇ ಇದೆ. ಸೊಸೈಟಿಗೆ ಷೇರು ಹಣವನ್ನು ಕಟ್ಟಿದರೆ ಅಲ್ಲಿಯ ಚೀಫ್ ಆಫೀಸರ್ ಆಗಿರತಕ್ಕಂಥವರು ಆ ವರ್ಷದಲ್ಲಿ ಹಣವನ್ನು ಜಮಾನೆ ಮಾಡಲಿಲ್ಲ. ನಗರಸಭೆಯವರು ಬಳಸಿಕೊಂಡರು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನೌಕರರಿಗೆ ಇರತಕ್ಕಂಥ ತೊಂದರೆಗಳನ್ನು ಮನವರಿಕೆ ಮಾಡಿಕೊಂಡು ಅವರಿಗೆ ಅನುಕೂಲ ಮಾಡುವ ಬದಲಾಗಿ ತೊಂದರೆಗಳನ್ನೇ ಜಾಸ್ತಿ ಮಾಡುತ್ತಿದ್ದಾರೆ. ಅಲ್ಲಿರತಕ್ಕಂಥ ನಾಲ್ಕನೇ ದರ್ಜೆ ನೌಕರರು ಯಾರನ್ನೂ ಪೂರ್ತಿವೇಳೆ ನೌಕರರನ್ನಾಗಿ ತೆಗೆದುಕೊಳ್ಳುತ್ತಿಲ್ಲ. ನೌಕರರನ್ನು ನೇಮಕ ಮಾಡಿಕೊಳ್ಳುವಾಗ ಸರ್ಕಾರಿ ನೌಕರರನ್ನು ಯಾವರೀತಿ ನೇಮಕ ಮಾಡಿಕೊಳ್ಳುತ್ತೀರಿ ಆ ರೀತಿಯಲ್ಲಿ ನೇಮಕ ಮಾಡಿಕೊಳ್ಳಬೇಕೆಂದು ನಾನಾದರೂ ಹೇಳುತ್ತೇನೆ. ಈ ನೌಕರರನ್ನು ಡಿವಿಜನಲ್ ಕಮಿಷನರ್‌ರವರೇ ನೇಮಕ ಮಾಡತಕ್ಕಂಥ ಕಾನೂನು ಇರುತ್ತದೆ. ಇದನ್ನು ನಾನು ಒಪ್ಪುತ್ತೇನೆ. ಇಲ್ಲೂ ಕೂಡ ಒಂದು ನಂಬಿಕೆಯಿಂದ ಕೆಲಸವಾಗಬೇಕು. ಆದರೆ ನನ್ನ ಸಲಹೆ ಇಷ್ಟೇ ಜಿಲ್ಲಾಮಟ್ಟದಲ್ಲಿ ಮುನ್ಸಿಪಲ್ ನೌಕರರನ್ನು ನೇಮಿಸಿಕೊಳ್ಳುವಾಗ ಒಂದು ಸಮಿತಿಯನ್ನು ರಚನೆ ಮಾಡಿ. ಅಲ್ಲಿ ಸರ್ಕಾರಿ ಅಧಿಕಾರಿಗಳೇ ಚೇರ್‌ಮನ್ ಆಗಿ ನೇಮಿಸಲಿ ನಗರಸಭಾ ಸದಸ್ಯರಲ್ಲಿ ಚೇರ್‌ಮನ್‌ರಾಗಲಿ, ಈ ನಾಲ್ಕನೆದರ್ಜೆಯ ನೌಕರರನ್ನು ನೇಮಕ ಮಾಡುವಾಗ, ಯಾರು ಕಸ ಗುಡಿಸುವವರ, ಘಟಾರಗಳನ್ನು ಶುದ್ಧ ಮಾಡುವವರ ಪರಿಸ್ಥಿತಿಯನ್ನು ಗಮನಿಸಿ ಸರಿಯಾದಂಥ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಲು ಇಚ್ಛಿಪಡುತ್ತೇನೆ.

ಸನ್ಮಾನ್ಯ ಸದಸ್ಯರೆ, ಈ ಸದನದಲ್ಲಿ ನಾನು ಈವತ್ತೇ ಹೊಸದಾಗಿ ಮಾತನಾಡುತ್ತಿರುವುದರಿಂದ ದಯವಿಟ್ಟು ನನಗೆ ಇನ್ನಷ್ಟು ಕಾಲಾವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಈ ಸಂಸ್ಥೆಯಲ್ಲಿ ೨೨೪ ಜನ ಬಡಜನರು, ಅವರಲ್ಲೂ ನಾಲ್ಕನೇದರ್ಜೆಯವರು ವಿಶೇಷವಾಗಿರುತ್ತಾರೆ. ಇದರಲ್ಲಿ ೯೦ ಪರ್ಸೆಂಟ್‌ನಷ್ಟು ಹರಿಜನರೇ ಇದ್ದಾರೆ. ಇವರನ್ನು ಮೊದಲು ಸ್ವೀಪರ್ಸ್ ಮತ್ತು ಘಟಾರ್ಸ್ ಚೊಕ್ಕಟಮಾಡುವವರನ್ನು ಬಂಗಿ ಎಂದು ಕರೆಯುತ್ತಿದ್ದರು. ಇವೆಲ್ಲ ಹೆಸರುಗಳನ್ನು ತೆಗೆದು ಮಾನ್ಯ ಬಸವಲಿಂಗಪ್ಪ ನವರು ಪೌರಾಡಳಿತ ಸಚಿವರಾಗಿದ್ದಾಗ ಪೌರ ಕಾರ್ಮಿಕರು ಎಂದು ಹೆಸರು ಬದಲಾಯಿಸಿ

ದರು, ಹೆಸರು ಬದಲಾಯಿಸಿದ ಮಾತ್ರಕ್ಕೆ ಏನು ಆಗಲಿಲ್ಲ. ಅವರು ಅದೇ ಕೆಲಸವನ್ನು ಮಾಡಿಕೊಂಡು ಬರುತ್ತಿರುತ್ತಾರೆ. ಹೆಸರು ಮಾತ್ರ ಬದಲಾವಣೆಯಾಯಿತು. ಮೊದಲಿನಂತೆ ತೀರ ಕೀಳುಮಟ್ಟದ ಕೆಲಸವನ್ನು ಮಾಡಿಕೊಂಡು ಬರುತ್ತಿರುತ್ತಾರೆ. ಮಲಮೂತ್ರ ಮತ್ತು ಈ ಘಟಾರಗಳಲ್ಲಿ ಕೆಲಸ ಮಾಡತಕ್ಕಂಥ ಸಂದರ್ಭದಲ್ಲಿ ಅನೇಕ ಅಂಟುರೋಗಗಳಿಗೆ ಬಲಿಯಾಗತಕ್ಕಂಥ ನಿದರ್ಶನಗಳು ಇರುತ್ತದೆ. ಕುಷ್ಟರೋಗ, ದೊಡ್ಡಬೇನೆ, ಲೆಪ್ರಸಿ, ಮೇಹ ಇವೇ ಮುಂತಾದ ಉಗ್ರ ಕಾಯಿಲೆಗಳು ಅವರಿಗೆ ಬರುವುದು ಉಂಟು. ಅವರು ವಿಶೇಷವಾಗಿ ಇಂಥ ಪರಿಸರದಲ್ಲಿಯೇ ಕೆಲಸ ಮಾಡುವುದರಿಂದ ಅವರಿಗೆ ತೀವ್ರಗತಿಯಲ್ಲಿ ಇಂಥ ರೋಗಗಳು ಅಂಟಿಕೊಳ್ಳುತ್ತವೆ. ನನ್ನ ನಗರಸಭೆಯಲ್ಲಿ ಇದೇರೀತಿಯಲ್ಲಿ ಬಂಗಿ ಕೆಲಸ ಮಾಡಿಕೊಂಡಿದ್ದ ಪೆದ್ದಪ್ಪ ಎನ್ನುವನು ಇದೇ ರೀತಿಯಾದ ಕಾಯಿಲೆಯಿಂದ ಸತ್ತುಹೋದ, ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಅವರಿಗೆ ಯಾವ ವಿಧವಾದ ಆಸ್ಪತ್ರೆಯ ಸೌಲಭ್ಯವಾಗಲಿ, ಔಷದೋಪಚಾರದ ಸೌಲಭ್ಯವಾಗಲಿ ಇರುವುದಿಲ್ಲ. ಇಂಜಕ್ಷನ್ ಮತ್ತು ಔಷಧಿಗಳನ್ನು ತೆಗೆದುಕೊಳ್ಳಬೇಕಾದರೆ ತನ್ನ ಸ್ವಂತ ಖರ್ಚಿನಲ್ಲಿ ತೆಗೆದುಕೊಳ್ಳಬೇಕು. ಇಂಥ ದೊಡ್ಡ ಬೇನೆಗಳಿಗೆ ಇವತ್ತಿನ ಪರಿಸ್ಥಿತಿಯಲ್ಲಿ ಔಷಧಿಗಳನ್ನು ತೆಗೆದುಕೊಳ್ಳಲು ಸಾಧ್ಯವೇ ಎನ್ನುವುದನ್ನು ವಿಚಾರ ಮಾಡಬೇಕಾಗಿರುತ್ತದೆ. ಒಂದು ಮಾತ್ರೆಗೆ ೧ ರೂಪಾಯಿ ೧–೨೦ ಪೈಸೆ ಯಾಗುತ್ತದೆ. ಇಷ್ಟೊಂದು ಖರ್ಚನ್ನು ಭರಿಸಲು ಶಕ್ತಿ ಬರುವುದಿಲ್ಲ. ಇಂಥ ಪರಿಸರದಲ್ಲಿ ಕೆಲಸ ಮಾಡತಕ್ಕಂಥ ನೌಕರನ್ನು ಈ ರೋಗದಿಂದ ಮುಕ್ತನಾಗುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ ಈ ನೌಕರರಿಗೆ ಕಂಪಲ್‌ಸರಿಯಾಗಿ ವೈದ್ಯಕೀಯ ಸೌಲಭ್ಯ ಸಿಗುವಂಥ ವ್ಯವಸ್ಥೆಯಾಗಬೇಕು. ಎಲ್ಲ ನಗರ ಸಭೆಯ ಆಸ್ಪತ್ರೆಗಳಿಗೂ ಈ ರೀತಿಯಾದ ಒಂದು ವ್ಯವಸ್ಥೆಯನ್ನು ಮಾಡಬೇಕು. ಅವರಿಗೆ ಎಷ್ಟು ಖರ್ಚು ಬರಲಿ ಆಸ್ಪತ್ರೆಗಳಲ್ಲಿ ಖರ್ಚನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕು. ಮಾನ್ಯ ಅಧ್ಯಕ್ಷರೇ ಈವತ್ತು ನಮಗೆ ಎಲ್ಲ ಸೌಕರ್ಯಗಳು ಇರುತ್ತವೆ. ಆಸ್ಪತ್ರೆ ಸೌಕರ್ಯವಿದೆ. ಬಸ್ ಸೌಕರ್ಯವಿದೆ, ರೈಲ್ವೆ ಸೌಕರ್ಯವಿದೆ ಆದರೆ ಅವರೂ ಕೂಡ ನಮ್ಮಂಥ ಮನುಷ್ಯರೇ. ನಮಗೆ ಇರತಕ್ಕಂಥ ಎಲ್ಲ ಸೌಕರ್ಯಗಳಿದ್ದರೂ ಕೂಡ ಅವರು ಕೆಲಸ ಮಾಡತಕ್ಕಂಥ ಪರಿಸರ ಮತ್ತು ಸಂದರ್ಭಗಳಲ್ಲಿ ಇಂಥ ಒಂದು ಅಂಟುರೋಗಕ್ಕೆ ಗುರಿಯಾಗುವುದು ಅನಿವಾರ್ಯ. ಆದ್ದರಿಂದ ಅವರಿಗೆ ವೈದ್ಯಕೀಯ ಸೌಲಭ್ಯ ಬಹಳ ಅತ್ಯಾವಶ್ಯಕವಿರುತ್ತದೆ ಅದನ್ನು ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ.

ಮತ್ತೊಂದು ವಿಷಯವೆಂದರೆ ನಗರಸಭೆಗಳಲ್ಲಿ ಕೆಲಸ ಮಾಡತಕ್ಕಂಥ ಹರಿಜನ ನೌಕರರಿಗೆ ಮನೆಗಳ ಸೌಕರ್ಯ ಮಾಡಿಕೊಡಬೇಕೆಂದು ಸರ್ಕಾರದ ಯೋಜನೆ ಇರುತ್ತದೆ. ಈ ಯೋಜನೆಯ ಪ್ರಕಾರ ಒಂದು ಮನೆಯನ್ನು ಕಟ್ಟಲು ಎರಡೂವರೆ ಸಾವಿರ ರೂಪಾಯಿಗಳ ಪ್ರಕಾರ ೧೫ ಸಾವಿರ ರೂಪಾಯಿಗಳಷ್ಟು ಸಬ್‌ಸಿಡಿ ಕೊಡುತ್ತಾರೆ. ಮಾನ್ಯ ಅಧ್ಯಕ್ಷರೇ, ಈಗಿನ ಪರಿಸ್ಥಿತಿಯಲ್ಲಿ ಮನೆಗಳನ್ನು ಕಟ್ಟಿಕೊಳ್ಳಲು ಸಾಧ್ಯವೇ ಇಲ್ಲ. ನನ್ನ ಜಿಲ್ಲೆಯಲ್ಲಿಯೇ ಹೇಳುವುದಾದರೆ ಹುಬ್ಬಳ್ಳಿ, ಗದಗ್, ಬೆಟಗೇರಿಯಲ್ಲಿ ಮಾತ್ರ ಮನೆಗಳನ್ನು ಕಟ್ಟಿಸಿ ಕೊಟ್ಟಿರುತ್ತಾರೆ. ಹುಬ್ಬಳ್ಳಿಯಲ್ಲಿ ಹರಿಜನರಿಗಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿರುತ್ತಾರೆ. ಬಹಳ ಅತ್ಯುತ್ತಮವಾಗಿ ಕಟ್ಟಿದ್ದಾರೆ. ಬಹಳ ಮೆಚ್ಚಿಗೆಯಾಗುವ ರೀತಿಯಲ್ಲಿ ಕಟ್ಟಿದ್ದಾರೆ. ಈವತ್ತು ಕರ್ನಾಟಕದಲ್ಲಿ ಯಾವ ನಗರಸಭೆಯವರೂ ಕೂಡ ಈರೀತಿಯಾಗಿ ಕಟ್ಟಿರುವುದಿಲ್ಲವೆಂದು ಹೇಳಲಿಕ್ಕೆ ಬಹಳ ಸಂತೋಷವಾಗುತ್ತದೆ. ಹರಿಜನರು ಸದಸ್ಯರಾಗಲಿ, ಅಧಿಕಾರದಲ್ಲಿರತಕ್ಕಂಥವರಾಗಲಿ ಎಲ್ಲ ದಕ್ಷತೆಯಿಂದ ಕೆಲಸಮಾಡತಕ್ಕಂಥ ಕಾರ್ಯಕರ್ತರು ಸಿಗುವುದು ಬಹಳ ಕಡಿಮೆ. ನಗರಸಭೆಗಳಲ್ಲಿ ಒಂದೊಂದು ನಗರಸಭೆಯಲ್ಲಿಯೂ ಒಬ್ಬರೋ, ಇಬ್ಬರೋ ಹರಿಜನ ಸದಸ್ಯರು ಇರುತ್ತಾರೆ. ಅವರು ಮೆಜಾರಿಟಿ ಇಲ್ಲವಾದ್ದರಿಂದ ಅವರು ಏನು ಮಾಡುವುದಕ್ಕೆ ಆಗುವುದಿಲ್ಲ. ಅವರು ಹೇಳುವುದನ್ನು ಯಾರೂ ಗಮನಿಸುವುದೂ ಇಲ್ಲ. ಆದ್ದರಿಂದ ನಾನಾದರೂ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಕಡ್ಡಾಯವಾಗಿ ನೀವು ಒಂದು ಕಾನೂನನ್ನು ಜಾರಿಗೆ ತಂದು ಎಲ್ಲ ನಗರಸಭೆಗಳಲ್ಲಿಯೂ ಇಂಥ ನೌಕರರಿಗೆ ಮನೆಗಳನ್ನು ನಿರ್ಮಾಣ ಮಾಡತಕ್ಕಂಥ ಕಾಲದಲ್ಲಿ ಕಂಪಲ್‌ಸರಿಯಾಗಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಮತ್ತೊಂದು ವಿಷಯವೆಂದರೆ ನಗರಸಭೆಗಳಲ್ಲಿ ಕೆಲಸಮಾಡತಕ್ಕಂಥ ನೌಕರರಿಗೆ ಕೆಲಸ ಮಾಡುವ ಒಂದು ಪರಿಮಿತಿ ಸೌಲಭ್ಯವಿರಬೇಕು. ನಾನು ೨೪ ವರ್ಷಗಳಿಂದ ಮುನಿಸಿಪಲ್ ಕೌನ್ಸಿಲರ್ ಇದ್ದೇನೆ. ಬಾಂಬೆಯಲ್ಲಿ ಇರತಕ್ಕಂಥ ಮಾನ್ಯುಯಲ್ ಪ್ರಕಾರ ೨೦೨ ಗಜಗಷ್ಟು ಎರಡು ವೇಳೆ ಗುಡಿಸಬೇಕೆಂದು

ಇರುತ್ತದೆ. ನಮ್ಮ ಕರ್ನಾಟಕದಲ್ಲಿ ಇನ್ನೂ ಆ ರೀತಿಯಾದ ಒಂದು ಮಾನ್ಯುಯಲ್ ತಯಾರು ಮಾಡಿಲ್ಲ ವೆಂದು ನನಗನಿಸುತ್ತದೆ. ಮತ್ತೆ ಒಂದು ಸಾವಿರ ಜನಸಂಖ್ಯೆಗೆ ಒಬ್ಬ ಸ್ವೀಪರ್ ಕರ್ನಾಟಕದಲ್ಲಿ ಇರಬಹುದು ಎಂದು ಕಾಣುತ್ತದೆ.

ಇವತ್ತು ಅಂತರ ಎಷ್ಟೇ ಇರಲಿ, ಅದು ೨೦ ಮೈಲಿ ಇರಲಿ ಒಬ್ಬರೇ ಅಷ್ಟೂ ಕೆಲಸವನ್ನು ಮಾಡ ಬೇಕು. ಅವರಿಗೆ ಕೆಲಸದ ಮಿತಿ ಇಲ್ಲ. ಇವರಿಗೂ ಒಂದು ಮಿತಿಯಾದ ಕೆಲಸ ಕೊಡುವ ಸಲುವಾಗಿ ಮುಂಬೈ ಹೆಲ್ತ್ ಮ್ಯಾನ್ಯುಯಲ್ ಏನಿದೆ ಅದೇ ರೀತಿ ಕರ್ನಾಟಕದಲ್ಲಿಯೂ ಒಂದು ಹೆಲ್ತ್ ಮಾನ್ಯುಯಲ್ ಆಗ ಬೇಕೆಂದು ಹೇಳುತ್ತೇನೆ. ಎಷ್ಟು ಉದ್ದದ ರಸ್ತೆಗಳು ಇದ್ದರೂ ಅದಕ್ಕೆ ಸರಿಯಾಗಿ ಜನರು ಇಲ್ಲ. ಒಂದೊಂದು ಕಡೆ ೧೫–೨೦ ಕಿ. ಮೀ. ರಸ್ತೆಗಳು ಇರುತ್ತವೆ. ಒಂದು ಸಾವಿರಕ್ಕೆ ಒಬ್ಬರು ಎಂದು ಹೇಳಿದರೆ ಅದು ಕಡಿಮೆಯಾಗುತ್ತದೆ. ಈ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಅಧ್ಯಕ್ಷರೇ, ಈ ನಗರ ಸಭೆಗಳ ಮೇಲ್ವಿಚಾರಣೆ ನಡೆಸುವವರು ಯಾರು ? ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು, ಹಾಗೂ ರೆವಿನ್ಯೂ ಅಧಿಕಾರಿಗಳು ಮೇಲ್ವಿಚಾರಣೆಯಲ್ಲಿರುತ್ತಾರೆ. ಅವರಿಗೆ ಬೇರೆ ಬೇರೆ ಇಲಾಖೆಗಳಲ್ಲಿ ಕೈತುಂಬ ಕೆಲಸ ಇದೆ. ನನ್ನ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನನ್ನ ಜಿಲ್ಲೆ ೧೯ ತಾಲ್ಲೂಕುಗಳನ್ನು ಒಳಗೊಂಡ ದೊಡ್ಡ ಜಿಲ್ಲೆ. ಇಲ್ಲಿಗೆ ಒಬ್ಬ ಡೆಪ್ಯುಟಿ ಕಮೀಷನರ್ ಇದ್ದಾರೆ. ಅವರು ಎಲ್ಲ ಕೆಲಸ ಕಾರ್ಯ ಗಳನ್ನೂ ಮಾಡಬೇಕು. ಜೊತೆಗೆ ನಗರಸಭೆಯ ಕೆಲಸವನ್ನೂ ನೋಡಬೇಕು. ಇದರಿಂದ ಅವರಿಗೆ ಬಹಳ ಕಷ್ಟವಾಗುತ್ತದೆ. ಇವರಿಗೆ ಒಬ್ಬ ಶಿರಸ್ತೆದಾರರನ್ನು ಕೊಟ್ಟಿದ್ದಾರೆ. ಅವರು ನಗರಸಭೆಯ ಆಡಳಿತವನ್ನು ನೋಡಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ, ನಮ್ಮ ಮುನಿಸಿಪಾಲಿಟಿಯಿಂದ ಒಂದು ಡಿಸ್ಪೆನ್ಸರಿಯನ್ನು ನಡೆಸುತ್ತಿದ್ದೇವೆ. ಅದಕ್ಕೆ ಒಬ್ಬ ಡಾಕ್ಟರ್‌ನ್ನು ನೇಮಕ ಮಾಡಬೇಕಾಗಿತ್ತು. ಅವರನ್ನು ನೇಮಕ ಮಾಡತಕ್ಕ ಅಧಿಕಾರವನ್ನು ನಮ್ಮಿಂದ ಕಿತ್ತುಕೊಂಡು ಅದನ್ನು ಡೆಪ್ಯುಟಿ ಕಮಿಷನರ್ ಅವರಿಗೆ ಕೊಟ್ಟರು. ಡೆಪ್ಯುಟಿಕಮಿಷನರ್ ಕಛೇರಿಯಿಂದ ಡಾಕ್ಟರಾಗಿ ಅಪಾಯಿಂಟ್ ಮಾಡಿದ್ದಾರೆ ಎಂದು ಒಬ್ಬ ಎಂ. ಬಿ. ಬಿ. ಎಸ್. ಡಾಕ್ಟರ್ ಒಂದು ಆರ್ಡರ್ ತೆಗೆದುಕೊಂಡು ಬಂದ, ಅದು ಬೋಗಸ್ ಆರ್ಡರ್ ಆಗಿತ್ತು. ಆ ಆರ್ಡರ್‌ಗೆ ಸಹಿ ಸಹಾ ಆಗಿತ್ತು. ಎಲ್ಲಾ ಸರಿಯಾಗಿತ್ತು. ಅವರಿಗೆ ತೊಂದರೆ ಏನೆಂದರೆ ನಾನು ಅಲ್ಲಿ ಚೇರ್ಮನ್ ಆಗಿದ್ದೆ. ಅದು ಬೋಗಸ್ ಎಂದು ತಿಳಿದು ಆ ಬಗ್ಗೆ ಸರ್ಕಾರಕ್ಕೆ ದೂರು ಕೊಡಬೇಕೆಂದು ಅವರಿಗೆ ಬೆಳಿಗ್ಗೆ ಹಾಜರಿಯಾಗಲು ಹೇಳಿದೆ. ಆದರೆ ಮಾರನೆದಿನ ಅವರು ಹಾಜರಾಗಲಿಲ್ಲ. ಇದನ್ನೆಲ್ಲಾ ಅಲ್ಲಿ ಡಪ್ಯುಟಿ ಕಮಿಷನರ್ ಕಛೇರಿಯ ಶಿರಸ್ತೇದಾರ್ ಮಾಡಿರತಕ್ಕದ್ದು. ಈ ಬಗ್ಗೆ ತಪಾಸಣೆ ಆಗಬೇಕು. ಮತ್ತೊಂದು ವಿಷಯ ಎಂದರೆ, ಇಲ್ಲಿನ ಹೆಲ್ತ್ ಇನ್ಸ್‌ಪೆಕ್ಟರ್ ಅವರು ಮೈಲಿಗೆ ಕೆಲಸ ಮಾಡುತ್ತಿದ್ದಾರೆ, ಇಲ್ಲಿನ ಹೆಲ್ತ್ ಇನ್ಸ್‌ಪೆಕ್ಟರ್ ಅವರು ಮಾತ್ರ ತೆಗೆಯುತ್ತಿದ್ದಾರೆ. ಏಕಾಏಕೀ ಡಿ. ಸಿ. ಕಛೇರಿಯಿಂದ ಒಬ್ಬರನ್ನು ವ್ಯಾಕ್ಸಿನೇಟರ್ ಪೋಸ್ಟಿಗೆ ನೇಮಕ ಮಾಡಿದರು. ರಾಣೇಬೆನ್ನೂರಿನಲ್ಲಿ ಒಬ್ಬರಿಗೆ ಪ್ರಮೋಷನ್ ಕೊಟ್ಟು ಅವರನ್ನು ಇಲ್ಲಿಗೆ ವ್ಯಾಕ್ಸಿನೇಟರ್ ಆಗಿ ನೇಮಿಸಿದರು. ಇವರಿಗೆ ತರಬೇತಿ ಎಂಬುದೇ ಇಲ್ಲ. ಮುನಿಸಿಪಾಲಿಟಿಯಲ್ಲಿ ಎಸ್. ಎನ್. ಪಾಟೀಲ್ ಎಂದು ಒಬ್ಬರು ಇದ್ದರು. ಅವರು ಡಿ. ಸಿ. ಯವರಿಗೆ ಕಾಗದ ಬರೆದು ನಮ್ಮಲ್ಲಿ ವ್ಯಾಕ್ಸಿನೇಟರ್ ಪೋಸ್ಟ್ ಇಲ್ಲ. ಆದ್ದರಿಂದ ಇವರನ್ನು ಹಾಜರಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ ಎಂದು ತಿಳಿಸಿದರು. ಆ ನಂತರ ಡಿ. ಸಿ. ಕಛೇರಿಯಿಂದ ಒಂದು ಪೋಸ್ಟ್ ಕ್ರಿಯೇಟ್ ಮಾಡಿದ್ದೇವೆ. ಅವರನ್ನು ನೇಮಕ ಮಾಡಿಕೊಳ್ಳಿ ಎಂಬ ವಿಷಯವನ್ನು ಹೊತ್ತ ಕಾಗದ ಬಂದಿತು. ಈ ಬ್ಯಾಡಗಿ ಮುನಿಸಿಪಾಲಿಟಿಯಲ್ಲಿ ಅವರು ವ್ಯಾಕ್ಸಿನೇಟರ್ ಕೆಲಸ ಮಾಡುತ್ತಾ ಇಲ್ಲ. ಅವಗಿಗೆ ಸರಿಯಾದ ಟ್ರೈನಿಂಗ್ ಆಗಿಲ್ಲ. ಈ ಬಗ್ಗೆ ಏನೂ ಕ್ರಮ ಕೈಗೊಂಡಿಲ್ಲ. ಜಿಲ್ಲಾಧಿಕಾರಿಯವರಿಗೆ ಎಲ್ಲಾ ಕಾಗದವನ್ನು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಇದಕ್ಕೇ ಒಂದು ಸೆಕ್ರೆಟರಿಯೇಟ್ ಆಗಬೇಕೆಂದು ನಾನು ಹೇಳುತ್ತೇನೆ. ಜಿಲ್ಲಾ ಮಟ್ಟದ ನಗರ ಸಭೆಯ ಆಡಳಿತವನ್ನು ನೋಡಿಕೊಳ್ಳುವುದಕ್ಕೆ ಒಬ್ಬ ಅಧಿಕಾರಿ ಬೇಕೆಂದು ನಾನು ಹೇಳುತ್ತೇನೆ. ಇನ್ನು ನಗರಸಭೆಗಳಲ್ಲಿ ನೌಕರರನ್ನು ನೇಮಕ ಮಾಡುವ ಬಗ್ಗೆ ಒಂದೆರಡು ವಿಷಯ ಗಳನ್ನು ತಿಳಿಸುತ್ತೇನೆ. ನಮ್ಮಲ್ಲಿ ಅರ್ಧ ದಿವಸದ ಕೂಲಿಗಾರರು ಎಂದರೆ ಪಾರ್ಟ್ ಟೈಮ್ ಸ್ವೀಪರ್ಸ್ ಇದ್ದಾರೆ. ಇವರನ್ನು ಪೂರ್ಣಾವಧಿ ನೌಕರರನ್ನಾಗಿ ಮಾಡಬೇಕೆಂದು ಮಾನ್ಯ ಬಸಲಿಂಗಪ್ಪನವರ ಕಾಲ ದಲ್ಲಿಯೇ ಕೇಳಿಕೊಳ್ಳಲಾಗಿತ್ತು. ಇವರನ್ನು ಖಾಯಂಗೊಳಿಸಿ ಫುಲ್‌ಟೈಮ್ ಸಂಬಳ ಕೊಡಬೇಕೆಂದು ಕಾನೂನು ಜಾರಿಗೆ ತರಲಾಯಿತು. ಆ ಬಗ್ಗೆ ಸುತ್ತೋಲೆ ಕೂಡಾ ಆಯಿತು. ಆ ಪ್ರಕಾರ ರಾಣೇ ಬೆನ್ನೂರು ನಗರಸಭೆಯಲ್ಲಿ, ಬ್ಯಾಡಗಿ ನಗರಸಭೆಯಲ್ಲಿ ಫುಲ್‌ಟೈಮ್ ಕೆಲಸಗಾರರನ್ನಾಗಿ ಮಾಡಲಾಯಿತು.

ಆ ಬಗ್ಗೆ ಠರಾವು ಮಾಡಿ ಮಂಜೂರಾತಿ ಕೊಡಬೇಕೆಂದು ಕಳುಹಿಸಿಕೊಡಲಾಯಿತು. ಸರ್ಕಾರದ ಮಂಜೂರಾತಿ ಕಾಯಲಿಲ್ಲ. ಈ ಬಗ್ಗೆ ಠರಾವು ಮಾಡಿ ಸರ್ಕಾರದ ಮಂಜೂರಾತಿಗೆ ಕಳುಹಿಸಲಾಯಿತು. ೧ ವರ್ಷದ ಮೇಲಾದರೂ ಮಂಜೂರಾತಿ ಬರದೇ ಆ ಮೇಲೆ ಮಂಜೂರಾತಿ ಬಂತು. ಫುಲ್‌ಟೈಮ್ ಪಗಾರ ಏಕೆ ಕೊಟ್ಟಿರಿ, ಏಕೆ ಫುಲ್‌ಟೈಂ ಮಾಡಿಕೊಂಡಿದ್ದೀರಿ ಎಂದು ಕೇಳಿದರು. ಆದ್ದರಿಂದ ಹೇಳುತ್ತೇನೆ. ಬೇರೆ ನಗರಗಳಲ್ಲಿ ಇರತಕ್ಕವರಿಗೂ ಫುಲ್ ಟೈಮ್ ಕೊಡುವ ವ್ಯವಸ್ಥೆ ಆಗಬೇಕು. ಇವರಿಗೆ ೨೫ ರಿಂದ ೩೫ ರೂಪಾಯಿವರೆಗೆ ಪಗಾರವನ್ನು ಕೊಡಲಾಗುತ್ತದೆ. ಎಂದರೆ ದಿನಕ್ಕೆ ೧-೨೦ ರೂಪಾಯಿ ಎಂದಾಯಿತು. ಮಿನಿಮಮ್ ವೇಜಸ್ ಆಕ್ಟ್‌ನಲ್ಲಿ ೫ ರೂಪಾಯಿ ಕೊಡಬೇಕೆಂದು ಇದೆ. ಆದರೆ ಇವರಿಗೆ ಕೊಡುತ್ತಿರುವುದು ಕೇವಲ ರೂ. ೧-೨೦ ಮಾತ್ರ. ಊರ ಕಸವನ್ನು ಗುಡಿಸಿ, ನೈರ್ಮಲ್ಯ ಕಾಪಾಡುವವರು ಇವರು. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಿ ಇವರನ್ನು ಫುಲ್‌ಟೈಂ ಎಂಪ್ಲಾಯೀಸ್ ಮಾಡುವ ವ್ಯವಸ್ಥೆ ಆಗಬೇಕೆಂದು ನಾನು ಹೇಳುತ್ತೇನೆ. ನಮ್ಮ ೬೩ ಟೌನ್ ಮುನಿಸಿಪಲ್ ಕೌನ್ಸಿಲ್‌ನಲ್ಲಿ ೧೬ ಹೊಸದಾಗಿ ರಚಿಸಲ್ಪಟ್ಟಿವೆ. ನನ್ನ ತಾಲ್ಲೂಕಿನಲ್ಲಿರುವ ಸುಮಾರು ನಗರಸಭೆಗಳಲ್ಲಿ ಆದಾಯವೇ ಇಲ್ಲದಾಗಿದೆ. ಹಿಂದೆ ನಗರಸಭೆಗಳಿಗೆ ಆಕ್ಟ್ರಾಯ್‌ನಿಂದ ಹಣ ಬರುತ್ತಾ ಇತ್ತು. ಆಕ್ಟ್ರಾಯ್ ತೆಗೆದಮೇಲೆ ಸರ್ಕಾರ ಟ್ಯಾಕ್ಸ್ ರೂಪದಲ್ಲಿ ಬರತಕ್ಕ ಹಣವನ್ನು ಕೊಡುತ್ತಾ ಇದೆ. ಹೊಸದಾಗಿ ಮಾಡಿದ ನಗರಸಭೆಗಳಿಗೆ ಈಸೌಕರ್ಯ ಇಲ್ಲವಾದ್ದರಿಂದ ಇವುಗಳಲ್ಲಿ ಹಣಕಾಸಿನ ವ್ಯವಸ್ಥೆ ಸರಿಯಾಗಿ ಇಲ್ಲವಾಗಿದೆ. ಈ ಬಗ್ಗೆ ಸರ್ಕಾರ ಗಮನಕೊಡಬೇಕು. ಆಕ್ಟ್ರಾಯನ್ನು ತೆಗೆದಿದ್ದು ಒಳ್ಳೆಯದೆಂದು ನಾನು ಹೇಳುತ್ತೇನೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ, ಒಬ್ಬ ರೈತ ತಾನು ಬೆಳೆದ ಮಾಲನ್ನು ಮಾರುವಾಗ ಟ್ಯಾಕ್ಸ್ ಕೊಡುತ್ತಾನೆ. ಕಬ್ಬಿಣದ ಮೇಲೆ ಟ್ಯಾಕ್ಸ್ ಕೊಡುತ್ತಾನೆ. ಬಟ್ಟೆ ಮೇಲೆ ಟ್ಯಾಕ್ಸ್ ಕೊಡುತ್ತಾನೆ. ತಾನು ಬೆಳೆದ ಮಾಲಿಗೆ ಆಕ್ಟ್ರಾಯ್ ಕೊಡಬೇಕಾಗಿತ್ತು. ನಗರದವರು ಮಾಡುವ ಐಷಾರಾಮದ ಜೀವನದ ವೆಚ್ಚಕ್ಕೆ ರೈತ ಟ್ಯಾಕ್ಸ್ ಕೊಡಬೇಕಾಗಿತ್ತು. ಈ ಟ್ಯಾಕ್ಸ್ ಏಕೆ ಕೊಡಬೇಕು ? ಇದನ್ನು ತೆಗೆದಿದ್ದು ಸೂಕ್ತ. ನಗರಸಭೆಯ ಆಡಳಿತಕ್ಕೆ ಇವತ್ತಿನದಿವಸ ಹಿರಿಯರು ಹೇಳಿದಹಾಗೆ ಸರ್ಕಾರವೇ ಹಣವನ್ನು ಪಳಗಿಸಬೇಕೆಂದು ನಾನು ಹೇಳುತ್ತೇನೆ. ನಗರಸಭೆಯ ಹಾಗೂ ಕಾರ್ಪೊರೇಷನ್ ಆಡಳಿತಕ್ಕೆ ಎಷ್ಟು ಖರ್ಚು ಬೇಕಾಗುತ್ತದೆ. ಅದನ್ನು ಸರ್ಕಾರದವರೇ ವಹಿಸಬೇಕು. ಸರ್ಕಾರ ಈ ಬಗ್ಗೆ ಹೆಚ್ಚಿನ ಗ್ರಾಂಟ್ ಕೊಡಬೇಕು. ಗ್ರಾಮ ನೈರ್ಮಲ್ಯವನ್ನು ಕಾಪಾಡಬೇಕಾಗುತ್ತದೆ. ಪಟ್ಟಣಗಳ ಸ್ವಚ್ಛತೆಯನ್ನು ಕಾಪಾಡಬೇಕಾಗುತ್ತದೆ. ೬೩ ನಗರಸಭೆಗಳಲ್ಲಿ ಮನೆ ನಿವೇಶನ ಇಲ್ಲದಂತಹವರಿಗೆ ನಿವೇಶನ ಕೊಡತಕ್ಕದ್ದರ ಬಗ್ಗೆ ಇಂಗ್ಲೀಷಿನಲ್ಲಿ ಅಚ್ಚುಹಾಕಿಸಿ ಕೊಡಲಾಗಿದೆ. ನನಗೆ ಇಂಗ್ಲಿಷ್ ಓದಲು ಬರುವುದಿಲ್ಲ. ಇದರಲ್ಲಿ ೩೦ ಸಾವಿರ ಜಾಗ ಇಲ್ಲದಂತಹ ನಿರ್ಗತಿಕರು ಎಲ್ಲಾ ನಗರಸಭೆಗಳಲ್ಲಿ ಇದ್ದಾರೆ. ಇದರಲ್ಲಿ ೧೦ ಸಾವಿರ ಜನರಿಗೆ ಸೈಟ್ ಕೊಡಲಾಗುವುದೆಂದು ಹೇಳಲಾಗಿದೆ. ಎಂದರೆ ಇನ್ನು ಉಳಿದ ೨೯ ಸಾವಿರ ಜನರಿಗೆ ಸೈಟುಗಳನ್ನು ಹಂಚುವುದಕ್ಕಾಗುವುದಿಲ್ಲವೆಂದಾಯಿತು. ಈ ಬಗ್ಗೆ ನಮ್ಮ ಬ್ಯಾಡಗಿಯಲ್ಲಿ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ನಡೆಯುತ್ತಿದೆ. ನಮ್ಮ ಬ್ಯಾಡಗಿಯಲ್ಲಿ ಎ.ಪಿ.ಎಂ.ಸಿ. ಯವರು ಸೈಟ್ ಹಂಚುವ ಸಲುವಾಗಿ ಜಾಗವನ್ನು ಪಡೆದು ಎಕರೆಗೆ ೧೨ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಬ್ಯಾಡಗಿ ಮುನಿಸಿಪಾಲಿಟಿಯಲ್ಲಿ ನಿರ್ಗತಿಕರಿಗೆ ಕಟ್ಟಡಗಳನ್ನು ಕಟ್ಟಿಸಿ ಕೊಡುವುದಕ್ಕಾಗಿ ಕೊಂಡ ಜಮೀನಿಗೆ ಎಕರೆಗೆ ೬ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಏಕೆ ಸ್ವಾಮಿ ಈ ತಾರತಮ್ಯ ? ಮುನಿಸಿಪಾಲಿಟಿಯವರು ಭೂಮಿಯನ್ನು ಅಕ್ವೈರ್ ಮಾಡಿಸಿಕೊಳ್ಳುವಾಗ ಪಕ್ಕ ಪಕ್ಕದಲ್ಲೆ ಇರತಕ್ಕ ಜಮೀನಿಗೆ ಒಂದಕ್ಕೆ ೬ ಸಾವಿರ ರೂಪಾಯಿ ಕೊಡುವುದು ಅದರ ಪಕ್ಕದಲ್ಲೆ ಇರವುದಕ್ಕೆ ೧೨ ಸಾವಿರ ಕೊಡುವುದು ಈ ರೀತಿ ಮಾಡಿದರೆ ತಾವು ನಿವೇಶನಗಳನ್ನು ಹಂಚುವುದಕ್ಕೆ ಆಗುವುದಿಲ್ಲ. ದಯಮಾಡಿ ಇನ್ನು ಮುಂದೆ ಈ ರೀತಿ ಆಗಬಾರದು. ಒಂದೇ ಊರಿನಲ್ಲಿ ಈ ವ್ಯತ್ಯಾಸ ಆದರೆ ಹೇಗೆ ಒಂದೇ ನೌಕರಿ ಮಾಡತಕ್ಕವರಿಗೆ ಬೇರೆ ಬೇರೆ ಸಂಬಳ ಕೊಟ್ಟರೆ ಅವರು ಹೇಗೆ ಕೆಲಸ ಮಾಡುತ್ತಾರೆ. ಇನ್ನು ಮುಂದೆ ಈ ರೀತಿಯನಾಗದಂತೆ ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು ಇನ್ನು ಕುಡಿಯುವ ನೀರಿನ ಸಲುವಾಗಿ ೨೫-೩೦ ವರ್ಷಗಳಿಂದ ಪರದಾಡಿ ಓಡಾಟ ಮಾಡಿ ಒಂದು ಯೋಜನೆಯನ್ನು ಕಾರ್ಯಗತ ಮಾಡಿಸಿ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ. ಗುಡಿಸತಕ್ಕವರಿಗೆ ಮತ್ತು ನೀರು ಪೂರೈಕೆ ಮಾಡತಕ್ಕ ನೌಕರರಿಗೆ ಈ ಇಲಾಖೆ ಬಹಳ ವಿಳಂಬ ಮಾಡುತ್ತಿದೆ. ನಾಲ್ಕು ವರ್ಷಗಳಿಂದಲೂ ಟೆಂಪರರಿಯಾಗಿ ಕೆಲಸ ಮಾಡುತ್ತಿದ್ದಾರೆ. ರಾಣೇಬೆನ್ನೂರು ತಾಲ್ಲೂಕಿನ ೩೬ ಹಳ್ಳಿಗಳು ನನ್ನ ಮತದಾರ ಕ್ಷೇತ್ರಕ್ಕೆ ಬರುತ್ತವೆ. ರಾಣೇಬೆನ್ನೂರಿಗೆ ತುಂಗಾಭದ್ರಾದಿಂದ ನೀರನ್ನು ತರಬೇಕೆಂದು

ಇತ್ತು. "ಗಂಗಾ ಸ್ನಾನ ತುಂಗಾ ಪಾನ" ಎಂಬ ಹೆಸರಿಗೆ ಕಳಂಕ ಬರುತ್ತಿದೆ. ಪಾಲಿಫೈಬರ್ ಪ್ಯಾಕ್ಟರಿಯಿಂದ ರಾಸಾಯನಿಕ ಮಿಶ್ರಣದಿಂದ ಕೂಡಿದ ನೀರು ಹೊಳೆಯಲ್ಲಿ ಬಂದು ಸೇರಿಕೊಳ್ಳುತ್ತಿದೆ. ಹೊಳೆಯ ನೀರನ್ನು ಕುಡಿದ ಅನೇಕ ಜನರಿಗೆ ರೋಗಗಳಾಗಿವೆ. ಹೊಳೆಯಲ್ಲಿ ಕಲುಷಿತ ನೀರು ಹರಿಯುವುದರಿಂದ ನನ್ನ ಮತದಾರ ಕ್ಷೇತ್ರದ ಜನಗಳು ಕುಡಿದು ಕಾಯಿಲೆಗಳಿಗೆ ತುತ್ತಾಗಿದ್ದಾರೆ. ನಿನ್ನೆ ಪತ್ರಿಕೆಯಲ್ಲಿ ಒಂದು ವಿಷಯಬಂದಿದೆ ಮಧ್ಯಪ್ರದೇಶದಲ್ಲಿ 10 ಸಾವಿರ ಜನ ಇಂತಹದ್ದಕ್ಕೆ ತುತ್ತಾಗಿ ಸತ್ತಿದ್ದಾರೆ. ಅದೇ ಪರಿಸ್ಥಿತಿ ನಮ್ಮ ತಾಲ್ಲೂಕಿನ ಜನಗಳಿಗೆ ಬರುವುದರೊಳಗೆ, ಸಾವಿರಾರು ಸಂಖ್ಯೆಯಲ್ಲಿ ಸಾಯುವುದು ಸತ್ಯ. ಇದಕ್ಕೆ ಕೂಡಲೇ ಇಂತಹ ಒಂದು ಕೆಟ್ಟ ಪರಿಸ್ಥಿತಿ ಬರುವ ಮೊದಲೇ ಸರ್ಕಾರದವರು ಪಾಲಿಫೈಬರ್ ಏನೊಂದು ಯೋಜನೆ ಮಾಡಿದ್ದಾರೆ. ಆ ನೀರನ್ನು ವ್ಯವಸಾಯಕ್ಕೆ ಉಪಯೋಗಿಸಲಿಕ್ಕೆ ಪ್ರಯತ್ನ ನಡೆದಿದೆ ಅದನ್ನು ಬೇಗ ಮಾಡಬೇಕೆಂದು ಹೇಳಿ ಇಷ್ಟೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

CHAIRMAN.—Hon'ble Member Miss Pramila is absent. I think I have given that time to you. So I call next Hon'ble Member.

ಶ್ರೀ ಜಿ. ಬಸವಣ್ಣಪ್ಪ (ಹೊಳೆಹೊನ್ನೂರು).—ಸನ್ಮಾನ್ಯ ಅಧ್ಯಕ್ಷರೇ, ನಗರಾಡಳಿತ ಮತ್ತು ವಸತಿ ಸಚಿವರು ತಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಮೊಟ್ಟ ಮೊದಲನೆಯದಾಗಿ ನಾನು ಬೆಂಗಳೂರು ನಗರ ಕಾರ್ಪೊರೇಷನ್ ಬಗ್ಗೆ ಪ್ರಸ್ತಾಪ ಮಾಡಲು ಅಪೇಕ್ಷಿಪಡುತ್ತೇನೆ. ನಗರ ಕಾರ್ಪೊರೇಷನ್‌ಗೆ ಕಳೆದ 2 ವರ್ಷಗಳಿಂದ ಚುನಾವಣೆ ಆಗದೇ ಇರುವುದು ತುಂಬಾ ವಿಷಾದನೀಯ. ಶ್ರೀಮಾನ್ ಎಂ. ಸಿ. ಬಸಪ್ಪನವರ ಪ್ರಶ್ನೆಗೆ ಮಾನ್ಯಮಂತ್ರಿಗಳು ಉತ್ತರ ಕೊಡುತ್ತಾ ನವಂಬರ್‌ಗೆ ಚುನಾವಣೆ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯಮಂತ್ರಿಗಳ ಮಾತನ್ನು ಸ್ವಾಗತಿಸುತ್ತೇನೆ. ಪ್ರಜಾಪ್ರಭುತ್ವದಲ್ಲಿ ಬೆಳಕು ಕಂಡ ನಾವು ಮಹತ್ವವಾದ ಒಂದು ಸಂಸ್ಥೆಗೆ ಪ್ರಜಾಪ್ರತಿನಿಧಿಗಳನ್ನು ಆಯ್ಕೆ ನಡೆಸಿ, ಪ್ರಜಾ ಪ್ರತಿನಿಧಿಗಳ ಸೇವೆಯನ್ನು ಪಡೆಯುವುದಕ್ಕೆ ಅವಕಾಶ ಮಾಡಿ ಕೊಡದೇ ಇರುವುದು ಪ್ರಜಾ ಪ್ರತಿನಿಧಿಗಳಾದ ನಮಗೆ ಅವಮಾನ ಮತ್ತು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಮನ್ನಣೆ ಕೊಟ್ಟಂತೆ ಆಗುವುದಿಲ್ಲ ಎನ್ನತಕ್ಕ ನನ್ನ ಅಭಿಪ್ರಾಯವನ್ನು ಈ ಸಭೆಯಲ್ಲಿ ಸ್ಪಷ್ಟಪಡಿಸುತ್ತೇನೆ. ಮಾನ್ಯ ನಗರಾಡಳಿತ ಸಚಿವರು ನವಂಬರ್‌ನಲ್ಲಿ ಚುನಾವಣೆ ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿರುವುದರಿಂದ, ಪ್ರಜಾ ಪ್ರತಿನಿಧಿಗಳನ್ನು ಆರಿಸಿ ಕೊಳ್ಳುವ ಭರವಸೆಯನ್ನು ಈಡೇರಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಈ ಕಾರ್ಪೊರೇಷನ್ ಕೆಲಸ due to frequent transfers of Administrators and Commissioners, the work was at a stand-still. ಈ ಒಂದು ಪರಿಸ್ಥಿತಿ ಬಂದಿದೆ. ಜಾಫರ್‌ಸೈಪುಲ್ಲಾರವರು ಕಾರ್ಪೊರೇಷನ್ ಆಡಳಿತಾಧಿಕಾರಿಗಳಾಗಿ ಅಧಿಕಾರ ವಹಿಸಿಕೊಂಡು ಕೆಲವಾರು ಯೋಜನೆ ಕಾರ್ಯಕ್ರಮಗಳನ್ನು ಹಾಕಿಕೊಂಡು ನಡೆಸುತ್ತಿರುವಾಗಲೇ ಅವರನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಲಾಯಿತು. ಈಗ ಸೀನಿಯರ್ ಅಧಿಕಾರಿ ವೆಂಕಟೇಶ್‌ರವರನ್ನು ಆಡಳಿತಾಧಿಕಾರಿಯಾಗಿ ಹಾಕಿದ್ದಾರೆ. ಕೊನೆಯಪಕ್ಷ ಅವರನ್ನಾದರೂ ಸಹ ಅಲ್ಲಿಯ ಫೈನಾನ್ಸ್ ರಿಸೋರ್ಸಸ್ ಮೊಬಲೈಸ್ ಮಾಡಿ ಬಡ ಜನತೆಗೆ ನಗರದ ನಾಗರೀಕ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಾನು ಸರ್ಕಾರದಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ತಮಗೆ ತಿಳಿದಹಾಗೆ ಆಕ್ಟ್ರಾಯಿಯನ್ನು ರದ್ದು ಮಾಡಿದ ಮೇಲೆ ಹಣಕಾಸಿನ ಸ್ಥಿತಿ ಕುಂಠಿತವಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಬಹಳ ತೊಂದರೆಯಾಗಿರುವುದು ತಮಗೆ ವೇದ್ಯವಾಗಿದೆ ಹಣಕಾಸಿನ ರಿಸೋರ್ಸನ್ನು How to tap the resources ಎನ್ನುವುದರ ಬಗ್ಗೆ In depath s udy over the finances. ಇದರ ಬಗ್ಗೆ ಎಕಾನಮಿಕ್ ತಜ್ಞರನ್ನು ನೇಮಿಸಿ ಯಾವ ರೀತಿ ಮೊಬಲೈಜ್ ಮಾಡಬೇಕೆಂಬುದರ ಬಗ್ಗೆ ಒಂದು ಪ್ರಯತ್ನ ನಡೆಸಬೇಕೆಂದು ಇದು ಬಹಳ ಒಳ್ಳೆಯದೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ. ಕಾರ್ಪೊರೇಷನ್‌ಲ್ಲಿ ಲೋಕೋಪಯೋಗಿ ಇಲಾಖೆ, ಆರೋಗ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆಗಳು ಇವೆ. ಇದರಲ್ಲಿ ಲೋಕೋಪಯೋಗಿ ಇಲಾಖೆ ಬಹಳ ಮಹತ್ವವಾದ ಇಲಾಖೆ. ಈ ಇಲಾಖೆಗೆ ಪ್ರತಿನಿತ್ಯ ಅಲ್ಲಿ ರಸ್ತೆ ಸರಿಯಿಲ್ಲ, ಇಲ್ಲಿ ಚರಂಡಿ ಸರಿಯಿಲ್ಲ ಎಂಬ ಈ ರೀತಿಯ ನಾನಾ ದೂರುಗಳು ಕ್ವಾಲಿಟಿ ಆಫ್ ವರ್ಕ್ಸ್‌ನ ಬಗ್ಗೆ ವಾದ ವಿವಾದಗಳು ದಿನ ಬೆಳಗಾದರೆ ಇರುತ್ತದೆ. Therefore the quality of the work is to be maintained. ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ರಸ್ತೆ

ಗಳಲ್ಲಿ ಸ್ಲೋಪ್ಸ್ ವ್ಯವಸ್ಥೆ ಸರಿಯಾಗಿ ಇಲ್ಲದೆ ಇದ್ದ ಪ್ರಯುಕ್ತ ಕಳೆದವರ್ಷ ಡಬ್ಬಲ್‌ಡಕ್ಕರ್ ಬಸ್ ಬಿದ್ದು ಕೆಲವು ಮಕ್ಕಳು ಅಂಗಹೀನವಾಗುವಂತಹ ಪರಿಸ್ಥಿತಿ ಬಂತು. ಕಾರಣವೇನೆಂದರೆ ಇದರ ಬಗ್ಗೆ ಒದಗಿಸಿದ್ದ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ರಸ್ತೆಯಲ್ಲಿ ಸ್ಲೋಪ್ಸ್ ಕಾರಣ Engineers in the Corporation should look into these matters. ಯಾವ ರೀತಿ ಮಾಡಬೇಕೆಂಬುದರ ಬಗ್ಗೆ ಸೂಕ್ತ ಕ್ರಮ ವನ್ನು ತೆಗೆದುಕೊಳ್ಳಬೇಕು. ಕಾರ್ಪೊರೇಷನ್‌ರವರು ರಸ್ತೆ ಮಾಡುವುದಾಗಲೀ, ಬ್ರಿಡ್ಜ್ ಮಾಡುವು ದಾಗಲೀ ಅಥವಾ ಬಿಲ್ಡಿಂಗ್ ಕಟ್ಟುವುದಾಗಲೀ There should be a time bound programme ರಸ್ತೆ ನಿಗಧಿಯಾದ ವೇಳೆಯಲ್ಲಿ ಕೆಲಸವನ್ನು ಮುಗಿಸಬೇಕು. ಇದು It speaks of the finances of the corporations ಹಣಕಾಸು ಮತ್ತೆ ಜಾಸ್ತಿಯಾಗುತ್ತದೆ. ೫ ಲಕ್ಷ ಅಂದಾಜು ಇದ್ದದ್ದು ೧೦ ಲಕ್ಷ ಆಗುತ್ತದೆ, ೧೦ ಲಕ್ಷ ಇದ್ದದ್ದು ೨೦ ಲಕ್ಷ ಆಗುತ್ತದೆ. ಆದ್ದರಿಂದ ಅಧಿಕಾರಿಗಳು ನಿರ್ಲಕ್ಷ ಮನೋಭಾವ ತಾಳಿ ಲಕ್ಷಾಂತರ ಕೋಟ್ಯಾಂತರ ಕಾರ್ಪೊರೇಷನ್ ಹಣ ಲಾಸ್ ಆಗಲು ಅವಕಾಶ ಕೊಡದೆ, ಸರಿಯಾದ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಎರಡನೆಯ ದಾಗಿ ಆರೋಗ್ಯ ಇಲಾಖೆಯ ಬಗ್ಗೆ ಸಾಕಷ್ಟು ಅಪವಾದಗಳು ಬರುತ್ತಿವೆ ಟ್ರಕ್ಸ್ ಲಾರಿಗಳಲ್ಲಿ ಪೆಟ್ರೋಲ್ ಮತ್ತು ಡೀಸಲ್ ಪಿಲ್‌ಪಿರೇಜ್ ಜಾಸ್ತಿಯಾಗಿದೆ. Drugs, Medicines misuse ಆದುದರಿಂದ ಇವುಗಳನ್ನು ಸೆಟ್‌ರೈಟ್ ಮಾಡಬೇಕು. ಹೊಟೇಲುಗಳಿಗೆ ಲೈಸೆನ್ಸ್ ಕೊಡುವಾಗ ಸೂಕ್ತ ವ್ಯವಸ್ಥೆ ಇರಬೇಕು. It speaks of the health of the citizens ಹೋಟೆಲುಗಳಿಗೆ ಲೈಸೆನ್ಸ್ ಕೊಡುವಾಗ ಇನ್ಸ್‌ಪೆಕ್ಷನ್ ಮಾಡಿ ಸರಿಯಾದ ರೀತಿಯಲ್ಲಿ ಸ್ಯಾನಿಟೇಷನ್ ವ್ಯವಸ್ಥೆ ಇದೆಯೇ. ಕುಡಿಯುವ ನೀರಿನ ವ್ಯವಸ್ಥೆ ಇದೆಯೇ ಎಂಬುದನ್ನು ನೋಡಿ ಕೊಡುವ ವ್ಯವಸ್ಥೆಯಾಗಬೇಕು. ಸ್ಕೂಲ್ ದೇವಸ್ಥಾನ ಇರುವಂತಹ ಕಡೆಗಳಲ್ಲಿ ಅಬಕಾರಿಯವರಿಗೆ ಲೈಸೆನ್ಸ್ ಕೊಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ ರೆವಿನ್ಯೂ ಇಲಾಖೆ ಇದನ್ನು ಚುರುಕುಗೊಳಿಸಬೇಕು. ಯಾರು ಕೂಡ ನಿಗದಿಯಾದ ವೇಳೆಗೆ ಕಂದಾಯವನ್ನು ವಸೂಲ್ಮಾಡುತ್ತಿಲ್ಲ. ಯಾರು ಕೂಡ ಟಾರ್ಜೆಟ್‌ಗೆ ಅನು ಗುಣವಾಗಿ ವಸೂಲ್ಮಾಡುತ್ತಿಲ್ಲ. ಯಾರು ಕೂಡ ಟಾರ್ಜೆಟ್‌ಗೆ ಅನುಗುಣವಾಗಿ ವಸೂಲ್ಮಾಡುತ್ತಿರುವ ವರಿಗೆ ಬಹುಮಾನ ಕೊಡಬೇಕು. ಸರಿಯಾಗಿ ಕೆಲಸಮಾಡದವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳ ಬೇಕು ಆ ರೀತಿ ಮಾಡದಿದ್ದರೆ, ಕ್ರಮ ತೆಗೆದುಕೊಳ್ಳದೇ ಹೋದರೆ ನಗರದ ಅಭಿವೃದ್ಧಿಯನ್ನು ಮಾಡು ವುದಕ್ಕೆ ಕಷ್ಟವಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ. ಟೌನ್‌ಪ್ಲಾನಿಂಗ್ ಡಿಪಾರ್ಟ್‌ಮೆಂಟ್ ಅದರಲ್ಲ ಅದು There is a Traffic Cell ಅದರ ಉದ್ದೇಶವೇನೆಂದರೆ ಟ್ರಾಫಿಕ್‌ನ ಒತ್ತಡವನ್ನು ಸರ್ವೆ ಮಾಡಿ, ಸರ್ವೆ ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಟ್ಟರೆ, ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡ ಬಹುದು ಇವತ್ತು ಬೆಂಗಳೂರು ನಗರ ಜನಸಂಖ್ಯೆ ೩೦ ಲಕ್ಷ ಆಗಿದೆ. Floating population 10 lakhs., ಓಡಾಡತಕ್ಕ ರಸ್ತೆಗಳಲ್ಲಿ Traffic ಒತ್ತಡದಿಂದ ಓಡಾಡಲು ಕಷ್ಟವೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಅಂತಹ ಕಡೆಗಳಲ್ಲಿ ಹೋಗಿ ನೋಡಿದರೆ ಬಹುತೇಕ ಕಾಣುತ್ತದೆ. ಕೆಲವು ರಸ್ತೆಗಳಲ್ಲಿ ಮತ್ತು ಸರ್ಕಲ್‌ಗಳಲ್ಲಿ ಓಡಾಡುವುದು ಬಹಳ ಕಷ್ಟ ಇದರ ಬಗ್ಗೆ ಟ್ರಾಫಿಕ್ ಸರ್ವೆಯವರು ರಿಪೋರ್ಟ್ ಏನು ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಎಲ್ಲೆಲ್ಲಿ Fly-over bridge ಮಾಡಲು ಮತ್ತು pedestrian cross ಗೆ ವ್ಯವಸ್ಥೆ ಇವುಗಳನ್ನು ಕಾರ್ಪೊರೇಷನ್ ಮಾಡಬೇಕು. ಆ ರೀತಿ ಮಾಡುವ ಒಂದು ಪ್ರಯತ್ನ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಹಾಗು ಬೆಂಗಳೂರು ನಗರಕ್ಕೆ Circular Train ಒದಗಿಸುವುದು ಅತ್ಯವಶ್ಯಕ ಎಂಬುದನ್ನು ಒತ್ತಿಹೇಳುತ್ತೇನೆ.

೩ ಪಿ.ಎಂ.

ಇನ್ನು ವಾಟರ್ ಸಪ್ಲೈ ಮತ್ತು ಸೂಯರೇಜ್ ಬೋರ್ಡ್ ವಿಚಾರದ ಬಗ್ಗೆ ಹೇಳುವು ದಾದರೆ ಮನಸ್ಸಿಗೆ ನೋವಾಗುತ್ತೆ ಫ್ರೇಜರ್ ಟೌನ್‌ನಲ್ಲಿ ಮತ್ತು ಶಿವಾಜಿನಗರದಲ್ಲಿ ನೀರು ಸರಬರಾಜಿನಲ್ಲಿ sewerage ಪೈಪಿಗೂ ಮತ್ತು water pipeಗೆ link ಆಗಿ, ಆದ ಸಾವು ನೋವು ಮತ್ತು ಅನಾಹುತ ಮನಸ್ಸಿಗೆ ಬಹಳ ಖೇಧವನ್ನು ಉಂಟುಮಾಡಿದೆ. ಈ ತರಹ ಒಂದು ಕಲುಷಿತ ವಾತಾವರಣ ಎರಡು ಸಾರಿ ಉಂಟಾಗಿದೆ. ಈಗಲಾದರೂ ಕೂಡ ಅದರ ಬಗ್ಗೆ ಗಮನ ಕೊಟ್ಟು ಸರಿಯಾದ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಶಿವಮೊಗ್ಗ–ಭದ್ರಾವತಿ ಮುನಿಸಿಪಾಲಿಟಿ ಏನು ಇದೆ ಅದನ್ನು ಕಾರ್ಪೊರೇಷನ್ ಆಗಿ ಮಾಡುತ್ತೇವೆಂದು ಹೋದಸಾರಿ ಶಿವಮೊಗ್ಗಾಕ್ಕೆ ಬಂದ ಸಚಿವರು ಭರವಸೆ ಕೊಟ್ಟಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ೧೦ ವರ್ಷದಿಂದಲೂ ಇದನ್ನು ಕಾರ್ಪೊರೇಷನ್ ಮಾಡಬೇಕು ಎನ್ನುವ ಬೇಡಿಕೆ ಇತ್ತು. ಆದರೆ ಇದುವರೆಗೂ ಅದು ಫಲಕಾರಿಯಾಗಿರಲಿಲ್ಲ. ತಮಗೆ ಹೇಳಬೇಕಾದರೆ The population of Bhadravathy and Shimoga has exceeded to 3 lakhs. Therefore I request the hon. Minister to take up the work immediately and announce that Shimoga and Bhadravathi Corporation is formed.

With regard to Housing Board ಬಗ್ಗೆ ಹೇಳಬೇಕಾದರೆ ಬೆಂಗಳೂರು ನಗರದಲ್ಲಿ ಮನೆಗಳ ಕೊರತೆ ಹೇಳುವುದಕ್ಕೆ ಅಸಾಧ್ಯವಾಗಿದೆ. ಅನೇಕ ಜನಗಳು, ಅನೇಕ ಅಧಿಕಾರಿಗಳು ಪ್ರತಿಯೊಬ್ಬರೂ ಸಹ ಸಣ್ಣ ಮನುಷ್ಯರಿಂದ ಹಿಡಿದು ದೊಡ್ಡ ಮನುಷ್ಯರ ತನಕವೂ ಈ ಮನೆ ಕೊರತೆ ಬಹಳ ಅಗಾಧವಾಗಿದೆ. ಇತ್ತೀಚೆಗೆ ಇತರ ನಗರಗಳಲ್ಲೂ ಕೂಡ ಇದೇ ತರಹದ ಅಭಾವ ಉಂಟಾಗಿದೆ. ಆದರೆ ಇದರ ಬಗ್ಗೆ ಈ ಬೋರ್ಡ್‌ನಿಂದ ಸೂಕ್ತವಾದ ಪ್ರಯೋಜನ ನಡೆದಿಲ್ಲಾ ಎನ್ನುವುದನ್ನು ಘಂಟಾಘೋಷವಾಗಿ ಹೇಳಬೇಕಾಗಿದೆ ಬೆಂಗಳೂರು ನಗರದಲ್ಲಿ Primary Housing Agency is the Housing Board. ಇದು ೧೯೫೬ರಲ್ಲಿ ಎಸ್ಟಾಬ್ಲಿಷ್ ಆಯಿತು. ಇಂದಿಗೆ ೨೫ ವರ್ಷ ತುಂಬಿದೆ. ಈ ೨೫ ವರ್ಷದಲ್ಲಿ ಅದು ಕೇವಲ ೩೦ ಸಾವಿರ ಮನೆಗಳನ್ನು ಮಾತ್ರ ಕಟ್ಟಿದ್ದಾರೆ. The administrative expenditure of the Housing Board is more than Rs 1 crore. ವರ್ಷಕ್ಕೆ ಕೇವಲ ೧೦ ಸಾವಿರ ಮನೆಗಳನ್ನು ಕಟ್ಟದೇ ಹೋದರೆ What is the use of existence of the very Housing Board. ಈವೊತ್ತಿನ ದಿವಸ ನಾವು ಯೋಚನೆ ಮಾಡಬೇಕಾಗಿದೆ. ಬೆಂಗಳೂರು ನಗರದಲ್ಲಿ ಒಂದು ಮನೆ ಸಿಕ್ಕಬೇಕಾದರೆ ಈವೊತ್ತು ೨೫–೩೦ ಸಾವಿರ ರೂಪಾಯಿ ಅಡ್ವಾನ್ಸ್ ಕೊಡಬೇಕಾಗುತ್ತದೆ. ಹಾಗೂ ಮನೆಗಳು ಸಿಕ್ಕುವುದೇ ಕಷ್ಟ. ಸರ್ಕಾರೀ ನೌಕರರಿಗೂ ಸಹ ಬೆಂಗಳೂರು ನಗರದಲ್ಲಿ ವಾಸಕ್ಕೆ ಮನೆ ಸಿಕ್ಕುವುದೇ ಕಷ್ಟವಾಗಿದೆ. ಈವೊತ್ತಿನ ದಿವಸ ಬೆಂಗಳೂರು ನಗರದಲ್ಲಿ ಮನೆಗಳು ಸಿಕ್ಕುವುದೇ ಒಂದು ಕೋಲಾಹಲಕರವಾಗಿದೆ Housing problem in Bangalore City is an acute problem. ಈವೊತ್ತಿನ ದಿವಸ ಬೇಕಾದರೆ ಒಂದು ನೌಕರಿಯನ್ನು ಸರ್ಕಾರದಿಂದ ಪಡೆಯಬಹುದು ಆದರೆ ಬೆಂಗಳೂರಿನಲ್ಲಿ ಮನೆ ಸಿಕ್ಕುವುದು ಬಹಳ ಕಷ್ಟವಾಗಿದೆ. ಈ ಬಗ್ಗೆ ಮಾನ್ಯ ಸಚಿವರು ದೀರ್ಘವಾಗಿ ಆಲೋಚನೆ ಮಾಡಿ, ಇವಕ್ಕೆ ಸಂಬಂಧಪಟ್ಟ ಉನ್ನತ ಮಟ್ಟದ ಅಧಿಕಾರಿಗಳನ್ನು ಕರೆಸಿ ಒಂದು ತೀರ್ಮಾನ ತೆಗೆದುಕೊಂಡು ಸರಿಯಾದ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ, ಈಗ ಬೆಂಗಳೂರು ನಗರದಲ್ಲಿ ಫ್ಲಾಟ್ ಸಿಸ್ಟಂ ಏನು ಪ್ರಾರಂಭವಾಗಿದೆ. I welcome in this system ಏತಕ್ಕೋ ಏನು ಕಾರಣವೋ ಈ ಮಧ್ಯೆ ಫ್ಲಾಟುಗಳನ್ನು ಕಟ್ಟುವವರಿಗೂ ಮತ್ತು ಸರ್ಕಾರಕ್ಕೂ ಏನೋ ಒಂದು ವಿಧವಾದ ಗೊಂದಲ ಉಂಟಾಗಿದೆ. ಏತಕ್ಕೆ ಆ ರೀತಿ ಗೊಂದಲವಾಯಿತು ಅನ್ನುವುದು ಗೊತ್ತಿಲ್ಲ I welcome this system because the sites are very costly and not available. Therefore we have to go vertically.

ಇನ್ನು ಮೂರನೆಯದಾಗಿ ಹೇಳಬೇಕಾದನೆ ಈ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಏನು ಇದೆ ಅದಕ್ಕೆ ಎನ್‌ಕರೇಜ್‌ಮೆಂಟ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕರ್ನಾಟಕ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಅನ್ನುವುದನ್ನು ೧೯೭೫ರಲ್ಲಿ ಸ್ಥಾಪಿಸಲಾಯಿತು. ಆ ಬೋರ್ಡ್ ಮಾಡಿದ ಉದ್ದೇಶ ಬಹಳ ಗುರುತರವಾದುದು. ಒಳ್ಳೆಯ ಉದ್ದೇಶದಿಂದಲೇ ಮಾಡಿದರು. ಆದರೆ ಬೋರ್ಡಿನಲ್ಲಿ ಸರಿಯಾಗಿ ಕೆಲಸ ಆಗುವುದಿಲ್ಲ. ಏತಕ್ಕೆ ಆಗುತ್ತಿಲ್ಲ ಅನ್ನುವುದನ್ನು ಹೇಳಬೇಕಾದರೆ Slum clearance Board is not being encouraged as it was expected. ಅದಕ್ಕೆ ಸೂಕ್ತವಾದಂಥಾ ಎನ್‌ಕರೇಜ್‌ಮೆಂಟ್ ಕೊಡಬೇಕೆಂದು ಹೇಳುತ್ತೇನೆ. ತಮಗೆ ಹೇಳಬೇಕಾದರೆ ೧೯೭೬–೭೭ರಲ್ಲಿ ಬೆಂಗಳೂರು ನಗರದಲ್ಲಿ ೧೫೧ ಕೊಳಚೆ ಪ್ರದೇಶಗಳು ಇದ್ದುವು. ಈಗ ೫೦೦ ಕೊಳಚೆ ಪ್ರದೇಶಗಳಾಗಿವೆ. ಈ ರೀತಿಯಾಗಿ ಕೊಳಚೆ ಪ್ರದೇಶಗಳು ಬೆಳೆಯುತ್ತಾ ಹೋದರೆ ಇಷ್ಟು ವೇಗದಲ್ಲಿ ಬೆಳೆಯುತ್ತಾ ಹೋದರೆ ನಗರದ ನೈರ್ಮಲ್ಯದ ಮೇಲೆ, ಪರಿಸರದ ಮೇಲೆ, ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸ್ಲಂ ಕ್ಲಿಯರೆನ್ಸ್ ಬೋರ್ಡ್ ಇದುವರೆಗೂ ಕೂಡ ಸರಿಯಾಗಿ ಕೆಲಸ ಮಾಡಲಿಲ್ಲಾ ಎಂದರೆ ಮಾನ್ಯ ಸದಸ್ಯರು ಮೊಟ್ಟಮೊದಲಾಗಿ ಅವರೇ ಅಧ್ಯಕ್ಷರಾಗಿದ್ದರು ಅನ್ನುವುದು ಮರೆತುಬಿಟ್ಟರು ಅಂತ ಕಾಣುತ್ತದೆ. He certifies himself that he has not worked. It is a great achievement?

(INTERRUPTION)

ಒಬ್ಬ ಸದಸ್ಯರು.—ಅವರು ಹೇಳಿದ್ದು ತಮ್ಮ ಅಧ್ಯಕ್ಷತೆ ಮುಗಿದ ಮೇಲೆ ಅಲ್ಲಿ ಏನೂ ಕೆಲಸವಾಗಲಿಲ್ಲಾ ಅಂತ ಹೇಳಿದ್ದಾರೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—೧೯೭೭ರಿಂದ ಈಚೆಗೆ ಏನು ಅನುಕೂಲವಾಗಿರುವುದು ಅನ್ನುವುದನ್ನು ಹೇಳಿದ್ದಾರೆ. ತಮ್ಮ ಕಾಲದಲ್ಲಿ ಏನೂ ಅನುಕೂಲ ಇರಲಿಲ್ಲವೇ ಸ್ವಾಮಿ?

(INTERRUPTION)

CHAIRMAN.—If you are going to yield any further, I will ask you to sit.

SRI G. BASAVANNAPPA. I am not yielding but I am prepared to reply to Sheeranally Chandrashekhar. Incidentally I was the first Chairman of the Slum clearance Board without staff and without any facilities and without any assistance. ನಾನು ಇದ್ದಾಗ ಈ ಬಗ್ಗೆ ಏನೇನು ಅವಶ್ಯಕತೆಗಳು ಬೇಕು ಅಂತ ಒತ್ತಾಯ ತಂದ ಮೇಲೆ ಅನಂತರ ಕೆಲವು ಫೆಸಿಲಿಟೀಸ್ ಕೊಟ್ಟರು. After one year some facilities were given. Then, I was able to do some work and I was able to deliver some goods. ಈಗ ಈ ಸಂಸ್ಥೆಗೆ Hudcoದಿಂದ ಸಾಕಷ್ಟು ಹಣ ಬಂದಿದೆ. ಈ ಹಣವನ್ನು ಫಿಕ್ಸೆಡ್ ಡಿಪಾಸಿಟ್‌ನಲ್ಲಿಟ್ಟಿದ್ದಾರೆ The amount is kept in Fixed deposit The amount is not being utilised for the Slum clearance Programme. Why? These people have no interest to help the weaker sections, the have-nots of the society. They do not know how to execute the work. ಹೊಸದಾಗಿ ಕೊಳಚೆ ಪ್ರದೇಶಗಳು ಬೆಳೆಯುವುದರ ಬಗ್ಗೆ ಒಂದು ಲೆಜಿಸ್ಲೇಷನ್ ತಂದಿದ್ದಾರೆ ಈ ಬಗ್ಗೆ ಏನೇನು ಬೇಕೋ ಅವೆಲ್ಲದರ ಬಗ್ಗೆ ಲೆಜಿಸ್ಲೇಷನ್ ಮಾಡಿದ್ದಾರೆ. Mere legislation will not help. The men who handle the work is important. ದುರ್ಬಲ ವರ್ಗಕ್ಕೆ ಸೇರಿದ ನಿಷ್ಠಾವಂತ, ಕೆಲಸಗಾರನಾಗಿರಬೇಕು. ಈ ಬಗ್ಗೆ ಅವನಲ್ಲಿ ಸೇವಾ ಮನೋಭಾವ ಇರಬೇಕು ತನ್ನ ತುಂಬು ಹೃದಯದಿಂದ ಇದರಲ್ಲಿ ಕೆಲಸ ಮಾಡಬೇಕು ಎನ್ನುವ ಮನಸ್ಸು ಇರಬೇಕು. ಕೊಳಚೆ ಪ್ರದೇಶದ ಬಗ್ಗೆ ಸರಿಯಾದ ಒಂದು ಯೋಜನೆಯನ್ನು ಹಾಕಿ, ತತ್ವನಿಷ್ಠೆಯಿಂದ ಕೆಲಸ ಮಾಡಬೇಕು Committed man should be pleased for such work. ಅದು ಬಿಟ್ಟು ಬರೇ ಸರ್ಕ್ಯುಲರ್‌ನಿಂದಾಗಲಿ ಅಥವಾ ಲೆಜಿಸ್ಲೇಷನ್ ತಂದು ಅವರಿಂದ ಕೆಲಸ ಮಾಡುತ್ತೇವೆಂದರೆ ಆಗುವುದಿಲ್ಲ. ಮುಖ್ಯವಾಗಿ ಹೇಳಬೇಕಾದರೆ ಅವರಲ್ಲಿ ಈ ದುರ್ಬಲ ವರ್ಗದವರಿಗಾಗಿ ಕೆಲಸ ಮಾಡಬೇಕು ಅನ್ನುವ ಮನೋಭಾವ ಬಂದರೆ ಆವಾಗ ಈ ಬಡವರಿಗೆ ಅನುಕೂಲವಾಗುತ್ತದೆ. ಇಲ್ಲದೇ ಹೋದರೆ ಈಗ ಎಷ್ಟು ಸ್ಲಂಸ್‌ಗಳು ಇವೆಯೋ ಇದರ ನೂರರಷ್ಟು ಸಾವಿರದಷ್ಟು ಬೆಳೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಸ್ಲಂ ಕ್ಲಿಯರೆನ್ಸ್ ಬದಲಾಗಿ ಸಾವಿರ ಸಂಖ್ಯೆಯಲ್ಲಿ ಬೆಳೆದುಕೊಂಡು ಹೋಗುತ್ತದೆ. ಆದುದರಿಂದ ನಾನು ಹೇಳುವುದೇನೆಂದರೆ First thing is to prevent the growth of slums ಅನ್ನುವ ಶಾಸನ ಮಾಡಬೇಕು. ಅದನ್ನು ಪರಿಣಾಮಕಾರಿಯಾಗಿ ತರತಕ್ಕಂಥಾ ಸೇವಾ ಮನೋಭಾವವುಳ್ಳಂಥಾ ದುರ್ಬಲ ವರ್ಗಕ್ಕೆ ಸೇರಿದಂಥಾ ಅವರ ಕಷ್ಟ ಸುಖಗಳನ್ನು ತಿಳಿದುಕೊಂಡಂಥಾ ಒಬ್ಬ ವ್ಯಕ್ತಿಯನ್ನು ಅಧ್ಯಕ್ಷನನ್ನಾಗಿ ಮಾಡಬೇಕು. ಸ್ವಾರ್ಥಸಾಧನೆಯಿಂದ ಅವರು ಬಂದರೆ ಇದರಲ್ಲಿ ಏನೂ ಕೆಲಸವಾಗುವುದಿಲ್ಲ. ಈವಾಗ ಏನೋ ಇದರ ಬಗ್ಗೆ ಅನುಕೂಲಕರವಾದ ಲೆಜಿಸ್ಲೇಷನ್ ತಂದಿದ್ದೀರಿ, ಆದರೆ ಆ ಬಗ್ಗೆ ಸರಿಯಾದಂಥಾ ಒಂದು ಮಿಷನರಿ ಬೇಕಾಗುತ್ತದೆ. ಈ ಮಿಷನರಿ ಇಟ್ಟುಕೊಂಡು ಸರಿಯಾಗಿ ಕೆಲಸ ಮಾಡುವುದಾದರೆ ಈ ಬಗ್ಗೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು ಎಂದು ಹೇಳುತ್ತೇನೆ,

† SRI P. K. RANGANATH (Shanthinagar).—Mr. Chairman, while supporting the demands, I wish to state—and I also regret to state that each M.L.A. particlarly in Bangalore has to represent a minimum of five divisions. A constituency consist of five or six divisions. Every M.L.A. is more a Councillor than a legislator. We are more responsible to the people for their civic amenities. No doubt, the Corporation is doing its best with the available resources. I am sure the establishment charges in the Corporation is more than expected. Most of the finance is given by way of salaries the establishment. Perhaps most of us know that the Corporation had 50 divisions is the City and because of the delimitations, the same 50 divisions were increased to 63. Yet, during that time, we had one Chief Engineer, one Deputy Engineer and four Assistant Engineers for the entire Corporation. The work was satisfactory but to day we have so many Engineers, a Chief Engineer, a Superintending Engineer, so many Deputy Engineers and so many Assistant Engineers and so on. Previously there were 12 engineers and to-day it is more than that. You know the Board. We have a Project Engineer, Deputy Engineer for Projects, a Deputy Engineer for Stores, a Deputy Engineer for Roads and so on and so forth. But the outcome is the most important thing. The work that could be done by engineers, as most of us see, is spoiled. We have more people than wanted. Whenever we approach any of the officers, they clearly say that there is no budget and this is a fact also. But, how we can revise the establishment is a matter to be thought over ?

Now, he physical education in the schools. To-day people do not want to admit their children to the Corporation should for want of standard. But, at the sametime we have to think the other side also. Most of the students who have failed 3 or 4 times seek admission in the Corporation school. Therefore, Corporation schools standard is very bad. In most of the schools we do not have teachers and furniture. Most of the highschool students, I regret to say, have to sit on the floor. Particularly, during December, you cannot tolerate their plight. All these things must be looked into.

Another thing, is that in the Corporation we had Vigilance Cell previously. Again we have police force to-day. A senior officer, Sub-Inspector and constables are there. Who is to pay for all these people? As it is, the Corporation is more burdened and the Corporation money has to be paid on their pay. Physical Education Officer is there. No doubt, we must have a Public Relations Officers. Now, we call him as Public Relations-**cum**-Welfare Officer and Assistant P.R.O. and so on and so forth. We go on increasing the staff. But, whether we have finances to pay them is the problem. As it is, we have surplus staff after the abolition of octroi and we are simply paying those people the salaries. I do not know how these people are being paid from the Government fund. In our Revenue Department we had certain Revenue Officers and Assistant Revenue Officers. To-day the number of officers has increased whether it be Engineering Department, or the Revenue Department or the Health Department or the Education Department. The establishment is more. Therefore, I suggest that there should be a termination committee to go through and tell us as to how many officers we must have.

Regarding slums, my friends have said about the Slum Clearance Board. No doubt, we must have a permanent Slum Clearance Board under the Chairman. But, unfortunately the Commissioner of the Corporation is the Chairman of the Slum Clearance Board. She is a member of so many other boards. I do not want to say that the work of the Slum Clearance Board is satisfactory or unsatisfactory. But, the Chairman of the Slum Clearance Board has to be given more number of staff, particularly when you say that the Slum Clearance Board is not doing its job. Because slum is in the corporation limits, people think that it is the duty of he Corporation to acquire those places. Unfortunately, it comes under the Slum Clearance Board. Secondly, the slum exists in the B.D.A. limit, people say that it is the duty of the Corporation to acquire such areas. Therefore the Hon. Minister must think of placing a permanent Chairman.

Another thing is that for more than 20 years, the Corporation is contemplating to give away houses and quarters in Austin Town, William's Town and Fraser Town and so on. We have taken a

decision 20 years ago when I was the Councillor of the Corporation. To-day the file is pending with the Government. Though the decision was taken previously, there are some disputes regarding the price. Perhaps, the Hon. Minister must know and most of the officers know about it that these quarters were built during the British regime. As you know these houses were built for SCs/STs during 1923-24. Even if these houses are given free of cost to these people and the houses are assessed the Corporation will get more revenue than what we are getting. We are hardly getting about Rs. 3 or Rs. 5. Even from quarters we are getting Re. 1 or 12 Annas per month. It is a burden on the Corporation. Whenever we ask the Corporation to take up annual repairs, the Corporation cannot do that. But, at the sametime when the question of disposal comes, for years together we are sleeping over the matter. Every recently, when I asked the concerned officer of the Corporation, I was told that it is pending for re-assessment. If action is taken immediately, I am sure, the Corporation will be getting more money. Very recently we have inspected certain hutments. I requested the Hon. Minister also to give those houses free of cost to those people, most of whom are slum dwellers and most of them are SCs/STs. If these houses are given and things are assessed we will get more money. Therefore, I request the Government to take speedy action on all these things.

Most of my friends would have spoken about 18 per cent of the budget. In the corporation how this 18 per cent of the budget is being spent is a problem. We have suggested during our inspection and meeting that there should be certain hostels or boys, for girls and community centres. But, at the same time I want the Minister to take speedy action and see that this 18 per cent of the budget is properly utilised for the so-called SCs/STs.

Sir, 18 per cent of the budget is not earmarked for the Scheduled Castes and Scheduled Tribes in BDA. When I asked some officers, they said it is not there in the budget. Therefore, I request the Hon'ble Minister to see that in every department this 18 per cent is ear-marked for the Scheduled Castes and Scheduled Tribes. Because it is not there in BDA, I request the Hon'ble Minister to look into it.

Further, the Hon'ble Minister has got good programmes and the

Corporation is doing its best. But the Scheduled Castes, Scheduled Tribes, Backward Class and Minorities require ordinary works; they don't want your big projects. If adequate water, proper latrine/bathroom, proper lighting are provided by the Corporation, it will satisfy 80 per cent of the residents of Bangalore City. I know there are rich people getting things done over a telephonic call, but the scheduled castes and scheduled tribes cannot do it. When the Corporation Officers go for inspection, they don't go deep into the divisions. It is not just going to the main roads and have inspection. So I request the Hon'ble Minister to instruct the officers that they must go to every nook and corner of each division and look to the needs of the Sheduled Castes, the Scheduled Tribes and the weaker sections.

Thank you.

† ಶ್ರೀ ವಿ.ಬಿ. ಬಾವಿ (ಮುಂಡರ್ಗಿ). — ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ನಮ್ಮ ನಗರಾಡಳಿತ ಮಂತ್ರಿಗಳು ಈ ಸದನದಲ್ಲಿ ತಂದಿರತಕ್ಕಂತಹ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಕೆಲವಾರು ಸಲಹೆಗಳನ್ನು ಮಾನ್ಯ ಮಂತ್ರಿಗಳಿಗೆ ಕೊಡುವುದಕ್ಕೆ ಬಯಸುತ್ತೇನೆ. ಇವತ್ತು ೧ ೨೫,೦೦೦ ಸಾವಿರ ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗಿರುವುದು ಮೊದಲನೆಯದಾಗಿ ಗದಗ್ ಮತ್ತು ಎರಡನೆಯದಾಗಿ ಬಳ್ಳಾರಿ ನಗರಗಳಲ್ಲಿ ನಾವು ಸರ್ಕಾರವನ್ನು ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಬೇಕೆಂದು ಈ ಹಿಂದೆ ಕೇಳಿದ್ದೇವು. ಆದರೆ ಹಿಂದಿನ ಸರ್ಕಾರ ನಮ್ಮ ಬೇಡಿಕೆಯನ್ನು ಅಲಕ್ಷಿಸಿತ್ತು. ಆದರೆ ಇಂದಿನ ನಮ್ಮ ಸರ್ಕಾರ ನಮ್ಮ ಎಲ್ಲಾ ತೊಂದರೆಗಳನ್ನೂ ಗಮನಿಸಿ ನಮ್ಮ ಒಂದು ವಿನಂತಿಯ ಮೇರೆಗೆ ನಮ್ಮ ಮಾನ್ಯ ನಗರಾಡಳಿತ ಮಂತ್ರಿಗಳು ಹಾಗೂ ನಮ್ಮ ಹಣಕಾಸಿನ ಮಂತ್ರಿಗಳು ಈ ಒಂದು ಯೋಜನೆಯು ಬಹಳ ಅತ್ಯಾವಶ್ಯಕವಾಗಿ ಕೈಗೊಳ್ಳಬೇಕಾದುದು ಎಂದು ಹೇಳಿ ಅವರು ಈ ಒಂದು ಕೆಲಸವನ್ನು ತೆಗೆದುಕೊಳ್ಳತಕ್ಕಂತಹ ಒಂದು ಭರವಸೆಯನ್ನು ಕೊಟ್ಟರು. ಆದರೆ ಅವರು ಭರವಸೆ ಕೊಟ್ಟ ಮೇಲೆ ಅದು ಕಾರ್ಯಗತವಾಗದೆ ಇನ್ನೂ ವಿಳಂಭವಾಗಿದೆ. ಆ ರೀತಿ ವಿಳಂಬವಾಗಿರುವುದು ಏಕೆ ಎನ್ನುವುದು ನಮಗೆ ತಿಳಿಯಲಿಲ್ಲ. ಆದ್ದರಿಂದ ಮಾನ್ಯ ನಗರಾಡಳಿತ ಮಂತ್ರಿಗಳು ಇದರ ಬಗ್ಗೆ ಸೂಕ್ತವಾದ ವಿವರಣೆಯನ್ನು ಕೊಡಬೇಕು, ಮತ್ತು ಏತಕ್ಕಾಗಿ ಈ ರೀತಿ ವಿಳಂಬವಾಗಿದೆ ಮತ್ತು ಸರ್ಕಾರದ ಮಂಜೂರಾತಿ ದೊರೆತಿದೆಯೋ ಅಥವಾ ಇಲ್ಲವೇ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕು. ಮತ್ತು ನಮಗೆ ೧ ತಿಂಗಳೊಳಗಾಗಿ ಆ ಕೆಲಸವನ್ನು ಮಾಡಿಕೊಡುತ್ತೇವೆ ಎನ್ನುವ ಒಂದು ಭರವಸೆಯನ್ನು ಸಹ ಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ನಗರಾಡಳಿತ ಮಂತ್ರಿಗಳನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

Mr. Chairman Sir, the next point is about the Bangalore Water Supply & Seweage Board. This Board had the scheme of Cauvery Water Supply with an estimated cost of about Rs' 57 crores. LIC has agreed to give about Rs. 40 crores and the rest of the amount is to be borne by the Government. First of all, when the first stage of Cauvery water supply was started, there were only one Chief Engineer and one Superintendenting Engineer and there were about 3 or 4 Executive Engineers. All these enginers had been deputed from the Public Works Department. But now what this BWSSB doing is, they

have started appointing these engineers directly to the Board. That is why, I want to ask a question to the Hon'ble Minister, what is the sanctioned strength of engineers in BWSSB and out of which how many engineers have been appointed on temporary basis and howmany on permanent basis, because the motive of this Board is to run the Board and supply water on no loss and no profit basis. In the beginning they used to take engineers on deputation from PWD Now they have left all those things and have independently started appointing engineers themselves. So, whether it has come to the knowledge of the Hon'ble Minister? If it has come, what action has been taken by the Minister? Why I am saying all these things is, for the second stage of Cauvery water supply one Sri Gulam Ahmed from PWD has been deputed as Special Chief Engineer to BWSSB, which shows the inefficiency of the Board. I cannot express by mere words, because he is working 18 hours a day.

SRI K. LAKSHMAN.—It is all politics. Sri Gulam Ahmed was also working in the first stage of Cauvery water supply.

SRI V.B. BHAVI—I am not yielding.

SRI K. LAKSHMAN.—He is unnecessarly creating problems. Sri Gulam Ahmed has worked in first stage also.

CHAIRMAN..—The hon. member has not yielded. Please sit down.

SRI V.B. BHAVI.--Sir, my question to Hon'ble Minister is, why temporary posts are being filled up by promoting these Board engineers? When the second stage of Cauvery weter supply is completed, what will the Board do with these engineers? About a year back 35 engineers have been appointed by the Board without prior approval of the Government and it is again going to appoint another 72 enginrers and the list about to be issued. Whether it has come to the knowledge of the Government? Whether the Chairman has got any individual powers to appoint without getting the prior approval of the Government? I want to ask these questions. to the Hon'ble Minister. If the Board is doing all these things in such a way, whether the Government is sitting silent over these issues? The present engineers of the Board who have been promoted to the cadre of Superintending Engineer, Executive Engineer and Asst. Executive Engineer, whether in such cases the Board has followed the length of the services of these people and experience in the lower cadre, before giving promotion? My submission is whenever they want to do all these things, whether they have taken any permission of the Government, because it is a very serious issue. The Hon'ble Minister will have to give a reply to this. With this I conclude my speech.

೩-೩೦ ಪಿ.ಎಂ.

† ಶ್ರೀ ಸಿ.ಎಸ್. ಮುತ್ತಿನಪೆಂಡಿಮಠ್ (ಗದಗ್).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ಸ್ವಾಗತಿಸುತ್ತಾ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ನಾಲ್ಕು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ರಾಜ್ಯದಲ್ಲಿರತಕ್ಕಂಥ ಮುನಿಸಿಪಾಲಿಟಿಗಳ ಆರ್ಥಿಕ ವ್ಯವಸ್ಥೆ ಬಹಳ ಹದಗೆಟ್ಟಿದೆ. ಇದು ಮಾನ್ಯ ಮಂತ್ರಿಗಳಿಗೂ ಸಹ ಗೊತ್ತಿದೆ, ಈ ರೀತಿ ಹದಗೆಟ್ಟ ಪರಿಸ್ಥಿತಿಯನ್ನು ಯಾವ ರೀತಿ ಸುಧಾರಿಸುತ್ತಾರೆಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಆಕ್ಟ್ರಾಯ್ ರದ್ದು ಮಾಡಿದ ನಂತರ ಮುನಿಸಿಪಾಲಿಟಿಗಳ ನೌಕರರಿಗೆ ಪಗಾರ ಕೊಡಲು ಹಣದ ತೊಂದರೆ ಬಂದಿದೆ. ನೌಕರರು ಸರ್ಕಾರದವರು ಕೊಡುವ ಗ್ರಾಂಟ್‌ಗಾಗಿ ಕಾಯುತ್ತಾ ಕುಳಿತಿರುತ್ತಾರೆ. ಈ ತೊಂದರೆಯನ್ನು ತಪ್ಪಿಸಲು ಆಕ್ಟ್ರಾಯ್ ಬದಲಿಗೆ ಕೊಡುವಂತಹ ಪರಿಹಾರವನ್ನು ಒಂದೇ ಕಂತಿನಲ್ಲಿ ಭರ್ತಿಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಕಳೆದ ೩ ವರ್ಷಗಳಿಂದ ಇಲ್ಲಿ ಹೇಳುತ್ತಿದ್ದೇನೆ. ಸರ್ಕಾರದವರು ಮಾಡುತ್ತೇವೆ ಮಾಡುತ್ತೇವೆ ಎಂದು ಆಶ್ವಾಸನೆ ಕೊಡುತ್ತಾ ಬಂದಿದ್ದಾರೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಆರ್ಥಿಕ ಮಂತ್ರಿಗಳು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಇರುವಂತಹ ಒಂದು ಕಮಿಟಿ ರಚನೆ ಮಾಡುವುದಾಗಿ ಆಶ್ವಾಸನೆ ಕೊಟ್ಟರು. ಆದರೆ ನಾಲ್ಕು ತಿಂಗಳು ಕಳೆದರೂ ಸಹ ಏನೂ ಕೆಲಸವಾಗಲಿಲ್ಲ. ಗದಗ್ ಜನರು ಇದಕ್ಕಾಗಿ ಸರದಿ ಉಪವಾಸ ಕೂಡ ಮಾಡಿದರು. ೨.೯೦ ಕೋಟಿ ರೂ.ಗಳ ಈ ಯೋಜನೆಗೆ ಇಲ್ಲಿಯುವರೆಗೆ ಹಣದ ಒಂದು ವ್ಯವಸ್ಥೆ ಮಾಡಿಲ್ಲ ಈಗಲಾದರೂ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮತ್ತು ಆರ್ಥಿಕ ಮಂತ್ರಿಗಳು ಆದಷ್ಟು ಶೀಘ್ರವಾಗಿ ಹಣದ ವಿತರಣೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಒಂದು ಲಕ್ಷ ೧೩ ಸಾವಿರ ಜನಸಂಖ್ಯೆ ಇರುವ ಗದಗ ಮತ್ತು ಬೇಟಗೇರಿಯಂತಹ ಒಂದು ದೊಡ್ಡ ಪಟ್ಟಣದಲ್ಲಿ ಹೌಸಿಂಗ್ ಬೋರ್ಡ್‌ನವರು ಒಂದು ಮನೆಯನ್ನೂ ಸಹ ಕಟ್ಟಿಸಿಲ್ಲ. ಹೌಸಿಂಗ್ ಬೋರ್ಡಿನವರು ಅಲ್ಲಿ ೬೦ ಎಕರೆ ಜಮೀನನ್ನು ಸ್ವಾಧೀನಪಡಿಸಿ ಕೊಂಡಿದ್ದಾರೆ. ಆದರೆ ಒಂದು ಮನೆ ಕೂಡ ಕಟ್ಟಿಲ್ಲ. ಇನ್ನು ಮುಂದಾದರೂ ಅಲ್ಲಿ ಮನೆಗಳನ್ನು ಕಟ್ಟಿಸಿ ಜನರಿಗೆ ವಸತಿ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಎಲ್ಲೆಲ್ಲಿ ಇದೆಯೋ ಅಂತಹ ಕಡೆ ಮುನಿಸಿಪಾಲಿಟಿಯವರು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಚಾರ್ಜನ್ನು ವಸೂಲಿ ಮಾಡುತ್ತಿದ್ದಾರೆ. ಕೆಲವು ಕಡೆ ಹೆಚ್ಚು ವಸೂಲಿ ಮಾಡಿದರೆ ಮತ್ತೆ ಕೆಲವು ಕಡಿಮೆ ವಸೂಲಿ ಮಾಡುತ್ತಾರೆ. ಆದ್ದರಿಂದ ಇಂಡಸ್ಟ್ರೀ ಮತ್ತು ಕಾಮರ್ಸ್ ಇಲಾಖೆಯವರು ಎಲ್ಲ ಕಡೆಯೂ ಒಂದೇ ರೀತಿಯಲ್ಲಿ ಇಂಡಸ್ಟ್ರಿಯಲ್ಲಿ ಡೆವಲಪ್‌ಮೆಂಟ್ ಚಾರ್ಜಸ್‌ನ್ನು ವಸೂಲಿ ಮಾಡುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಾನು ಭಾಷಣ ಮಾಡುವುದಕ್ಕೆ ಹೋಗದೆ ಕೆಲವು ಕ್ಲಾರಿಫಿಕೇಷನ್‌ಗಳನ್ನು ಮಾತ್ರ ಕೇಳುತ್ತೇನೆ. ಮೊದಲನೆಯದಾಗಿ, ಕಳೆದ ಎರಡು ವರ್ಷಗಳಿಂದ ಬಿ.ಡಿ.ಎ.ನಲ್ಲಿ ಏನು ಕೆಲಸ ಮಾಡುತ್ತಿದ್ದಾರೆ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಎಸ್. ಎಂ. ಶೀರಪ್ಪಳಿ ಚಂದ್ರಶೇಖರ್.—ಬಿ.ಡಿ.ಎ. ವಿಚಾರ ಈ ಬೇಡಿಕೆಗಳಲ್ಲಿ ಬರುವುದಿಲ್ಲ.

ಶ್ರೀ ಮಳ್ಳೂರು ಆನಂದರಾವ್.—ಈಗ ಬೆಂಗಳೂರು ನಗರ ಕಾರ್ಪೊರೇಷನ್ ಅವರು ರಸ್ತೆ ರಿಪೇರಿ ಕೆಲಸ ತೆಗೆದುಕೊಂಡಿದ್ದಾರೆ. ದೊಡ್ಡ ದೊಡ್ಡ ರಸ್ತೆಗಳೆಲ್ಲಾ ಚೆನ್ನಾಗಿವೆ. ಆದರೆ ಒಳರಸ್ತೆಗಳ ದುರಸ್ತಿ ಯಾವ ರೀತಿ ಮಾಡಲಾಗಿದೆ ಎಂಬುದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಏಕೆಂದರೆ ಈ ಒಳರಸ್ತೆಗಳಲ್ಲಿ ಓಡಾಡುವುದೇ ಕಷ್ಟವಾಗಿದೆ. ಈ ಒಳರಸ್ತೆಗಳನ್ನು ಪ್ರವೇಶ ಮಾಡುವುದಕ್ಕೇ ಸಾಧ್ಯವಿಲ್ಲ, ಅಷ್ಟು ಕೆಟ್ಟಿವೆ. ಆದ್ದರಿಂದ ಈ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟರೆ ಚೆನ್ನಾಗಿರುತ್ತದೆ.

ಇನ್ನು ಸ್ವಚ್ಛತೆಯ ಬಗ್ಗೆ ಲಾರಿಗಳನ್ನು ಗೊತ್ತು ಮಾಡಿದ್ದೀರಿ. ಈಗ ಇದಕ್ಕಾಗಿ ಎಷ್ಟು ಲಾರಿಗಳಿವೆ, ಅವುಗಳಲ್ಲಿ ಎಷ್ಟು ಓಡುತ್ತವೆ. ಎಷ್ಟು ಕೆಟ್ಟಿವೆ ಎಂಬುದನ್ನು ತಿಳಿಸಬೇಕು. ೩೦ ಲಕ್ಷ ಜನರು ವಾಸ ಮಾಡುವ ಕಡೆ ಬೀಳತಕ್ಕಂಥ ಕಸವನ್ನು ಸಾಗಿಸಲು ಲಾರಿಗಳು ಸಾಲದಿದ್ದರೆ ಪರ್ಯಾಯ ವ್ಯವಸ್ಥೆ ಏನಾದರು ಮಾಡಿದ್ದೀರಾ ಹೇಗೆ? ಈಗ ಪೆಟ್ರೋಲ್ ಮತ್ತು ಡೀಜಲ್ ಬೆಲೆ ಜಾಸ್ತಿಯಾಗಿರುವುದರಿಂದ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕಸ ಸಾಗಿಸಲು ಎತ್ತಿನ ಗಾಡಿಗಳ ಮೂಲಕ ಸಾಗಿಸಲು ಮತ್ತು ಏನಾದರು ಒಂದು ವ್ಯವಸ್ಥೆ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಇನ್ನು ಮಾನ್ಯ ಮುಖ್ಯ ಮಂತ್ರಿಗಳು ಖಾಸಗಿಯಾಗಿ ಒಂದು ಮೀಟಿಂಗ್ ಕರೆದಾಗ ನಾವು ಅಲ್ಲಿ ಕೆಲವು ಸಲಹೆಗಳನ್ನು ಕೊಟ್ಟೆವು. ಈಗ ಕಾರ್ಪೊರೇಷನ್ ಕಛೇರಿಯಲ್ಲಿ ವ್ಯಾಪಕವಾದಂಥ ಭ್ರಷ್ಟಾಚಾರ ಇದೆ. ಉನ್ನತ ಮಟ್ಟದ ಅಧಿಕಾರಿಗಳನ್ನು ಬಿಟ್ಟರೆ ಕೆಳಮಟ್ಟದಲ್ಲಿ ಹಣ ಕೊಡದೆ ಯಾವ ಕೆಲಸವೂ ಆಗುವುದಿಲ್ಲ. ಇದು ಮೊದಲಿನಿಂದಲೂ ಬೆಳೆದುಕೊಂಡು ಬಂದಿದೆ. ಅಲ್ಲಿ ಒಂದು ಕೆಲಸ ಆಗಬೇಕಾದರೆ ಇಲಾಖೆಯಿಂದ ಇಲಾಖೆಗೆ, ಸೆಕ್ಷನ್‌ನಿಂದ ಸೆಕ್ಷನ್‌ಗೆ ತಿರುಗಾಡಬೇಕು. ಅಲ್ಲಿನ ಕಛೇರಿ ಒಂದು ಫಿಷ್ ಮಾರ್ಕೆಟ್ ತರಹ ಇರುತ್ತದೆ. ಈ ರೀತಿಯಿಂದ ಜನರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಅಲ್ಲಿ ಪಬ್ಲಿಕ್ ರಿಲೇಷನ್ ಆಫೀಸರ್ ಒಬ್ಬರನ್ನು ನೇಮಕ ಮಾಡಬೇಕು ಮತ್ತು ಅವರು ಅಲ್ಲಿಗೆ ಹೋಗುವಂತಹ ಸಾರ್ವಜನಿಕರ ಹತ್ತಿರ ವಿಚಾರ ವಿನಿಮಯ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸುವಂತಹ ಒಂದು ವ್ಯವಸ್ಥೆ ಮಾಡಬೇಕೆಂದು ಮುಖ್ಯಮಂತ್ರಿಗಳ ಹತ್ತಿರ ತಿಳಿಸಿದ ಮೇಲೆ, ಅದನ್ನು ಸ್ವಲ್ಪ ಮಟ್ಟಿಗೆ ಆಚರಣೆಗೆ ತಂದಿದ್ದಾರೆ. ನಾನು ಒಂದು ಸಲ ಕಾರ್ಪೊರೇಷನ್‌ಗೆ ಹೋದಾಗ ಇದನ್ನು ಗಮನಿಸಿದೆ. ಈಗ ಅಲ್ಲಿರುವಂತಹ ಪಬ್ಲಿಕ್ ರಿಲೇಷನ್ ಆಫೀಸರ್ ಪೋಸ್ಟ್-ಆಫೀಸ್ ತರಹ ಕೆಲಸ ಮಾಡುತ್ತಿದ್ದಾರೆ. ಆದರೆ ಜನರು ಕೊಟ್ಟ ಅರ್ಜಿಗಳನ್ನು ಸಂಬಂಧಪಟ್ಟ ಸೆಕ್ಷನ್‌ಗಳಿಗೆ ಕಳುಹಿಸಿಕೊಡುತ್ತಾರೆ. ಅದು ಬಿಟ್ಟು ಬೇರೆ ಏನೂ ಮಾಡುವುದಿಲ್ಲ. ಅವರಿಗೆ ಕಿಂಚಿತ್ ಆದರೂ ಅಧಿಕಾರ ಇರಬೇಕು. ಅದು ಬಿಟ್ಟು ಅವರನ್ನು ಗಾರ್ಡ್ ತರಹ ಇಟ್ಟಿರುವುದು ಸರಿಯಲ್ಲ. ಯಾರಾದರೂ ಅರ್ಜಿ ಕೊಟ್ಟರೆ ಅವರ ಕೆಲಸ ಆಗುತ್ತದೋ ಇಲ್ಲವೋ ಮತ್ತು ಆಗುವುದಿದ್ದರೆ ಎಷ್ಟು ದಿವಸಗಳಲ್ಲಿ ಆಗುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಯಿಂದ ಅರ್ಜಿ ಕೊಟ್ಟವರಿಗೆ ಉತ್ತರ ಕಳುಹಿಸಿಕೊಡುವಂತಹ ವ್ಯವಸ್ಥೆ ಆಗಬೇಕು. ಈಗ ಅಲ್ಲಿನ ನೌಕರರು ಯಾವಾಗಲೂ ಕಾರಿಡಾರ್‌ನಲ್ಲಿಯೇ ಓಡಾಡುತ್ತಾ ಗಿರಾಕಿಗಳಿಗಾಗಿ ಕಾಯುತ್ತಿರುತ್ತಾರೆ. ದುಡ್ಡು ಕೊಡದೆ ಯಾವ ಕೆಲಸವೂ ಆಗುವುದಿಲ್ಲ. ದುಡ್ಡು ಕೊಟ್ಟರೆ ಯಾವ ಕೆಲಸವಾದರೂ ಆಗುತ್ತದೆ. ಈ ಒಂದು ಭ್ರಷ್ಟಾಚಾರವನ್ನು ನಿಲ್ಲಿಸಲು ಮಾನ್ಯ ಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಕಾರ್ಪೊರೇಷನ್‌ಗೆ ಶಿಕ್ಷಣದ ಒಂದು ಜವಾಬ್ದಾರಿಯೂ ಸಹ ಇದೆ. ಬೆಂಗಳೂರಿನ ೩೦ ಲಕ್ಷ ಜನತೆಗೆ ಶಿಕ್ಷಣ ಕೊಡುವ ಹೊಣೆಗಾರಿಕೆಯನ್ನು ಸರ್ಕಾರ ವಹಿಸಿಕೊಂಡಿದೆ. ಕಾರ್ಪೊರೇಷನ್ ಕೂಡ ಸ್ವಲ್ಪ ಮಟ್ಟಿಗೆ ಈ ಒಂದು ಜವಾಬ್ದಾರಿಯನ್ನು ಹೊತ್ತುಕೊಂಡಿದೆ. ಕಾರ್ಪೊರೇಷನ್ ಅವರು ಶಾಲೆಗಳನ್ನು ನಡೆಸಬೇಕೆಂದು ಕಡ್ಡಾಯ ಇಲ್ಲದಿದ್ದರೂ ಸಹ ಕೆಲವು ನರ್ಸರಿ, ಪ್ರಾಥಮಿಕ ಹಾಗೂ ಹೈಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಸರ್ಕಾರದ ಶಾಲೆಗಳು ಕೇವಲ ೪-೫ ಇವೆ. ಸರ್ಕಾರದ ಶಾಲೆಗಳು ಜಾಸ್ತಿ ಇಲ್ಲದ ಕಾರಣ ಬೆಂಗಳೂರಿನಲ್ಲಿ ಖಾಸಗೀ ಶಾಲೆಗಳೇ ಜಾಸ್ತಿ ಇವೆ. ಅಲ್ಲಿ ನಡೆಯುವ ಅವ್ಯವಹಾರಗಳನ್ನು ತಡೆಗಟ್ಟಲು ಮತ್ತು ಬೆಂಗಳೂರಿನಲ್ಲಿರುವ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಲು ಪ್ರತಿ ಮೊಹಲ್ಲಾದಲ್ಲೂ ಸಹ ಅಲ್ಲಿನ ಒಂದು ಅವಶ್ಯಕತೆಗೆ ತಕ್ಕಂತೆ ಹೆಚ್ಚು ಹೆಚ್ಚು ಶಾಲೆಗಳನ್ನು ತೆರೆಯಲು ಕಾರ್ಪೊರೇಷನ್‌ಗೆ ಸಾಧ್ಯತೆ ಇದೆಯೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು.

ಇನ್ನು ಬೆಂಗಳೂರಿನ ಟ್ರಾಫಿಕ್ ಬಹಳ ಜಾಸ್ತಿಯಾಗಿದೆ. ಇದಕ್ಕೆ ಕಾರಣವೆಂದರೆ, ಬೆಂಗಳೂರಿನ ಜನಸಂಖ್ಯೆ ೩೦ ಲಕ್ಷಕ್ಕೆ ಹೆಚ್ಚಿರುವುದು. ಜನಸಂಖ್ಯೆಯು ಹೆಚ್ಚಳದಿಂದ ಕಾರುಗಳನ್ನು ಸಹ ನಡೆಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದಕಾರಣ ಬೆಂಗಳೂರಿನ ಸುತ್ತಲೂ ೮೦ ಅಡಿ ಮತ್ತು ನೂರು ಅಡಿಯ ರಿಂಗ್ ರೋಡುಗಳನ್ನು ಜಾಗ್ರತೆಯಾಗಿ ಮಾಡಿಸಿದರೆ ಬೆಂಗಳೂರಿನ ಜನರು ನಗರದ ಒಳಗೆ ಅಲ್ಲದಿದ್ದರೂ ನಗರದ ಹೊರಗಡೆಯಾದರೂ ಸುಸೂತ್ರವಾಗಿ ಓಡಾಡಲು ಅವಕಾಶವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಜಾಗ್ರತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಹೆಚ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಡಳಿತ ಮಂತ್ರಿಗಳು ತಂದಿರತಕ್ಕ ಬೇಡಿಕೆಗೆ ನನ್ನ ಮನಃಪೂರ್ವಕವಾದ ಒಪ್ಪಿಗೆಯನ್ನು ಕೊಡುತ್ತಾ, ನನ್ನ ಒಂದು ತಾಲ್ಲೂಕಿನ ಮತ್ತು ನಮ್ಮ ಜಿಲ್ಲೆಯ ಕೆಲವು ಕುಂದುಕೊರತೆಗಳನ್ನು ನಾಲ್ಕು ಮಾತುಗಳಲ್ಲಿ ಹೇಳಿಲ್ಲಿ ಮುಗಿಸುವುದಕ್ಕೆ ತಮ್ಮ ಅಪ್ಪಣೆಯನ್ನು ಪಡೆದಿದ್ದೇನೆ. ಲಿಂಗಸೂಗೂರು, ಕರಡಕಲ್ ಭಾವಣಿಯಲ್ಲಿ ಕುಡಿಯುವ ನೀರಿನ ಯೋಜನೆ ಬಗ್ಗೆ ಮಾನ್ಯ ಮಂತ್ರಿಗಳು ಕೃಷ್ಣ ನದಿಯಿಂದ ನೀರನ್ನು ಒದಗಿಸಿ, ಕುಡಿಯುವ ನೀರನ್ನು ಒದಗಿಸಿಕೊಡುತ್ತೇವೆಂದು ಭರವಸೆ ಕೊಟ್ಟಿದ್ದರು. ಆದರೆ ಈ ಸದನದಲ್ಲಿ ಇಲ್ಲಿಯವರೆಗೆ ಆ ಹೆಸರುಗಳು ಬಂದಿಲ್ಲ. ನಮಗೆ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಆದುದರಿಂದ ದಯವಿಟ್ಟು ಸಪ್ಲಿಮೆಂಟರಿ ಬಜೆಟ್‌ನಲ್ಲಾದರೂ ಸೇರಿಸಿ ನಮ್ಮ ಏರಿಯಾನಲ್ಲಿ ಕುಡಿಯುವ ನೀರಿನ ಯೋಜನೆಯನ್ನು ಕೈಗೆತ್ತಿಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತೇನೆ. ರಾಯಚೂರಿನಲ್ಲಿ ಹೌಸಿಂಗ್ ಬೋರ್ಡ್ ಈಗಾಗಲೇ ಪುರಸಭೆಗೆ ೨ ಲಕ್ಷಕ್ಕೂ ಹೆಚ್ಚು ಹಣವನ್ನು ಕೊಡುವುದು ಇದೆ. ಹೌಸಿಂಗ್ ಬೋರ್ಡ್ ಏರಿಯಾ ರಸ್ತೆಗಳ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಪುರಸಭೆಯವರು ನಮಗೆ ಎರಡು ಲಕ್ಷ ರೂಪಾಯಿಗಳನ್ನು ಹೌಸಿಂಗ್ ಬೋರ್ಡ್‌ನವರು ಕೊಟ್ಟರೆ ನಾವು ಡೆವಲಪ್‌ಮೆಂಟ್ ಮಾಡಿಕೊಡುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ. ಹೌಸಿಂಗ್ ಬೋರ್ಡ್‌ನಲ್ಲಿ ಈಗ ಆಗುತ್ತಿರುವ ಕಟ್ಟಡಗಳನ್ನು ನೋಡಿದರೆ ಚಿಂತಾಜನಕ ಪರಿಸ್ಥಿತಿಯಲ್ಲಿದೆ. ಆ ಮನೆಗಳಲ್ಲಿ ಇರಬೇಕೋ ಬೇಡವೋ ಎಂದು ಅನ್ನಿಸುತ್ತದೆ. ಕೆಲವು ಜನ ತಾವೇ ಕಟ್ಟಿಕೊಳ್ಳತಕ್ಕ ಪರಿಸ್ಥಿತಿ ಇದ್ದವರಿಗೆ ಎಸ್ಟಿಮೇಟ್ ಪ್ರಕಾರ ಹಣವನ್ನು ಒದಗಿಸಿಕೊಡತಕ್ಕ ಹೊಸ ವಿಚಾರವನ್ನು ಹೌಸಿಂಗ್ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತಂದು ಕೇಳಿಕೊಳ್ಳುತ್ತೇನೆ. ಆರ್ಥಿಕವಾಗಿ ಹಿಂದುಳಿದಿರತಕ್ಕ ಪುರಸಭೆಗಳು ಕರ್ನಾಟಕದಲ್ಲಿದೆ, ಇಂಥಾದ್ದಕ್ಕೆ ಹಣದ ವ್ಯವಸ್ಥೆ ಹೆಚ್ಚಿನ ರೀತಿಯಲ್ಲಿ ಮಾಡಬೇಕು. ಮತ್ತು ಅಲ್ಲಿರತಕ್ಕ ರೈತರಿಗೆ ಬರಗಾಲ ಕಾಮಗಾರಿಗಳಿಂದ, ಉದ್ಯೋಗ ದೃಢೀಕರಣ ಯೋಜನೆಯಿಂದ ಕೆಲಸಕೊಡತಕ್ಕ ಪರಿಸ್ಥಿತಿ ಇಲ್ಲ. ಆದುದರಿಂದ ಉದ್ಯೋಗ ದೃಢೀಕರಣ ಯೋಜನೆಯಲ್ಲಿ, ಬರಗಾಲ ಕಾಮಗಾರಿಗಳಲ್ಲಿ ಕೆಲಸ ಕೊಡತಕ್ಕ ವ್ಯವಸ್ಥೆ ಆಗಬೇಕು ಎಂದು ಕೇಳಿಕೊಳ್ಳುತ್ತೇನೆ. ಕೆಲವು ಕಡೆ ಪುರಸಭೆಗಳಲ್ಲಿ ಅಸಿಸ್ಟೆಂಟ್ ಇಂಜನಿಯರ್ಸ್ ಇಲ್ಲ, ಇದರಿಂದಾಗಿ ಅಲ್ಲಿ ಡೆವಲಪ್‌ಮೆಂಟ್ ಕೆಲಸಗಳು ಸ್ಥಗಿತಗೊಂಡಿವೆ. ಯಾವುದಾದರೂ ಒಂದು ಎಸ್ಟಿಮೇಟ್ ಸ್ಯಾಂಕ್ಷನ್ ಆಗಬೇಕಾದರೆ ಅದು ಪಿ.ಡಬ್ಲ್ಯು.ಡಿ.ಗೆ ಹೋಗಬೇಕು, ಇದರಿಂದ ಎಸ್ಟಿಮೇಟ್ ಸ್ಯಾಂಕ್ಷನ್ ಮಾಡುವುದರಲ್ಲಿ ತಡವಾಗುತ್ತದೆ. ಆದುದರಿಂದ ಯಾವ ಪುರಸಭೆಗಳಲ್ಲಿ ಅಸಿಸ್ಟೆಂಟ್ ಇಂಜನಿಯರ್ಸ್ ಇಲ್ಲ ಅಂಥಾ ಕಡೆ ಅಸಿಸ್ಟೆಂಟ್ ಇಂಜಿನಿಯರ್ಸ್‌ನ್ನು ಕೊಡಬೇಕು ಮತ್ತು ಕುಡಿಯುವ ನೀರಿನ ಬಗ್ಗೆ ತಾವು ಗಮನಹರಿಸಬೇಕು ಎಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೈ. ಪಾಟೀಲ್ (ಅಫ್ಜಲ್‌ಪುರ್).—ಮಾನ್ಯ ಅಧ್ಯಕ್ಷರೆ, ಸೌಜನ್ಯ ಮತ್ತು ಕ್ರಿಯಾಶೀಲಕ್ಕೆ ಹೆಸರಾದ ಮಾನ್ಯ ಧರ್ಮಸಿಂಗ್‌ಜೀಯವರ ಬೇಡಿಕೆಯನ್ನು ಮನ್ನಿಸುತ್ತಾ ನನ್ನ ಕೆಲವು ವಿಚಾರಗಳನ್ನು ತಮ್ಮೆದುರು ಇಡುತ್ತಿದ್ದೇನೆ. ಈಗಾಗಲೇ ಮಾನ್ಯ ಧರ್ಮಸಿಂಗ್‌ಜೀಯವರು ಬಂದ ಮೇಲೆ ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಹೌಸಿಂಗ್‌ನಲ್ಲಾಗಲೀ, ಮುನಿಸಿಪಾಲಿಟಿಯಲ್ಲಾಗಲೀ ಬಹಳಷ್ಟು ಪ್ರಗತಿಪರ ಕೆಲಸಗಳನ್ನು ಮಾಡಿದ್ದಾರೆ. ಆದರೆ ನನ್ನ ಒಂದು ವಿಚಾರವೇನೆಂದರೆ, ಈಗಾಗಲೇ ಬೆಂಗಳೂರು ನಗರ ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ, ಬೇಕಾದಷ್ಟು ಬೆಳೆಯುತ್ತಾ ಹೋಗುತ್ತಾ ಇದೆ. ಆದರೆ ಸುಮಾರು ೮೦ ಜನ ಹಳ್ಳಿಯಲ್ಲಿ ಒಕ್ಕಲುತನದ ಮೇಲೆ ಆಧಾರವಾಗಿಟ್ಟುಕೊಂಡು ಇವತ್ತು ಜೀವನ ಮಾಡುತ್ತಾ ಇದ್ದಾರೆ. ಈಗ ಹಳ್ಳಿಗಳಿಂದ ಜನ ದೊಡ್ಡ ದೊಡ್ಡ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಆದಕಾರಣ ನಾನು ಮಾನ್ಯ ಮಂತ್ರಿಯವರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಏನೆಂದರೆ ದೊಡ್ಡ ದೊಡ್ಡ ಪಟ್ಟಣಗಳನ್ನು ಬೆಳಿಯಲಿಕ್ಕೆ ಅನುಮತಿ ಕೊಡಬಾರದು ಎನ್ನತಕ್ಕ ಒಂದು ಹೊಸ ವಿಚಾರವನ್ನು ಕೊಡುತ್ತಾ ಇದ್ದೇನೆ. ತಾವು ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅನುಕೂಲ ಮಾಡಿಕೊಡಬೇಕು, ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅಭಿವೃದ್ಧಿ ಆಗಬೇಕು, ಎಲ್ಲಾ ತರದ ಸೌಲತ್ತುಗಳನ್ನು ತಾಲ್ಲೂಕು ಮಟ್ಟದಲ್ಲಿ, ಹೋಬಳಿ ಮಟ್ಟದಲ್ಲಿ ಮಾಡತಕ್ಕದ್ದು ಒಳ್ಳೆಯದು. ಹೌಸಿಂಗ್ ಬೋರ್ಡ್ ಆಕ್ಟಿವಿಟೀಸ್ ಹೋಬಳಿ ಮಟ್ಟದಲ್ಲಿ ತಾಲೂಕು ಮಟ್ಟದಲ್ಲಿ ಮಾಡಬೇಕು, ಇದಲ್ಲದೆ ನಮ್ಮ ಭೀಮಾನದಿ ಮಹಾ ಪೂರದಿಂದ ಪ್ರತಿ ವರ್ಷ ನೂರಾರು ಹಳ್ಳಿಗಳು ನಾಶವಾಗಿ ಹೋಗುತ್ತಾ ಇವೆ. ಆದಕಾರಣ, ರೀಹ್ಯಾಬಿಲಿಟೇಷನ್ ಮಾಡಿ, ಮನೆ ಕೊಡುವ ವ್ಯವಸ್ಥೆ ಮಾಡಿಕೊಟ್ಟರೆ ಆ ಜನರಿಗ ಅನು

ಕೂಲವಮಾಡಿಕೊಟ್ಟಂತಾಗುತ್ತದೆ. ಅಲ್ಲದೆ ಮೊದಲು ಟೌನ್ ಪಂಚಾಯಿತಿಗಳು ಇತ್ತು. ಈಗ ಮುನಿಸಿಪಾಲಿಟಿಗಳನ್ನಾಗಿ ಮಾಡಿದಿರಿ, ಈಗ ಅವು ಹಣದ ಮುಗ್ಗಟ್ಟಿನಿಂದ ಬಳಲುತ್ತಾ ಇವೆ. ಅದಕ್ಕೆ ಒಂದು ವೇಳೆ ಆಕ್ಟ್ರಾಯ್ ತಂದರೂ ಕೂಡ ಸರಿಹೋಗುವುದಿಲ್ಲ ಆದಕಾರಣ ಸರ್ಕಾರದಿಂದ ಸಾಕಷ್ಟು ಹಣ ಕೊಟ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡುವುದಕ್ಕೆ ಸಣ್ಣ ಸಣ್ಣ ಮುನಿಸಿಪಾಲಿಟಿಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಅಫ್ಜಲ್‌ಪುರ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ಆಕ್ಟ್ರಾಯ್ ಸಿಬ್ಬಂದಿಯನ್ನು ಎಲ್ಲಾ ಕಡೆ ಮರು ನೇಮಕಾತಿ ಸರ್ಕಾರ ಮಾಡಿಕೊಂಡಿದೆ. ಆದರೆ ಅಫಲ್‌ಪುರದಲ್ಲಿ ಆಕ್ಟ್ರಾಯ್ ಸಿಬ್ಬಂದಿಯನ್ನು ಸರ್ಕಾರ ಅಬ್ಸಾರ್ಬ್ ಮಾಡಿಕೊಂಡಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಆಕ್ಟ್ರಾಯ್ ಸ್ಟಾಫನ್ನು ಮರು ನೇಮಕಾತಿ ಮಾಡಿಕೊಡಬೇಕು ಎಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಶೇರ್‌ಖಾನ್ (ಸೇಡಂ).—ಮಾನ್ಯ ಅಧ್ಯಕ್ಷರೆ, ಈ ಬೇಡಿಕೆಗಳನ್ನು ಮಂಡಿಸಿರತಕ್ಕ ಮಾನ್ಯ ಧರ್ಮಸಿಂಗ್ ಅವರು ಗುಲ್ಬರ್ಗದವರೇ, ನಾನೂ ಕೂಡ ಗುಲ್ಬರ್ಗದವನೇ ಗುಲ್ಬರ್ಗ ಜಿಲ್ಲೆಯ ಕಡೆ ಹೆಚ್ಚು ಲಕ್ಷ್ಯ ಕೊಡಿ ಎಂದು ನಾನೂ ಹೇಳುತ್ತಿದ್ದೇನೆ. ಗುಲ್ಬರ್ಗ ಜಿಲ್ಲೆಯನ್ನು ಏನಾದರೂ ಗಮನಕ್ಕೆ ತೆಗೆದುಕೊಳ್ಳುತ್ತಾ ಇದ್ದಾರ, ಎಲ್ಲಾ ಕಡೆಗೆ ಕೊಟ್ಟು ಗುಲ್ಬರ್ಗಕ್ಕೆ ಏನೂ ಉಳಿಯಲಾರದಂತೆ ಮಾಡಬೇಡಿ ಎಂದು ಹೇಳುತ್ತೇನೆ. ಆದರ ಕಡೆ ಹೆಚ್ಚು ನಿಗಾ ಕೊಡಲಾರದೆ ಇರುವುದು ಯೋಗ್ಯವಾಗಿರಲಾರದು. ಆದುದರಿಂದ ಗುಲ್ಬರ್ಗದ ಕಡೆಗೆ ಹೆಚ್ಚು ಲಕ್ಷ್ಯ ಕೊಡಿ ಎಂದು ಹೇಳುತ್ತೇನೆ. ಮುಖ್ಯವಾಗಿ ಗುಲ್ಬರ್ಗದಲ್ಲಿ ನೀರಿಗೆ ಬಹಳ ತ್ರಾಸವಾಗಿದೆ. ಅಲ್ಲಿ ಕಾರ್ಪೊರೇಷನ್ ಮಾಡುತ್ತೇವೆ ಎಂದು ಹೇಳಿದ್ದೀರಿ, ಅದನ್ನು ಇಂಪ್ಲಿಮೆಂಟ್ ಮಾಡಬೇಕು. ತಾವು ಹುಡ್ಕೋ ಯೋಜನೆಯನ್ನು ತಂದಿದ್ದೀರಿ ಸೆಂಟ್ರಲ್ ಗವರ್ನಮೆಂಟ್‌ನಿಂದ, ಸ್ಲಂ ಕ್ಲಿಯರೆನ್ಸ್ ಬೋರ್ಡ್ ತಂದಿದ್ದೀರಿ. ವಾಟರ್ ಸಪ್ಲೈ ಸ್ಕಿಂ ತಂದುಕೊಡುತ್ತಿದ್ದೀರಿ, ಇದೆಲ್ಲಾ ಕೆಲಸಗಳು ಆಗುತ್ತಾ ಇದೆ. ಆದರೆ ನಮ್ಮ ಏರಿಯ ಬಹಳ ನೆಗ್ಲೆಕ್‌ಟೆಡ್ ಬ್ಯಾಕ್‌ವರ್ಡ್ ಏರಿಯಾ ಆಗಿದೆ, ಅದನ್ನು ಆದಷ್ಟು ಮಟ್ಟಿಗೆ ಅಭಿವೃದ್ಧಿ ಮಾಡಬೇಕು ಎಂದು ನಾನು ರಿಕ್ವೆಸ್ಟ್ ಮಾಡುತ್ತಾ ಇದ್ದೇನೆ. ಗುಲ್ಬರ್ಗ ನೋಡುವುದಕ್ಕೆ ಡಿವಿಜನಲ್ ಹೆಡ್ ಕ್ವಾರ್ಟರ್ಸ್ ಇದ್ದರೂ ಬಹಳ ವರ್ಸ್ಟ್ ಸಿಚುಯೇಷನ್ ಇದೆ. ಬೆಂಗಳೂರು ಕಾರ್ಪೊರೇಷನ್ ಡೆವಲಪ್‌ಮೆಂಟ್ ಮಾಡಿದಿರಿ, ಬೇರೆ ಎಲ್ಲಾ ಕಡೆ ಡೆವಲಪ್ ಮಾಡಿದಿರಿ ಆದರೆ ೬ ಬೆಡ್‌ಗಳು ಇರತಕ್ಕ ಆಸ್ಪತ್ರೆಯನ್ನು ಇಂಟೀರಿಯರ್‌ಗೆ ಕೊಟ್ಟರೆ ಇವತ್ತು ಜನ ನೆನೆಸಿಕೊಳ್ಳುತ್ತಾರೆ. ಬೆಂಗಳೂರಿನಲ್ಲಿ ವಾಣಿವಿಲಾಸ, ವಿಕ್ಟೋರಿಯಾ, ಬೋರಿಂಗ್ ಆಸ್ಪತ್ರೆ ಹೆಚ್ಚು ಅಭಿವೃದ್ಧಿ ಮಾಡುತ್ತಿದ್ದೀರಿ.ಬೇಕೇ ಬೇಕು. ಎಷ್ಟು ಹಾಕಿದರೂ ಹೊಳೆಯಲ್ಲಿ ಹುಣಸೇ ಹಣ್ಣು ತೊಳೆದ ಹಾಗೆ ಆಗಿದೆ. ನಮ್ಮ ಗುಲ್ಬರ್ಗದ ಏರಿಯಾವನ್ನು ನೆಗ್ಲೆಟ್ ಮಾಡಬೇಡಿ ಇದರ ಅಭಿವೃದ್ಧಿ ಕಡೆಗೆ ಹೆಚ್ಚು ನಿಗಾ ಕೊಡಬೇಕು ಎಂದು ಕೇಳಿಕೊಂಡು ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

SRI PRABHAKAR TELKAR (Chitapur).—Mr. Chairman Sir, while supporting the demands putforth by my friend Sri Dharma Singh, I would like to put just three points for the consideration of the Government. The Karnataka Urban Water supply and Drainage Board is meant for the whole State, but the work entrusted to this Board only pertains to few cities and Corporations and recently an Act has also been passed under which Rs. 6 crores has been set apart to this Board to maintain water supply schemes in some of the municipalities. The supply of drinking water to the people of urban areas is a very important feature. Therefore, it would be better to entrust that to the Karnataka Water Supply and Drainage Board providing them with sufficient funds. I also request the Government to entrust

the water supply scheme work at Chittapur to the Board. The hon. Member Sri K. Bhaskar Naidu, who is the Chairman of the Water Supply Schemes was much perturbed that Bellary has not at all been given drinking water as intended by him. Since the Gulbarga people also are facing lot of difficulties in getting drinking water, I request the Hon. Minister to take up the work of providing drinking water at Gulbarga itself. Apart from it, the funds given to Gulbarga Water Supply Scheme are not sufficient. Therefore, I request the Hon. Minister to allot sufficient funds to this Water Supply Scheme and see that the work is completed within 3 years. I also request him to see that the works taken up at Bellary and Gadag-Betgeri are completed within 3 years. Regarding the conversion of Gulbarga and Shimoga Municipalities into Corporations, I request the Hon. Minister to see that those Corporations come into existence on or before 15th August, 1981. I also request him to conduct elections to those Corporations as early as possible. As far as the City Improvement Boards are concerned, I request him to place able persons as Chairmen and Members on those Boards.

With these few words, I conclude my speech.

ಶ್ರೀ ವಿ. ಮಸಿಯಪ್ಪ (ಚಿತ್ರದುರ್ಗ).—ಮಾನ್ಯ ಅಧ್ಯಕ್ಷರೇ, ಮಾನ್ಯ ಪೌರಾಡಳಿತ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಶಾಪಿಂಗ್ ಕಾಂಪ್ಲೆಕ್ಸ್‌ನ್ನು ಏನು ಮಂಜೂರು ಮಾಡಿಕೊಟ್ಟಿದ್ದಾರೆ ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಾಗೆನೇ ನೀರು ಸರಬರಾಜು ವ್ಯವಸ್ಥೆಯ ಬಗ್ಗೆ ನಾವು ಈಗಾಗಲೇ ಒಂದೆರಡು ಸಲ ಸರ್ಕಾರದವರ ಗಮನಕ್ಕೆ ತಂದಿದ್ದರೂ ಸಹ ಅವರು ಇಲ್ಲಿಯವರೆಗೆ ಗಮನ ಕೊಟ್ಟ ಹಾಗೆ ಕಾಣುತ್ತಿಲ್ಲ, ಇದು ಬಹಳ ಕಾಲದಿಂದ ಬೇಡಿಕೆ ಸರ್ಕಾರದ ಮುಂದೆ ಇದೆ ಆದುದರಿಂದ ಇದರ ಕಡೆಗೆ ಮಾನ್ಯ ಸಚಿವರು ಗಮನವನ್ನು ಆದಷ್ಟು ಬೇಗ ನೀಡಬೇಕೆಂದು ಹೇಳುತ್ತಾ ಇವತ್ತು ಚಿತ್ರದುರ್ಗ ನಗರದಲ್ಲಿ ಸುಮಾರು ೫ ಸಾವಿರ ಜನ ಮನೆ ಇಲ್ಲದೆ ಜಾಗವಿಲ್ಲದೆ ಗುಡಿಸಲುಗಳನ್ನು ಹಾಕಿಕೊಂಡು ಮತ್ತು ಬೇರೆ ಬೇರೆ ಜಾಗಗಳಲ್ಲಿ ಸಹ ಗುಡಿಸಲುಗಳನ್ನು ಹಾಕಿಕೊಂಡು ವಾಸ ಮಾಡುತ್ತಿರತಕ್ಕಂಥ ಕಾರ್ಮಿಕ ವರ್ಗವೇನಿದ್ದಾರೆ ಅವರಿಗೆ ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ನಾವು ಅಧಿಕಾರಿಗಳಿಗೂ ಮತ್ತು ಸರ್ಕಾರಕ್ಕೂ ಅರ್ಜಿಗಳನ್ನು ಕೊಟ್ಟಿದ್ದೇವೆ ಮತ್ತು ಜಿಲಾಧಿಕಾರಿಗಳು ಒಂದು ಯೋಜನೆಯನ್ನು ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ ಆದರೆ ಅದು ಎಲ್ಲಿ ಹೋಯಿತೋ ಇಲ್ಲಿಯವರೆಗೆ ಗೊತ್ತಾಗ ಲಿಲ್ಲ. ಆದುದರಿಂದ ಇವತ್ತು ಅಲ್ಲಿಯ ಜನ ಒಳ್ಳೆಯ ಮನೆ ಇಲ್ಲದೆ ಅನಾರೋಗ್ಯಕರವಾದ ವಾತಾವರಣ ದಲ್ಲಿ ವಾಸ ಮಾಡುತ್ತಿದ್ದಾರೆ, ಅಂಥವರಿಗಾಗಿ ನಾವು ಆದಷ್ಟು ಬೇಗ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಆದ್ಯತೆ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಸಿದ್ದಮಾದಯ್ಯ (ಕೊಳ್ಳೇಗಾಲ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳವರು ಮಂಡಿಸಿರತಕ್ಕ ಬೇಡಿಕೆಗೆ ನನ್ನ ಬೆಂಬಲವನ್ನು ಸೂಚಿಸುತ್ತಾ ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ ಕೊಳ್ಳೇಗಾಲದಲ್ಲಿ

ಏನು ಮುನಿಸಿಪಾಲಿಟಿ ಇದೆ ಅದು ಒಳಚರಂಡಿ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದವರು ಮಂಜೂರು ಮಾಡಿ ಕೊಟ್ಟಿದ್ದಾರೆ ಅದಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದಿಸುತ್ತಿದ್ದೇನೆ. ಇನ್ನು ಈಗಿರತಕ್ಕ ಕುಡಿಯುವ ನೀರಿನ ಯೋಜನೆ ಏನಿದೆ ಅದು ೩೦ ಸಾವಿರ ಜನಸಂಖ್ಯೆ ಉಳ್ಳ ಪಟ್ಟಣಕ್ಕೆ ನೀವು ಒಂದೇ ಒಂದು ಪೈಪ್ ಲೈನ್ ಹಾಕಿ ಕೊಟ್ಟಿದ್ದೀರಿ. ಇದರಿಂದ ಎಲ್ಲಾ ಜನರಿಗೂ ಸಹ ನೀರು ಸಹ ಸರಿಯಾಗಿ ಪೂರೈಕೆಯಾಗುತ್ತಿಲ್ಲ. ಆದುದರಿಂದ ಇದರ ಕಡೆಗೆ ಸರ್ಕಾರದವರು ಗಮನ ನೀಡಬೇಕೆಂದು ಒತ್ತಾಯ ಮಾಡಬಯಸುತ್ತೇನೆ. ಅದಕ್ಕೆ ಅಲ್ಲಿಗೆ ಇನ್ನೊಂದು ಪೈಪ್‌ಲೈನನ್ನು ಕೊಟ್ಟು ಅಲ್ಲಿರುವ ನೀರಿನ ತೊಂದರೆಯನ್ನು ಹೋಗಲಾಡಿಸಬೇಕೆಂದು ಈ ಸಂದರ್ಭದಲ್ಲಿ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಅಲ್ಲಿರತಕ್ಕಂಥ ೩೦ ಸಾವಿರ ಜನಸಂಖ್ಯೆಯಲ್ಲಿ ಬಹಳಷ್ಟು ಜನರು ಬಡ ಜನರೇ ಇರುವುದರಿಂದ ಕರೆಂಟ್ ಚಾರ್ಜ್‌ನ್ನು ಸಹ ತೆಗೆದರೆ ಅನುಕೂಲವಾಗುತ್ತದೆ. ಮತ್ತೆ ನಮ್ಮಲ್ಲಿರತಕ್ಕ ಜನಗಳಿಗೆ ಸರಿಯಾಗಿ ಸೈಟ್‌ಗಳನ್ನು ಕೊಟ್ಟಿಲ್ಲ. ಇದಕ್ಕಾಗಿ ಯಾವುದೇ ಜಮೀನನ್ನು ಅಕ್ವೈರ್ ಮಾಡಿದಾಗ ಅದನ್ನು ಸ್ಟೇ ತರತಕ್ಕಂಥದ್ದು ನಡೆದಿದೆ ಇದನ್ನು ಮಾನ್ಯ ಮುಖ್ಯಮಂತ್ರಿಗಳವರು ನಮ್ಮ ಕೊಳ್ಳೇಗಾಲಕ್ಕೆ ಬಂದಾಗ ನೋಡಿಕೊಂಡು ಬಂದಿದ್ದಾರೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri M. H. BEKINALKAR (Sindgi)—Sir, though we speak of decentralisation of powers, basically all powers are concentrated with the Government so far as the Corporations, Municipalities and Town Municipalities are concerned. It will be our duty to see that these Municipalities and local self-governments are given their due share. Under the present Act, there is absolutely no power to these Municipalities even to recruit Class-IV employees. The financial position of these Municipalities is worst. We should seriously think about it and see that these Corporations and local bodies are given some powers. It is our common experience that the Assistant Executive Engineer at Corporation and Municipality level will have to send the estimates to the Government for approval. Therefore, they will have to make the estimates of any work piece by piece. I request the Government to give them some more powers. Lastly, I request the Government to constitute City Improvements Board, early.

Thank you Sir.

(ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

೪-೦೦ ಪಿ.ಎಂ.

ಶ್ರೀ ಧರ್ಮಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು). —ಮಾನ್ಯ ಅಧ್ಯಕ್ಷರೇ, ನಿನ್ನೆ ನಾನು ಮಂಡಿಸಿದ್ದ ಬೇಡಿಕೆಗಳ ಮೇಲೆ ಸುಮಾರು ೫ ಗಂಟೆಗಳ ಕಾಲ ಕೂಲಂಕಂಷವಾಗಿ ಈ ಸಭೆಯಲ್ಲಿ ಎಲ್ಲ ಮಾನ್ಯ ಸದಸ್ಯರು ಚರ್ಚೆ ಮಾಡಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿದ್ದಾರೆ. ಎಲ್ಲ ಸದಸ್ಯರು ಬಹಳ ಮುಖ್ಯವಾಗಿ ಈ ಕರ್ನಾಟಕ ರಾಜ್ಯದಲ್ಲಿರತಕ್ಕ ಜನರ ದೈನಿಕ ಜೀವನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮತ್ತು ಯಾವ ರೀತಿಯಾಗಿ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಹಾಗೂ ಇನ್ನೂ ಪರಿಣಾಮಕಾರಿಯಾಗಿ ಕೆಲಸ ಕಾರ್ಯಗಳು ಆಗಬೇಕೆಂಬ ಕಳವಳಗನ್ನು ಕೂಡ ವ್ಯಕ್ತ ಪಡಿಸಿದ್ದಾರೆ. ಅತಿ ಮುಖ್ಯವಾಗಿ ಕರ್ನಾಟಕ ರಾಜ್ಯದಲ್ಲಿರತಕ್ಕ ಜನರಿಗೆ ನೀರು ಬೇಕು ಮತ್ತು ಸ್ವಚ್ಛತೆ ಬೇಕು. ಹಾಗೂ ಆಯಾಯ ಪ್ರದೇಶಗಳಲ್ಲಿರತಕ್ಕ ನಗರ ಸಭೆಗಳಲ್ಲಿ

ಮತ್ತು ಪುರಸಭೆಗಳಲ್ಲಿ ಯಾವ ರೀತಿಯಾಗಿ ಕೆಲಸ ಕಾರ್ಯಗಳು ಆಗುತ್ತಿವೆ, ಯಾವ ರೀತಿಯಾಗಿ ಎಲ್ಲ ಸೌಕರ್ಯಗಳನ್ನು ಒದಗಿಸಿಕೊಡುತ್ತಿದ್ದಾರೆಂಬುದನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ಹೌಸಿಂಗ್ ಬೋರ್ಡ್ ಬಗ್ಗೆ ಕೂಡ ಹೇಳಿದ್ದಾರೆ ಮತ್ತು ಕಾರ್ಪೋರೇಷನ್‌ಗಳಿಗೆ ಬರಬೇಕಾದ ಆಕ್ಟ್ರಾಯ್, ಕಾಂಪನ್ ಸೇಷನ್, ಗ್ರಾಂಟ್ಸ್ ಕೊಡತಕ್ಕದ್ದರ ಮೇಲೆಲ್ಲ ಸಾಕಷ್ಟು ವಿವರವಾಗಿ ತಮ್ಮ ಸಲಹೆಗಳನ್ನು ಕೊಟ್ಟಿದ್ದೇನೆ. ಮೊಟ್ಟಮೊದಲನೆಯದಾಗಿ, ವಿರೋಧ ಪಕ್ಷದ ಸದಸ್ಯರಾದ ಶ್ರೀಮಾನ್ ಆರ್ಮುಗಂರವರು ಈ ಒಂದು ರಾಜ್ಯದಲ್ಲಿ ಅದರಲ್ಲೂ ಬೆಂಗಳೂರು ನಗರದಲ್ಲಿ ನೀರು ಸರಬರಾಜು ಮಾಡತಕ್ಕ ವ್ಯವಸ್ಥೆಯ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಮಾಡಿದ್ದಾರೆ. ಅದನ್ನು ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಈ ನಗರದ ನೀರು ಸರಬರಾಜಿನ ವಿಚಾರವಾಗಿ ಇತರ ಸದಸ್ಯರು ಕೂಡ ಕೆಲವರು ಪ್ರಸ್ತಾಪ ಮಾಡಿದ್ದಾರೆ. ಈ ಒಂದು ವಿಷಯವಾಗಿ ಎಲ್ಲರೂ ಒಮ್ಮತ ಅಭಿಪ್ರಾಯಗಳನ್ನು ಏನು ವ್ಯಕ್ತ ಮಾಡಿದ್ದಾರೆ ಅವನ್ನು ಒಂದೊಂದಾಗಿ ತೆಗೆದುಕೊಂಡು ಉತ್ತರಿಸುತ್ತೇನೆ. ಬೆಂಗಳೂರು ನಗರದ ಜನಸಂಖ್ಯೆ ೧೯೬೧ರಲ್ಲಿ ೧೧ ಲಕ್ಷ ಇತ್ತು, ೧೯೭೧ರಲ್ಲಿ ೧೬ ಲಕ್ಷ ಆಯಿತು, ಈಗ ೧೯೮೧ರಲ್ಲಿ ೨೯ ಲಕ್ಷ ಆಗಿದೆ. ಈ ರಾಜ್ಯದಲ್ಲಿ ವರ್ಷಕ್ಕೆ ಶೇಕಡ ೮ರಷ್ಟು ಜನಸಂಖ್ಯೆ ಹೆಚ್ಚಾಗಿದ್ದರೆ ಈ ಬೆಂಗಳೂರು ನಗರದಲ್ಲಿ ಅದಕ್ಕಿಂತಲೂ ಹೆಚ್ಚಾಗಿದೆ. ಅಂದರೆ ಹೆಚ್ಚೂ ಕಡಿಮೆ ಒಂದಕ್ಕೆ ಎರಡರಷ್ಟು ಆಗಿದೆ. ನಾವು ೧೯೭೪ರಲ್ಲಿ ೬೪ ಎಂ.ಜಿ.ಡಿ. ನೀರು ದೊರೆಯುತ್ತಿದ್ದು ಪ್ರತಿ ಕುಟುಂಬಕ್ಕೆ ೨೨ ಗ್ಯಾಲನ್ ನೀರನ್ನು ಕೊಡುತ್ತಿದ್ದೆವು. ಇತ್ತೀಚೆಗೆ ಜನಸಂಖ್ಯೆ ಬಹಳವಾದ ಕಾರಣ ಅದನ್ನು ಗಮನಕ್ಕೆ ತೆಗೆದುಕೊಂಡು ಕಾವೇರಿಯ ಮೊದಲನೆ ಸ್ಟೇಜ್ ಅನ್ನು ಮುಗಿಸಿ ಈಗ ೨ನೇ ಸ್ಟೇಜನ್ನು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಇದಕ್ಕಾಗಿ ೫೪ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದು ಈಗಾಗಲೇ ೨೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇನ್ನು ೩೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಆದರೆ ಅದಕ್ಕೆ ಅನೇಕ ಎಡರುತೊಡರುಗಳಿವೆ. ನಮ್ಮ ಬೆಂಗಳೂರು ನಗರ ಇಡೀ ದೇಶದಲ್ಲೇ ೬ನೇ ನಗರವಾಗಿದೆ. ಇಂಥ ನಗರಕ್ಕೆ ಬಹಳ ಕಷ್ಟದಿಂದ ೧೦೦ ಕಿಲೋಮೀಟರ್ ದೂರದಿಂದ ನೀರನ್ನು ತರುತ್ತಿದ್ದೇವೆ. ಅಲ್ಲದೆ ಕೆಳಮಟ್ಟದಿಂದ ಮೇಲ್ಮಟ್ಟಕ್ಕೆ ಅಂದರೆ ಸುಮಾರು ೧೬೦೦ ಅಡಿ ಎತ್ತರಕ್ಕೆ ನೀರನ್ನು ಪಂಪ್ ಮಾಡುತ್ತಿದ್ದೇವೆ. ಟ್ಯಾಂಕ್ ಲೈನಿಂಗ್ ಆಗಲೀ ಪೈಪ್ ಲೈನಿಂಗ್ ಆಗಲೀ ವಿಶೇಷ ರೀತಿಯಲ್ಲಿ ಮಾಡುತ್ತಿದ್ದೇವೆ. ಈ ಬಗ್ಗೆ ಕೂಡ ಸಾಕಷ್ಟು ಎಡರು ತೊಡರುಗಳು ಬರುತ್ತಿವೆ. ಪೈಪುಗಳು ಸಹ ಹೊಸದಾಗಿ ಕಂಪನಿಯಿಂದ ತಯಾರಾಗಬೇಕಾಗಿವೆ. ಕೊನೇಪಕ್ಷ ೧೯೮೨ರೊಳಗಾದರೂ ಈ ೨ನೇ ಹಂತದ ಯೋಜನೆಯನ್ನು ಮುಗಿಸಬೇಕೆಂದು ಇದೆಲ್ಲಕ್ಕು ಮೊದಲೇ ದುಡ್ಡು ಕೊಟ್ಟು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬಯಸುವುದೇನೆಂದರೆ, ಬೆಂಗಳೂರು ನಗರದಲ್ಲಿ ಜನಸಂಖ್ಯೆ ಇದೇ ರೀತಿ ಬೆಳೆದುಕೊಂಡು ಹೋಗಿ ಮುಂಬರುವ ದಿನಗಳಲ್ಲಿ ೪೦ ಲಕ್ಷಕ್ಕೂ ಹೆಚ್ಚಾಗಬಹುದೆಂದೂ ಮತ್ತು ಆಗ ನೀರಿಗೆ ಇನ್ನೂ ತೊಂದರೆಯಾಗಬಹುದೆಂದು ಭಾವಿಸಿ ಅದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳುತ್ತೇನೆ. ಇವತ್ತಿನ ದಿವಸ, ಸುಂದರವಾದ ಕಾವೇರಿಯ ಮೊದಲನೇ ಹಂತದ ಯೋಜನೆಯಿಂದ ೭೫ ಕ್ಯೂಸೆಕ್ಸ್ ನೀರನ್ನು ಪಡೆಯುತ್ತಿದ್ದೇವೆ. ೨ನೇ ಹಂತದ ಯೋಜನೆ ಪೂರ್ಣಗೊಂಡಾಗ ೧೫೦ ಕ್ಯೂಸೆಕ್ಸ್ ನೀರನ್ನು ಪಡೆಯಲಿದ್ದೇವೆ. ೩ನೇ ಯೋಜನೆಯನ್ನು ಮುಗಿಸಿದ ಮೇಲೆ ೩೦೦ ಕ್ಯೂಸೆಕ್ಸ್ ನೀರನ್ನು ಪಡೆಯಬಹುದೆಂದು ಊಹಿಸಿದ್ದೇವೆ. ಇವತ್ತಿನ ದಿವಸ, ಕೆ. ಆರ್. ಸಾಗರ, ಕಬಿನಿ ಯೋಜನೆಗಳಿಂದ ಸುಮಾರು ೭–೮ ಲಕ್ಷ ಜನ ರೈತರು ಹೇಗೆ ನೀರನ್ನು ಪಡೆಯುತ್ತಿದ್ದಾರೆ ಅದೇ ರೀತಿ ಬೆಂಗಳೂರು ನಗರದ ಜನತೆಗೆ ಕಾವೇರಿ ನೀರನ್ನು ಒದಗಿಸಬೇಕೆಂದು ಸಾಕಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಇಂಥ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಹೊರಟಾಗ ಸಾಕಷ್ಟು ಮಂದಿ ಇಂಜಿನಿಯರ್‌ಗಳನ್ನು ತೆಗೆದುಕೊಳ್ಳಲೇಬೇಕಾಗುತ್ತಾದ್ದರಿಂದ ಅಂತೆಯೇ ತೆಗೆದುಕೊಳ್ಳುತ್ತಿದ್ದೇವೆ. ಈ ವಿಚಾರವನ್ನು ಮಾನ್ಯ ಸದಸ್ಯರುಗಳು ಕೂಡ ಪ್ರಸ್ತಾಪ ಮಾಡಿದ್ದಾರೆ. ಕಾವೇರಿ ೩ನೇ ಹಂತದ ಯೋಜನೆಗೆ ೨೪೦ ಕೋಟಿ ರೂಪಾಯಿಗಳ ಡೀಟೇಲ್ಡ್ ಎಸ್ಟಿಮೇಟನ್ನು ತಯಾರು ಮಾಡುತ್ತಿದ್ದೇವೆ; ಯಾವ ಯಾವ ತರಹದ ಎಷ್ಟೆಷ್ಟು ಪೈಪುಗಳು ಬೇಕಾಗುತ್ತವೆ, ಎಷ್ಟು ಗ್ರೌಂಡ್ ಲೆವಲ್ ರಿಸರ್‌ವಾಯರ್‌ಗಳು ಬೇಕಾಗುತ್ತವೆ ಎಂಬುದನ್ನೆಲ್ಲ ಲೆಕ್ಕ ಹಾಕಲು ಸಾಕಷ್ಟು ಸಿಬ್ಬಂದಿ ಬೇಕಾಗುತ್ತದೆ. ಆದಕಾರಣ ಸಿಬ್ಬಂದಿ ವರ್ಗದವರನ್ನು ಕೂಡ ತೆಗೆದುಕೊಂಡಿದ್ದೇವೆ. ಎಲ್ಲೆಲ್ಲಿ ಸಿಬ್ಬಂದಿ ವರ್ಗದವರನ್ನು ಕ್ರಮಬದ್ಧವಾಗಿ ತೆಗೆದುಕೊಳ್ಳುವುದಕ್ಕೆ ಆಗಿಲ್ಲವೆಂಬ ಬಗ್ಗೆ ನಮ್ಮ ಮತ್ತು ವಿರೋಧ ಪಕ್ಷದ ಸದಸ್ಯರುಗಳು ಕಳವಳವನ್ನು ವ್ಯಕ್ತಪಡಿಸಿದ್ದಾರೆ. ಅದನ್ನು ನೋಡಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಗರದ ಜನಸಂಖ್ಯೆಯು

ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಕಾವೇರಿಯ ೩ನೇ ಹಂತದ ಯೋಜನೆಯನ್ನು ಪೂರ್ಣಗೊಳಿಸಿದ ಬಳಿಕವೂ ದೊರೆಯತಕ್ಕ ನೀರು ಸಾಕಾಗದೆ ಹೋದರೆ ೪ನೇ ಹಂತದ ಯೋಜನೆಯಲ್ಲಿ ಅರ್ಕಾವತಿಯಿಂದ ೧೬ ಎಂ.ಜಿ.ಡಿ. ನೀರನ್ನು ಪಡೆಯುವಲ್ಲಿ ೬೦ ಕೋಟಿ ರೂಪಾಯಿಗಳ ಯೋಜನೆಯನ್ನು ಮಾಡುತ್ತಿದ್ದೇವೆ. ಈ ರೀತಿಯಾಗಿ ನಾವು ಮಾಡಲಿಕ್ಕೆ ಹೊರಟಿದ್ದೇವೆ. ಕಾವೇರಿ ೩ನೇ ಹಂತದ ಯೋಜನೆ ಪೂರ್ಣಗೊಂಡಾಗ ಬೆಂಗಳೂರು ನಗರದಲ್ಲಿ ಎಷ್ಟು ನೀರಿನ ಟ್ಯಾಂಕುಗಳನ್ನು ಮಾಡಬೇಕಾಗುತ್ತದೆ ಅಷ್ಟಕ್ಕೆ ಬಿ.ಡಿ.ಎ. ನಲ್ಲಿ ಸ್ಥಳ ದೊರೆಯುವುದೇ ಕಷ್ಟವಾಗಿದೆ. ಗ್ರೌಂಡ್ ಲೆವಲ್ ರಿಸರ್‌ವಾಯರ್‌ಗಳಿಗೆ ಕೂಡ ಸ್ಥಳ ಸಿಗತಕ್ಕ ಪರಿಸ್ಥಿತಿ ಇಲ್ಲ. ಇವತ್ತಿನ ದಿವಸ, ಯಾವುದೇ ಒಂದು ಸಿವಿಕ್ ಅಮೆನಿಟೀಸ್ ಅನ್ನು ಕಲ್ಪಿಸಿ ಕೊಡಲಿಕ್ಕೆ ಬೇಕಾದ ಸ್ಥಳ ಇವತ್ತು ಬೆಂಗಳೂರು ನಗರದಲ್ಲಿ ಇಲ್ಲವಾಗಿದೆ. ಇವೆಲ್ಲ ಸಮಸ್ಯೆಗಳು ನಮ್ಮ ಎದುರಿಗೆ ಇವೆ. ನಮ್ಮ ಹೊಸ ಸರ್ಕಾರ ಬಂದ ಮೇಲೆ ನಗರಕ್ಕೆ ಸಮಗ್ರವಾಗಿ ನೀರು ಸರಬರಾಜು ಮಾಡಲು ಏನೇನು ಯೋಜನೆಗಳನ್ನು ಕೈಗೊಳ್ಳಬೇಕೆಂಬುದನ್ನು ಯೋಚನೆ ಮಾಡಿ ಒಂದೊಂದಾಗಿ ಕೈಗೊಳ್ಳುತ್ತಿದ್ದೇವೆ. ಬೆಂಗಳೂರು ನಗರದಲ್ಲಿ, ಇಡೀ ದೇಶದಲ್ಲಿ ಎಲ್ಲೂ ಕೊಡಲು ಸಾಧ್ಯವಾಗದಷ್ಟು (೧೦೦ ಪರ್ಸೆಂಟ್) ಶುದ್ಧ ನೀರನ್ನು ಕೊಡುತ್ತಿದ್ದೇವೆ. ಬೊಂಬಾಯಿಯಲ್ಲಿ, ಕಲ್ಕತ್ತದಲ್ಲೆಲ್ಲ ರಾ ವಾಟರ್ ಕೊಡುತ್ತಿದ್ದಾರೆ. ಆದರೆ ನಾವು ೧೦೦ ಪರ್ಸೆಂಟ್ ಶುದ್ಧ ನೀರನ್ನು ಕೊಡುತ್ತಿದ್ದೇವೆ. ೧೮೯೬ ರಲ್ಲಿ ಏನು ಪೈಪುಗಳನ್ನು ಹಾಕಿದ್ದಾರೆ ಅವು ರೀಪ್ಲೇಸ್ ಆಗಿಲ್ಲ. ಎಲ್ಲೆಲ್ಲಿ ಹಳೆಯ ಪೈಪುಗಳಿಂದ ತೊಂದರೆಯಾಗಿದೆ ಎಂದು ದೂರುಗಳು ಬಂದಿವೆ ಅಂಥ ಕಡೆಗಳಲ್ಲಿ ಹಂತಹಂತವಾಗಿ ರೀಪ್ಲೇಸ್ ಮಾಡುತ್ತಿದ್ದೇವೆ. ಇಬ್ರಾಹಿಂ ಬೀದಿಯಾಗಲೀ ಮತ್ತೊಂದು ಬೀದಿಯಾಗಲೀ ಎಲ್ಲ ಕಡೆ ಎಲ್ಲೆಲ್ಲಿ ಪೈಪುಗಳು ಕಂಡೆಂ ಆಗಿವೆ, ಎಲ್ಲೆಲ್ಲಿ ಸಿವೆರೇಜ್ ಹೋಗಿದೆ ಎಂಬುದನ್ನೆಲ್ಲ ನಾನೇ ಖುದ್ದಾಗಿ ಭೇಟಿ ನೀಡಿ ನೋಡಿದ್ದೇನೆ. ಅದನ್ನು ಇವತ್ತಿನ ದಿವಸ ರೀಪ್ಲೇಸ್ ಮಾಡುತ್ತಿದ್ದೇವೆ. ಆದರೆ ಅದಕ್ಕೆ ಬೇಕಾದ ಪೈಪುಗಳು ಸಿಗುತ್ತಿಲ್ಲ. ಅದ ಕ್ಕೋಸ್ಕರ ವಿ.ಎಸ್.ಐ.ಎಲ್.ಗೆ ೨೦-೪೦ ಲಕ್ಷ ರೂಪಾಯಿಗಳನ್ನು ಮುಂಗಡವಾಗಿ ಕೊಟ್ಟಿದ್ದೇವೆ. ಎಲ್ಲೆಲ್ಲಿ ಪೈಪುಗಳು ಕಂಡೆಂ ಆಗಿವೆ ಎಂದು ದೂರುಗಳು ಬಂದಿವೆ ಅಂಥ ಕಡೆಗಳಲ್ಲೆಲ್ಲ ಕ್ರಮ ತೆಗೆದು ಕೊಂಡಿದ್ದೇವೆ. ಇದು ಒಂದು ಬೃಹತ್ ಸಮಸ್ಯೆಯಾಗಿದೆ. ಅಂದರೆ ಬೆಂಗಳೂರು ನಗರದಲ್ಲಿರತಕ್ಕ ಎಲ್ಲ ಜನರಿಗೂ ಇವತ್ತು ಕಂಡೆಂಡ್ ವಾಟರ್ ಕೊಟ್ಟಿದ್ದೇವೆಂದು ಅಲ್ಲ, ಎಲ್ಲೋ ಕೆಲವು ಕಡೆ ಆ ರೀತಿ ಆಗಿದೆ. ಅದೂ ಕೂಡ ಗಮನಕ್ಕೆ ಬಂದಾಗ ಕ್ರಮ ತೆಗೆದುಕೊಂಡಿದ್ದೇವೆ. (ಜಲಮಂಡಲಿ ಕ್ರಮ ತೆಗೆದುಕೊಳ್ಳುತ್ತಿವೆ.) ಮಾನ್ಯ ಆರ್ಮುಗಂರವರು ಒಂದು ಪುಸ್ತಕವನ್ನು ಓದುತ್ತಾ ನಗರದಲ್ಲಿ ಇಷ್ಟು ಜನಸಂಖ್ಯೆ ಇದೆಯಾದ್ದರಿಂದ ರೀಸರ್ಚ್ ಆಗಬೇಕು ಮತ್ತು ಮೇಲಿಂದ ಮೇಲೆ ಎಕ್ಸಾಮಿನ್ ಆಗಬೇಕೆಂದು ಹೇಳಿದರು. ಅದಕ್ಕೆ ರೀಸರ್ಚ್‌ನವರು ಕೂಡ ಒಪ್ಪಿದ್ದಾರೆ. ಇಲ್ಲಿಯೂ ಕೂಡ ಒಂದು ಪ್ರಯೋಗಾಲಯವನ್ನು ಮಾಡುವುದರ ಜೊತೆಗೆ ಒಂದ ಹೆಲ್ತ್ ಸೆಲ್ ಅನ್ನು ಸಹ ಕ್ರಿಯೇಟ್ ಮಾಡಿ ಜಾಯಿಂಟ್ ಡೈರೆಕ್ಟರ್ ಬಂದು ಬೆಂಗಳೂರು ಜಲಮಂಡಲಿಯಲ್ಲಿ ಯಾವಾಗಲೂ ಚೆಕ್‌ಅಪ್ ಮಾಡತಕ್ಕ ವ್ಯವಸ್ಥೆ ಮಾಡಿದ್ದೇವೆ.

ಬೆಂಗಳೂರು ನಗರದ ಜನತೆಗೆ ಏನು ತೊಂದರೆಯಾಗಿದೆ ಎಂಬುದರ ಬಗ್ಗೆ ನಾವು ಗಮನ ಕೊಟ್ಟಿದ್ದೇವೆ. ಈ ವಿಷಯದಲ್ಲಿ ಆಗಾಗ ಶಾಸಕರೊಡನೆ ಸಮಾಲೋಚನೆ ಕೂಡ ಮಾಡಿದ್ದೇವೆ. ನಾವು ಬಂದ ನಂತರ ಇಷ್ಟೆಲ್ಲಾ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಮಾಲೋಚನೆ ಮಾಡಿದ್ದೇವೆ. ಈ ರೀತಿ ಮೊದಲು ಯಾರೂ ಮಾಡಿರಲಿಲ್ಲ. ಇದೇ ರೀತಿ ಎಲ್ಲೆಲ್ಲಿ ಏನೇನು ಮಾಡಬೇಕೆಂಬ ಬಗ್ಗೆಯಾಗಲೀ ಮತ್ತಿತರ ಬಗ್ಗೆಯಾಗಲಿ ಸಲಹೆ ಸೂಚನೆ ನೀಡಲು ಸ್ಥಳೀಯರುಗಳಿಂದ ಅಂದರೆ ಆ ಬಡಾವಣೆಯ ಡಾಕ್ಟರುಗಳು, ಲಾಯರ್‌ಗಳು, ಪತ್ರಿಕೋದ್ಯಮಿಗಳು, ಶಾಸಕರು ಮುಂತಾದವರನ್ನು ಕೂಡಿಸಿ ಕಮಿಟಿಗಳನ್ನು ಕೂಡ ರಚನೆ ಮಾಡಿದ್ದೇವೆ. ಬೆಂಗಳೂರಿನ ಬೆಳವಣಿಗೆಗೆ ಒಂದು ಡೆಡ್‌ಲೈನ್ ಹಾಕಬೇಕು, ಇವತ್ತಿನ ದಿವಸ ಕೈಗಾರಿಕೆಗಳು ಬೆಂಗಳೂರು ನಗರಕ್ಕೆ ಬರುತ್ತಿವೆ, ಇದೇ ರೀತಿ ಇದನ್ನು ಬೆಳೆಯಲು ಬಿಟ್ಟರೆ ನಗರಕ್ಕೆ ತೊಂದರೆಯಾಗುತ್ತದೆ ಎಂಬುದನ್ನು ವಿಚಾರ ಮಾಡಿ ಬೆಂಗಳೂರಿನ ಸುತ್ತಮುತ್ತ ಇರತಕ್ಕ ಸಣ್ಣ ಸಣ್ಣ ಪಟ್ಟಣಗಳ ಅಭಿವೃದ್ಧಿ ಮಾಡಲು ಯೋಜನೆ ಹಾಕಿಕೊಂಡಿದ್ದೇವೆ. ಇದಕ್ಕಾಗಿ ಇಂಟಿಗ್ರೇಟೆಡ್ ಅರ್ಬನ್ ಡೆವಲಪ್ಮೆಂಟ್ ಪ್ಲಾನ್ ಎಂದು ಮಾಡಿ ಒಂದು ಲಕ್ಷ ಜನಸಂಖ್ಯೆ ಇರುವ ಕಡೆ ರಸ್ತೆ ನಿರ್ಮಾಣ ಮಾಡುವುದು, ನಿವೇಶನಗಳನ್ನು ಕೊಡುವುದು, ಮಾರ್ಕೆಟ್ ಕಾಂಪ್ಲೆಕ್ಸ್ ಮಾಡುವುದು, ರಿಂಗ್ ರೋಡ್ ಮಾಡುವುದು ಮುಂತಾದ ಕೆಲಸ ಕಾರ್ಯಗಳಿಗೆ ಹಣ ನೀಡುತ್ತದೆ. ಪ್ರಪ್ರಥಮವಾಗಿ ಈ ಯೋಜನೆಗೆ ದಕ್ಷಿಣ ಭಾರತದಲ್ಲಿ ೧೬ ಪಟ್ಟಣಗಳನ್ನು ಸೆಲೆಕ್ಟ್ ಮಾಡಿದ್ದಾರೆ ಈಗಾಗಲೇ ೮ ಪಟ್ಟಣಗಳಿಗೆ ದುಡ್ಡು ಬಂದಿದೆ. ಇದೇ ರೀತಿ ಬೇರೆ ಪಟ್ಟಣಗಳನ್ನೂ ಅಭಿವೃದ್ಧಿ ಮಾಡಲಾಗುತ್ತದೆ. ಇದನ್ನು

ಕೇಂದ್ರದ ಮನ್ನಣೆಗೆ ಕಳುಹಿಸಿದ್ದೇವೆ. ಹೀಗೆ ನಾವು ಉಪನಗರಗಳ ಅಭಿವೃದ್ಧಿಗೆ ಗಮನ ಕೊಟ್ಟು ಮಾಡುತ್ತಿದ್ದೇವೆ. ಕೈಗಾರಿಕೆಗಳು ಬೆಂಗಳೂರು ನಗರದಲ್ಲಿ ಬೆಳೆಯದೆ ತುಮಕೂರು, ಚನ್ನಪಟ್ಟಣ, ಕನಕಪುರವು ಇಂತಹ ಸಣ್ಣ ಸಣ್ಣ ಬೆಂಗಳೂರು ಹತ್ತಿರದಲ್ಲಿರುವ ಪಟ್ಟಣದಲ್ಲಿ ಬೆಳೆಯಲು ಅನುಕೂಲವಾಗುವಂತೆ ಈ ಪಟ್ಟಣಗಳ ಅಭಿವೃದ್ಧಿ ಮಾಡಿದರೆ ಅನುಕೂಲವಾಗಬಹುದು ಎಂಬ ಮುಂದಾಲೋಚನೆಯನ್ನು ಇಟ್ಟುಕೊಂಡು ಕೆಲಸ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಕರ್ನಾಟಕದಲ್ಲಿರತಕ್ಕ ಬೇರೆ ಪಟ್ಟಣಗಳಿಗೂ ನೀರನ್ನು ಕೊಡಬೇಕಾಗಿದೆ, ೨೪೦ ಪುರಸಭೆ ಮತ್ತು ನಗರಸಭೆ ಪ್ರದೇಶದಲ್ಲಿ ನೀರು ಕೊಡುವುದಕ್ಕೆ ಯೋಜನೆ ಮಾಡಿದೆ. ಈಗಾಗಲೇ ೨೩೦ ಪಟ್ಟಣಗಳಿಗೆ ನೀರು ಕೊಟ್ಟಿದ್ದೇವೆ. ಮಂಡ್ಯದಲ್ಲಿ ೧ ಹಳ್ಳಿ, ಬಳ್ಳಾರಿ ಕಡೆ ೨ ಹಳ್ಳಿ ಇದ್ದು ಬರತಕ್ಕ ನವೆಂಬರ್ ಒಳಗೆ ಎಲ್ಲ ಪಟ್ಟಣಗಳಿಗೂ ನೀರು ಸಿಗುವಂತೆ ಮಾಡಬೇಕಾಗಿದೆ. ಜನಸಂಖ್ಯೆ ಹೆಚ್ಚಾಗಿ ಪಟ್ಟಣಗಳು ಬೆಳೆಯುತ್ತಿವೆ. ಸಾಕಷ್ಟು ಸ್ಲಂಗಳೂ ಬೆಳೆಯುತ್ತಿವೆ. ಈಗಿರತಕ್ಕ ನೀರು ಸರಬರಾಜು ಯೋಜನೆಯಲ್ಲಿ ಎಲ್ಲಾ ಕಡೆ ನೀರು ಪೂರೈಕೆ ಮಾಡುವ ಪರಿಸ್ಥಿತಿಯಲ್ಲಿಲ್ಲ. ೨೦-೩೦ ವರ್ಷಗಳಲ್ಲಿ ಜನಸಂಖ್ಯೆ ಬೆಳವಣಿಗೆ ಎಷ್ಟಾಗಬಹುದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ಮಾಡಿದ್ದೇವೆ. ೧೯೭೫ರಲ್ಲಿ ಪ್ರಾರಂಭವಾದ ಪಟ್ಟಣ ನೀರು ಸರಬರಾಜು ಮಂಡಳಿಯು ೧೯೮೦ರವರೆಗೆ ೫೪ ಯೋಜನೆಗಳನ್ನು ಹಾಕಿ ೨೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಕೇವಲ ಒಂದೇ ವರ್ಷದಲ್ಲಿ ನಾವು ಅಭಿವೃದ್ಧಿ ಯೋಜನೆಗಳನ್ನು ಹಾಕಿ ೩೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೧ ರಿಂದ ೧೯೯೧ರವರೆಗೆ ೧೦ ವರ್ಷದ ಅವಧಿಯಲ್ಲಿ ಜನಸಂಖ್ಯೆ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಪಟ್ಟಣಗಳಿಗೆ ಸಮಗ್ರವಾಗಿ ನೀರನ್ನು ಒದಗಿಸಬೇಕು, ಸ್ಯಾನಿಟೇಷನ್, ಅಂಡರ್‌ಗ್ರೌಂಡ್ ಡ್ರೈನೇಜ್ ಆಗಬೇಕು ಎಂಬ ದೃಷ್ಟಿಯಿಂದ ಕಾರ್ಯಕ್ರಮವನ್ನು ರೂಪಿಸಿದ್ದೇವೆ. ಕರ್ನಾಟಕದ ಬೆಳವಣಿಗೆಯ ದೃಷ್ಟಿಯಿಂದ ೭೭೫ ಕೋಟಿ ರೂಪಾಯಿನ ಸ್ಕೀಂ ತಯಾರಾಗಿದೆ. ಪಟ್ಟಣ ನೀರು ಸರಬರಾಜು ಯೋಜನಾ ಮಂಡಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ನಂಜುಂಡಸ್ವಾಮಿಯವರು ಸಂಬಂಧಪಟ್ಟ ಸಮಿತಿಯ ಸದಸ್ಯರಾಗಿದ್ದಾರೆ. ೨೫೪ ಕೋಟಿ ರೂಪಾಯಿ ಪಟ್ಟಣ ನೀರು ಸರಬರಾಜು ಮಂಡಳಿಗೆ ಸಿಗುತ್ತದೆ. ಹಂತಹಂತವಾಗಿ ವರ್ಷಕ್ಕೆ ೬೦ ರಿಂದ ೭೦ ಕೋಟಿ ರೂಪಾಯಿ ಹಣ ಪಡೆದು ಯೋಜನೆಯನ್ನು ಜಾರಿಗೆ ತರಲಾಗುತ್ತದೆ. ಅಷ್ಟು ಹಣ ನಮ್ಮಲ್ಲಿಲ್ಲದಿರುವುದರಿಂದ ಬೇರೆ ದೇಶಗಳಿಂದ ವರ್ಲ್ಡ್ ಬ್ಯಾಂಕಿನಿಂದ, ಮುಂತಾದ ಕಡೆಯಿಂದ ಯಾವರೀತಿ ಹಣವನ್ನು ತರಬಹುದು ಎಂಬುದನ್ನು ನೋಡಿ ಹಣ ತೆಗೆದುಕೊಂಡು ಎಲ್ಲಾ ಕಡೆ ನೀರು ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೇವೆ. ಎಲ್ಲೆಲ್ಲಿ ನೀರಿನ ಕೊರತೆ ಇದೆ, ಅಲ್ಲೆಲ್ಲಾ ಸ್ಕೀಂ ಮಾಡಿ ನೀರಿನ ಕೊರತೆಯನ್ನು ಹೋಗಲಾಡಿಸಬೇಕೆಂಬ ದೃಷ್ಟಿಯಿಂದ ಸರ್ಕಾರ ತೀವ್ರವಾದ ಗಮನವನ್ನು ಕೊಟ್ಟಿದೆಯೆಂಬ ಮಾತನ್ನು ತಮ್ಮ ಮುಖಾಂತರ ಎಲ್ಲ ಸದಸ್ಯರಿಗೆ ಹೇಳುತ್ತಿದ್ದೇನೆ. ಬಳ್ಳಾರಿಗೆ ನೀರಿನ ಸೌಕರ್ಯ ಆಗಬೇಕೆಂದು ಮಾನ್ಯ ಭಾಸ್ಕರ ನಾಯಿಡು ಅವರು ಹೇಳಿದ್ದಾರೆ. ಎಲ್ಲ ಪುರಸಭೆಗಳೂ, ನಗರಸಭೆಗಳೂ, ಕಾರ್ಪೊರೇಷನ್‌ಗಳೂ ಎಲ್ಲ ಜನರ ಮೆಚ್ಚುಗೆ ಪಡೆಯತಕ್ಕ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಬೇಕು, ನೀರಿನ ಸೌಕರ್ಯ, ರಸ್ತೆ ಸೌಕರ್ಯ, ಮಾರ್ಕೆಟ್ ಕಾಂಪ್ಲೆಕ್ಸ್ ಮಾಡುವುದು, ಕೊಳಚೆ ಪ್ರದೇಶದ ಅಭಿವೃದ್ಧಿ ಮಾಡುವುದು, ಮತ್ತಿತರ ನಾಗರೀಕ ಸೌಲಭ್ಯಗಳನ್ನು ಕಲ್ಪಿಸಿಕೊಡುವುದು ಈ ಕೆಲಸಗಳನ್ನು ಮಾಡಬೇಕು ಎಂದು ಪ್ರಯತ್ನ ಮಾಡುತ್ತಿದ್ದೇವೆ. ಜನರೂ ಕೂಡ ಇವತ್ತು ತೆರಿಗೆಗಳನ್ನು ಪರಿಷ್ಕರಿಸಲು ಹೊರಟಾಗ ಅದಕ್ಕೆ ಬೆಂಬಲ ನೀಡಿ ಸಹಕಾರ ಕೊಡಬೇಕು. ಅವರೂ ಕೂಡ ತಿಳಿದುಕೊಳ್ಳಬೇಕು. ಈ ಎಲ್ಲ ಕಾರ್ಯಗಳೂ ಸರ್ಕಾರದಿಂದ ಆಗಬೇಕಾಗಿದೆ ಎಂದು ಅರಿತುಕೊಂಡು ಅದಕ್ಕೆ ಸಹಕಾರ ನೀಡಬೇಕು. ಮುನಿಸಿಪಾಲಿಟಿಯಲ್ಲಿ ಎಲ್ಲೆಲ್ಲಿ ನೀರು ಸರಬರಾಜು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೋ ಅಂಥ ಕಡೆ ಸರ್ಕಾರವೇ ಆ ಕೆಲಸವನ್ನು ವಹಿಸಿಕೊಂಡು ಮಾಡುವುದಕ್ಕೆ ತಿದ್ದುಪಡಿ ಮಾಡಿದ್ದೇವೆ. ಇದಕ್ಕಾಗಿ ಒಂದು ಕೋಟಿ ರೂಪಾಯಿ ಹಣವನ್ನು ಒದಗಿಸಿದ್ದೇವೆ. ಹೊಸ ಸರ್ಕಾರ ಬಂದಮೇಲೆ ಬಳ್ಳಾರಿಗೆ ಅಲ್ಲಿನ ನೀರಿನ ತೊಂದರೆಯನ್ನು ಗಮನದಲ್ಲಿಟ್ಟುಕೊಂಡು ೬ ಕೋಟಿ ೪೦ ಲಕ್ಷ ರೂಪಾಯಿ ಯೋಜನೆಯನ್ನು ತಯಾರು ಮಾಡಿದ್ದೇವೆ. ಸರ್ಕಾರ ಇದಕ್ಕೆ ಮನ್ನಣೆ ಕೊಡುತ್ತಿದೆ. ಗದಗ್-ಬೆಟಗೇರಿಗೆ ನೀರಿನ ಯೋಜನೆಯನ್ನು ಮಾಡಲು ಅವಕಾಶವಿದ್ದರೂ ಹಿಂದೆ ಮಾಡಿರಲಿಲ್ಲ. ಈಗ ಅಲ್ಲಿಗೂ ಕೂಡ ಯೋಜನೆ ಮಾಡಿ ಸಾಕಷ್ಟು ಹಣ ಕೂಡ ಖರ್ಚು ಮಾಡಿದ್ದೇವೆ. ಅದಕ್ಕೆ ಎಲ್.ಐ.ಸಿ.ಯವರು ಒಪ್ಪುತ್ತಿಲ್ಲ. ಒಂದು ಸಾವಿರ ಗ್ಯಾಲನ್ ನೀರಿಗೆ ೧೩ ರೂಪಾಯಿ ಬೀಳುತ್ತದೆ, ಆದ್ದರಿಂದ ಇದನ್ನು ಕೊಡುವ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ಗದಗ್-ಬೆಟಗೇರಿ ಜನ

ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ೭ ಕೋಟಿ ರೂಪಾಯಿನ ಯೋಜನೆ ಮಾಡಿದ್ದು ಇನ್ನೂ ಕೂಡ ಸರ್ಕಾರ ಒಪ್ಪುತ್ತಿದೆ. ಹೊಸನಗರ, ಸಾಗರ, ಭಾಲ್ಕಿಗೆ ಯೋಜನೆ ಮಾಡಿದ್ದೇವೆ. ಲಿಂಗಸುಗೂರಿಗೆ ಕೇಳಿದ್ದಾರೆ. ಚಾಮರಾಜನಗರಕ್ಕೆ ಕೂಡ ೧೯೫೬ರಲ್ಲಿ ಆದ ಸ್ಕೀಮನ್ನು ಮುಗಿಸಿ ಮೊನ್ನೆ ಮತ್ತೆ ೫೬ ಲಕ್ಷ ರೂಪಾಯಿನ ಸ್ಕೀಮನ್ನು ಮಾಡಿದ್ದೇವೆ. ಸರ್ಕಾರ ಇದರ ಕಡೆಗೂ ಹೆಚ್ಚಿನ ಗಮನವನ್ನು ಕೊಟ್ಟಿದೆ. ನಾವು ಮೆಥಾಡಿಕಲ್ ಆಗಿ ವಿಚಾರ ಮಾಡಿ ಯಾವ ರೀತಿ ಸಹಾಯ ಮಾಡಬಹುದು ಎಂಬುದನ್ನು ನೋಡಿ ಮಾಡಿದ್ದೇವೆ ಎಂಬುದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. ಇದೇ ರೀತಿಯಾಗಿ ಮುನಿಸಿಪಾಲಿಟಿಯವರು ಸ್ಕೀಂಗಳನ್ನು ಮಾಡಿದಾಗ ಅದಕ್ಕೆ ಜನ ಸಾಕಷ್ಟು ಪ್ರೋತ್ಸಾಹ ನೀಡುತ್ತಿಲ್ಲ, ಜನ ಇದನ್ನು ಒಪ್ಪಬೇಕು, ಪ್ರೋತ್ಸಾಹ ನೀಡಬೇಕು. ಪ್ರಾಪರ್ಟಿ ಟ್ಯಾಕ್ಸ್ ವಸೂಲು ಮಾಡುವಾಗ ಹೆಚ್ಚು ವಸೂಲು ಮಾಡಿ ಕಲೆಕ್ಷನ್ ಒಳ್ಳೆಯ ರೀತಿಯಲ್ಲಿ ಮಾಡಬೇಕೆಂದು ಸೂಚನೆ ಕೊಟ್ಟಿದ್ದೇವೆ. ಇನ್ನು ಕೊಳಚೆ ನಿರ್ಮೂಲನದ ಬಗ್ಗೆ ಹೇಳುವುದಾದರೆ ಕೊಳಚೆ ನಿರ್ಮೂಲನಾ ಮಂಡಲಿ ಪ್ರಾರಂಭವಾಗಿ ಅವರು ೧೯೭೬ ರಿಂದ ೮೦ರವರೆಗೆ ಕೇವಲ ೪೬ ಲಕ್ಷ ರೂಪಾಯಿನ ಯೋಜನೆ ಮಾಡಿದ್ದರು. ನಾನು ಮಂತ್ರಿಯಾದ ನಂತರ ಕೇಂದ್ರಕ್ಕೆ ಹೋಗಿ ಹುಡ್ಕೊ ಛೇರ್ಮನ್‌ರೊಡನೆ ಸಮಾಲೋಚನೆ ಮಾಡಿ ಮದ್ರಾಸಿನಲ್ಲಿ ಕ್ಲಿಯರೆನ್ಸಿಗಾಗಿ ೬೦ ಕೋಟಿ ರೂಪಾಯಿನ ಲೋನ್ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ, ಅದೇ ರೀತಿ ನಮ್ಮ ರಾಜ್ಯದಲ್ಲಿ ಏತಕ್ಕೆ ಆಗುವುದಿಲ್ಲ ಎಂಬ ಬಗ್ಗೆ ವಿಚಾರ ಮಾಡಿದೆವು. ೯೦ ಪರ್ಸೆಂಟ್ ಲೋನನ್ನು ನಿಮಗೆ ಕೊಡುತ್ತೇವೆ ಎಂದು ಅವರು ಹೇಳಿದಮೇಲೆ ಇವತ್ತು ೧೩ ಸಾವಿರ ಮನೆಗಳನ್ನು ಕಟ್ಟಿಸತಕ್ಕ ೫೩ ಯೋಜನೆಗಳನ್ನು ಮಾಡಿ ಈಗಾಗಲೇ ೬ ಕೋಟಿ ೩೨ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಕೊಟ್ಟಿದ್ದಾರೆ. ೧೦ ಕೋಟಿ ೪೧ ಲಕ್ಷ ರೂಪಾಯಿನ ಯೋಜನೆಯನ್ನು ನಾವು ಮಾಡಿ ಕಳುಹಿಸಿಕೊಟ್ಟಿದ್ದೇವೆ. ಇನ್ನೂ ಹೆಚ್ಚು ಸ್ಕೀಂ ಮಾಡುವುದಕ್ಕೆ ಆದೇಶ ಕೊಟ್ಟಿದ್ದೇವೆ. ಕೊಳಚೆ ನಿರ್ಮೂಲನಾ ಮಂಡಲಿಯ ಶಾಖೆಗಳನ್ನು ಮಾಡಿದ್ದೇ . ಬೆಳಗಾಂ ಡಿವಿಜನ್ ಆಫೀಸ್ ಮಾಡಿದ್ದೇವೆ. ಅದೇರೀತಿ ಹಾಸನ, ಮೈಸೂರುಗಳಲ್ಲೂ ಸಬ್‌ಡಿವಿಷನ್ ಆಫೀಸ್ ಮಾಡಿದ್ದೇವೆ. ಅಲ್ಲಿರತಕ್ಕ ಇಂಜಿನಿಯರುಗಳು ಸಿಟಿ ಮುನಿಸಿಪಾಲಿಟಿ ಮತ್ತು ನಗರ ಸಭೆಯಲ್ಲಿ ಹೋಗಿ, ಅಲ್ಲಿ ಕುಳಿತು ಯೋಜನೆಗಳನ್ನು ಮಾಡಿ ಕ್ಲಿಯರೆನ್ಸ್ ಜೊತೆಗೆ ಇಂಪ್ರೂವ್‌ಮೆಂಟ್ ಸ್ಕೀಮನ್ನೂ ಕೂಡ ಮಾಡಬೇಕೆಂದು ಮಾಡಿದ್ದೇವೆ. ಹುಬ್ಬಳ್ಳಿ ಧಾರವಾಡ ಮಧ್ಯೆ ಇರತಕ್ಕ ೧೪ ತಾಲ್ಲೂಕುಗಳಿಗೆ ನಾವು ಬಂದನಂತರ ೨೦ ಲಕ್ಷ ರೂಪಾಯಿಗಳನ್ನು ಗ್ರಾಂಟ್ ಆಗಿ ಕೊಟ್ಟಿದ್ದೇವೆ. ೬೨ ಲಕ್ಷ ರೂಪಾಯಿಗಳನ್ನು ಕೊಳಚೆ ಅಭಿವೃದ್ಧಿಗಾಗಿ ಕೊಟ್ಟಿದ್ದೇವೆ. ಮಲಪ್ರಭಾ ಯೋಜನೆಗೆ ೧೯೭೦ರಲ್ಲಿ ಪ್ರಾರಂಭವಾಗಿದ್ದು ಅದಕ್ಕೆ ೩ ಕೋಟಿ ೭೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ೮೦-೮೧ರಲ್ಲಿ ನಾಲ್ಕು ಕೋಟಿ ರೂಪಾಯಿಗಳಲ್ಲಿ ಖರ್ಚು ಮಾಡಿದ್ದೇವೆ. ಇನ್ನು ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡಿದರೆ ಹುಬ್ಬಳ್ಳಿ, ಧಾರವಾಡ ಯೋಜನೆ ಪೂರ್ಣವಾದಂತಾಗುತ್ತದೆ. ಸ್ಲಂಗೆ ಸಂಬಂಧಪಟ್ಟಂತೆ ಇರತಕ್ಕ ಆಕ್ಟಿಗೆ ಕೂಡ ನಾವು ತಿದ್ದುಪಡಿ ತಂದು ಪೋಲೀಸರಿಗೆ ಹೆಚ್ಚಿನ ಅಧಿಕಾರ ನೀಡಿದ್ದೇವೆ. ಇವತ್ತು ೧೬೩೨ ಗುಡಿಸಲುಗಳನ್ನು ಕಿತ್ತುಹಾಕಿದ್ದಾರೆ. ನಾವು ಈ ದಿಸೆಯಲ್ಲಿ ಕಾರ್ಯಕ್ರಮ ಕೈಗೊಳ್ಳುವಾಗ ಇದು ಎಷ್ಟು ಸೂಕ್ಷ್ಮವಾದ ಸಮಸ್ಯೆ, ಮಾನವೀಯವಾದ ಸಮಸ್ಯೆ ಎಂಬುದನ್ನು ವಿಶೇಷವಾಗಿ ಆಲೋಚನೆ ಮಾಡಬೇಕು. ಈ ಬಗ್ಗೆ ಗುಪ್ತವಾಗಿ ಸಮಾಲೋಚನೆ ಮಾಡಿ ಸೀಕ್ರೆಟ್ ಪ್ಲಾನ್ ಮಾಡಿ ಎಲ್ಲೆಲ್ಲಿ ಯಾವರೀತಿ ಕೆಲಸ ಮಾಡಬೇಕು ಎಂಬುದನ್ನು ನೋಡಿ ಮಾಡುವುದಕ್ಕೆ ಹೊರಟಿದ್ದೇವೆ.

ನಗರಸಭೆ ಮತ್ತು ಮುನಿಸಿಪಾಲಿಟಿಗಳಲ್ಲಿ ಶೇಕಡ ೧೮ ರಷ್ಟು ಹಣವನ್ನು ಹರಿಜನ-ಗಿರಿಜನರಿಗೆ ಖರ್ಚು ಮಾಡುತ್ತಿಲ್ಲವೆಂದು ಸಾಕಷ್ಟು ಜನರು ಪ್ರಸ್ತಾಪ ಮಾಡಿದ್ದಾರೆ. ಈ ದೃಷ್ಟಿಯಿಂದಲೇ ಸರ್ಕಾರ ಅಲ್ಲಿ ಸಾಮಾಜಿಕ ನ್ಯಾಯ ಸಮಿತಿಗಳನ್ನು ರಚನೆ ಮಾಡಿದೆ. ನಗರಸಭೆ ಮತ್ತು ಮುನಿಸಿಪಾಲಿಟಿಗಳಲ್ಲಿ ಹೇಗೆ ಸ್ಟ್ಯಾಂಡಿಂಗ್ ಕಮಿಟಿ ಇರುತ್ತವೆ ಹಾಗೆ ಸಾಮಾಜಿಕ ನ್ಯಾಯ ಸಮಿತಿಗಳಿದ್ದು, ಅವುಗಳು ಹರಿಜನ-ಗಿರಿಜನರ ಕಲ್ಯಾಣಕ್ಕಾಗಿ ಮಾಡುವ ಖರ್ಚಿನ ಬಗ್ಗೆ ಗಮನ ಹರಿಸುತ್ತದೆ. ಬೆಂಗಳೂರು ನಗರಸಭೆಯಲ್ಲೂ ಸಹ ಹೆಚ್ಚು ಹಣ ಖರ್ಚಾಗುತ್ತಿಲ್ಲ. ಈ ವರ್ಷ ಅದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಬೆಳಗಾವಿ, ಮಂಗಳೂರು ಮತ್ತು ಹುಬ್ಬಳ್ಳಿ ನಗರಸಭೆಗಳಲ್ಲಿ ಸಾಕಷ್ಟು ಕೆಲಸ ಮಾಡಿದ್ದಾರೆ. ಇದು ಆ ಭಾಗದ ಶಾಸಕರಿಗೂ ಗೊತ್ತಿದೆ.

ಪೌರ ಕಾರ್ಮಿಕರ ಬಗ್ಗೆ ಕೆಲವು ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಪೌರಕಾರ್ಮಿಕರಿಗೆ ಸಂಬಳ ಬಿಟ್ಟು, ಸಾಬೂನು, ಬಟ್ಟೆ ಮುಂತಾದ ಸೌಕರ್ಯಗಳನ್ನು ಕೊಡುವುದಕ್ಕಾಗಿ ಹದಿನೇಳು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇನೆ. ಮತ್ತು ಅವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಿದ್ದೇವೆ. ಪೌರ ಕಾರ್ಮಿಕರಿಗೆ ವಿಶ್ರಾಂತಿ ವೇತನವನ್ನೂ ನೀಡುತ್ತಿದ್ದೇವೆ. ಬಳ್ಳಾರಿಯ ಬಹಳಷ್ಟು ಪೌರ ಕಾರ್ಮಿಕರಿಗೆ ವಿಶ್ರಾಂತಿವೇತನ ಸಿಕ್ಕಿಲ್ಲವೆಂದು ಮಾನ್ಯ ಭಾಸ್ಕರ ನಾಯಿಡು ಅವರು ಹೇಳಿದರು. ೧೯೭೨ ರಿಂದ ಪೌರ ಕಾರ್ಮಿಕರಿಗೆ ವಿಶ್ರಾಂತಿ ವೇತನ ಕೊಡಬೇಕೆಂದು ನಿರ್ಣಯ ತೆಗೆದುಕೊಂಡರೂ ಅಲ್ಲಿಂದ ೧೯೭೭ ರ ವರೆಗೆ ಒಂದು ಕಾಸನ್ನೂ ಅದಕ್ಕಾಗಿ ಇಡಲಿಲ್ಲ. ೧೯೭೭ ಮತ್ತು ೧೯೮೦ರ ಅವಧಿಯಲ್ಲಿ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರು. ಆದರೆ, ನಾವು ೧೯೮೦-೮೧ನೇ ಸಾಲಿಗೆ ಸುಮಾರು ಎರಡು ಕೋಟಿ ಐದು ಲಕ್ಷ ರೂಪಾಯಿಗಳನ್ನು ಒದಗಿಸಿದ್ದು ಅದರಲ್ಲಿ ಈಗಾಗಲೇ ಎಪ್ಪತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೭೭ ರಿಂದ ೧೯೮೦ ರ ವರೆಗೆ ಕೇವಲ ೧೨೬ ಪ್ರಕರಣ ಇತ್ಯರ್ಥ ಮಾಡಿದ್ದರೆ ಈ ಒಂದು ವರ್ಷದಲ್ಲಿ ೧೧೩೬ ಪ್ರಕರಣಗಳನ್ನು ಇತ್ಯರ್ಥ ಮಾಡಿದ್ದೇವೆ. ಈಗ ನಾವು ನಿಯಮಗಳನ್ನು ಸುಲಭೀಕರಣ ಮಾಡಿದ್ದೇವೆ. ಎಲ್ಲಾ ವಿಶ್ರಾಂತಿ ವೇತನ ಪ್ರಕರಣಗಳೂ ಕಮಿಷನರ್ ಅವರ ಮಟ್ಟಕ್ಕೆ ಬರಬಾರದೆಂದು ಅಸಿಸ್ಟೆಂಟ್ ಕಂಟ್ರೋಲರ್‌ಗೆ ಅಧಿಕಾರ ಕೊಟ್ಟಿದ್ದೇವೆ. ಅಂತೂ ಆದಷ್ಟು ಬೇಗ ಅವರಿಗೆ ವಿಶ್ರಾಂತಿ ವೇತನ ಸಿಗುವ ರೀತಿಯಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಮಾನ್ಯ ಸಾಲಪ್ಪನವರು ಮಾತನಾಡುತ್ತಾ ಈ ದಿಸೆಯಲ್ಲಿ ಇನ್ನೂ ಹೆಚ್ಚಿನ ಕೆಲಸವಾಗಬೇಕೆಂದು ಹೇಳಿದರು. ಅವರು ಪೌರಕಾರ್ಮಿಕರ ಒಂದು ಯೂನಿಯನ್‌ನ ಅಧ್ಯಕ್ಷರಾಗಿದ್ದಾರೆ. ಹಾಗೆಯೇ ಶ್ರೀ ಉಪಾಧ್ಯಾಯ ಎನ್ನುವವರೂ ಒಂದು ಯೂನಿಯನ್‌ನ ಅಧ್ಯಕ್ಷರಾಗಿದ್ದಾರೆ. ಇವರೊಂದಿಗೆ ನಾನಂ ಮೂರು-ನಾಲ್ಕು ಸಲ ನನ್ನ ಚೆಂಬರ್‌ನಲ್ಲಿ ಸಮಾಲೋಚನೆ ಮಾಡಿದ್ದೇನೆ. ಮತ್ತು ಇವರ ಬೇಡಿಕೆಗಳಿಗೆ ನಾನು ಸಾಕಷ್ಟು ಒಪ್ಪಿದ್ದೇನೆ. ಅಲ್ಲಿ ಹರಿಜನ-ಗಿರಿಜನ ಸಂಘವೊಂದಿದೆ. ಅದಕ್ಕೂ ನಗರಸಭೆ ವತಿಯಿಂದ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದೇವೆ. ಇಷ್ಟೆಲ್ಲಾ ಮಾಡಿದರೂ ಕೆಲವು ಸಮಸ್ಯೆಗಳಿರಬಹ-ದು. ಎಲ್ಲವನ್ನೂ ಒಂದೇ ಸಮಯದಲ್ಲಿ ಪರಿಹರಿಸುವುದಕ್ಕಾಗುವುದಿಲ್ಲ. ಆದರೂ ಸರ್ಕಾರ ವಿಶೇಷವಾಗಿ ಹರಿಜನ-ಗಿರಿಜನರಿಗೆ ಮತ್ತು ಪೌರ ಕಾರ್ಮಿಕರಿಗೆ ಏನೇನು ಅನುಕೂಲಗಳನ್ನು – ಬರೀ ಮಾತಿನಲ್ಲಿ ಹೇಳದೆ ಕೃತಿಯಲ್ಲಿ ಸಾಕಷ್ಟು ಮಾಡಿದೆ ಎಂದು ಹೇಳುತ್ತೇನೆ. ಜೊತೆಗೆ ಒಂದು ಡೈರೆಕ್ಟೋರೇಟ್ ಆಗಬೇಕೆಂದು ಕಳೆದ ಅಧಿವೇಶನದಲ್ಲೇ ಹೇಳಲಾಗಿತ್ತು. ಇದರ ಬಗ್ಗೆ ಮಂತ್ರಿಮಂಡಲದ ಉಪ ಸಮಿತಿಯೊಂದನ್ನು ರಚನೆ ಮಾಡಲಾಗಿದ್ದು, ಡೈರೆಕ್ಟೊರೇಟನ್ನು ಯಾವ ಆಧಾರದ ಮೇಲೆ ಮಾಡಬೇಕೆನ್ನುವ ಬಗ್ಗೆ ಅದು ಮೂರು-ನಾಲ್ಕು ಸಭೆಗಳನ್ನು ನಡೆಸಿದೆ. ಇನ್ನು, ಬೆಂಗಳೂರು ನಗರಕ್ಕೊಂದು ಮೆಟ್ರೋಪಾಲ್ ಅಥಾರಿಟಿಯನ್ನು ಮಾಡಬೇಕೆಂದಿದ್ದೇವೆ. ನಗರದ ಜನತೆಗೆ ಕುಡಿಯುವ ನೀರು ಸರಿಯಾಗಿ ಸಿಗುತ್ತಿಲ್ಲ ; ನಗರದಲ್ಲಿ ಬಡಾವಣೆಗಳು ಹೆಚ್ಚಾಗುತ್ತಿವೆ ; ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ. ಇಂಥಾ ಸಂದರ್ಭದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ನಗರ ಸಭೆ ಮತ್ತು ಜಲಮಂಡಲಿ ಹಾಗೂ ಕೊಳಚೆ ನಿರ್ಮೂಲನ ಮಂಡಲಿ ಇವುಗಳಲ್ಲಿ ಹೊಂದಾಣಿಕೆ ಇಲ್ಲವೆಂಬ ಮಾತು ಇದೆ. ಆದಕ್ಕಾಗಿ ಬೆಂಗಳೂರು ನಗರಕ್ಕೊಂದು ಮೆಟ್ರೋಪಾಲ್ ಅಥಾರಿಟಿ ಮಾಡುವುದಕ್ಕಾಗಿ ಡ್ರಾಫ್ಟಿಂಗ್ ಅಧಿಕಾರಿಯನ್ನಾಗಿ ಅಡಿಶನಲ್ ಕಾನೂನು ಕಾರ್ಯದರ್ಶಿಯವರನ್ನು ನೇಮಕ ಮಾಡಲಾಗಿದೆ. ಅವರು ಮೊನ್ನೆ ಮದರಾಸಿಗೆ ಹೋಗಿ ಬಂದಿದ್ದಾರೆ. ಮತ್ತೆ ಕಲ್ಕತ್ತ ಮುಂಬೈಗೆ ಹೋಗಿ ಬಂದನಂತರ ಅಂತಿಮವಾದ ವರದಿಯನ್ನು ಅವರು ಕೊಡುತ್ತಾರೆ. ನಂತರ ಬೆಂಗಳೂರು ನಗರಕ್ಕೊಂದು ಮೆಟ್ರೊಪಾಲ್ ಅಥಾರಿಟಿಯನ್ನು ಮಾಡುತ್ತೇವೆ.

ಕರ್ನಾಟಕದಲ್ಲಿ ಖಾಲಿ ಜಮೀನುಗಳಲ್ಲಿದ್ದ ಮರಗಳನ್ನು ಕಡಿದಿದ್ದರಿಂದಾಗಿ ಇಂದು ಸರಿಯಾಗಿ ಮಳೆ ಬರದಂತಾಗಿದೆ. ನಗರದ ಉದ್ಯಾನವನಗಳನ್ನೂ ಸಹ ನಿವೇಶನಗಳನ್ನಾಗಿ ಮಾಡಿ ಕೊಟ್ಟಿದ್ದಾರೆ, ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ತಿದ್ದುಪಡಿ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ; ಖಾಲಿ ಜಾಗ ಮತ್ತು ಉದ್ಯಾನವನಗಳನ್ನು ನಿವೇಶನಗಳನ್ನಾಗಿ ಪರಿವರ್ತಿಸುವುದನ್ನು ಗಮನದಲ್ಲಿಟ್ಟುಕೊಂಡು ನಿರ್ಬಂಧವನ್ನು ವಿಧಿಸಲಿದ್ದೇವೆ.

ಇನ್ನು ನಗರ ಸಭೆಯಲ್ಲಿ ತ್ವರಿತವಾಗಿ ಕೆಲಸಕಾರ್ಯಗಳಾಗಬೇಕಾದರೆ, ಎಲ್ಲವೂ ಇಲಾಖಾ ಕಾರ್ಯದರ್ಶಿಯವರ ಮಟ್ಟಕ್ಕೆ ಬರಬಾರದು ಅದು ನಗರಸಭೆಯ ಕಮೀಷನರ್ ಮತ್ತು ಡಿ. ಸಿ. ಗೆ ಹೋಗಬೇಕೆಂಬ

ಉದ್ದೇಶದಿಂದ ಹೆಚ್ಚು ಅಧಿಕಾರಗಳನ್ನು ಡೆಲಿಗೇಟ್ ಮಾಡಬೇಕೆಂದು ತಿದ್ದುಪಡಿಯೊಂದನ್ನು ಸದನದಲ್ಲಿ ಮಂಡಿಸಿದ್ದೇವೆ. ಅದು ತಮ್ಮ ಒಪ್ಪಿಗೆಗೆ ಬರಬಹುದು. ಕಳೆದ ಅಧಿವೇಶನದಲ್ಲಿ ಅದನ್ನು ಮಂಡಿಸಲಾಗಿತ್ತು, ಆದರೆ ಚರ್ಚೆಗೆ ಅದು ಬರಲಿಲ್ಲ. ಸೆಕ್ಷನ್ ೩೨೧ ಮತ್ತು ೩೪೨ ಅನ್ನು ತಿದ್ದುಪಡಿ ಮಾಡುತ್ತಿದ್ದೇವೆ,

ಕಳೆದ ಸಲ ಡಾ|| ಅಂಬೇಡ್ಕರ್ ಅವರ ಪ್ರತಿಮೆಯನ್ನು ವಿಧಾನ ಸೌಧದ ಮುಂಭಾಗದಲ್ಲಿ ಪ್ರತಿಷ್ಠಾಪನೆ ಮಾಡಲಾಗುವುದೆಂದು ಹೇಳಿದ್ದೆವು. ಈ ದೇಶದಲೆಲ್ಲೂ ಇಲ್ಲದ – ಅಷ್ಟೇಕೆ ಪಾರ್ಲಿಮೆಂಟ್ ಭವನದ ಬಳಿಯೂ ಇಲ್ಲದಷ್ಟು ಸುಂದರವಾದ ಹನ್ನೆರಡೂವರೆ ಅಡಿ ಎತ್ತರದ ಡಾ|| ಅಂಬೇಡ್ಕರ್ ಅವರ ಪ್ರತಿಮೆಯನ್ನು ವಿಧಾನ ಸೌಧದ ಮುಂಭಾಗದಲ್ಲಿ ಮುಂದಿನ ತಿಂಗಳು ಅನಾವರಣ ಮಾಡಬೇಕೆಂಬ ಉದ್ದೇಶವಿದೆ. ಸರ್ಕಾರ ಈ ಒಂದು ಕಾರ್ಯವನ್ನು ಶ್ರದ್ಧೆಯಿಂದ ಈಡೇರಿಸಿದೆ ಎಂದು ತಿಳಿಸಲು ನನಗೆ ಅತ್ಯಂತ ಹೆಮ್ಮೆಯೆನಿಸುತ್ತದೆ.

ಇನ್ನು ಡೆವಲಪ್ಮೆಂಟ್ ಗ್ರಾಂಟ್ ಬಗ್ಗೆ ಕೆಲವು ಸದಸ್ಯರು ಮಾತನಾಡಿದ್ದಾರೆ. ಆಕ್ಟ್ರಾಯ್ ರದ್ದು ಮಾಡಿದ ಮೇಲೆ ಮುನಿಸಿಪಾಲಿಟಿ ಮತ್ತು ನಗರ ಸಭೆಗಳಿಗೆ ಬಹಳ ತೊಂದರೆಯಾಗುತ್ತಿರುವುದನ್ನು ಮನಗಂಡು ಅದಕ್ಕೆ ಪರಿಹಾರವಾಗಿ ಡೆವಲಪ್ಮೆಂಟ್ ಗ್ರಾಂಟ್ ಸಿಗಬೇಕೆನ್ನುವ ಭಾವನೆ ಇದೆ. ಹೀಗೆ ಪರಿಹಾರವಾಗಿ ಬೆಂಗಳೂರು ನಗರಸಭೆಗೆ ಕೊಡಬೇಕಾದ ಹಣ ಸುಮಾರು ೩೦ ಕೋಟಿ ರೂಪಾಯಿಗಳಾಗುತ್ತದೆ. ಇದರಲ್ಲಿ ೨೪ ಕೋಟಿ ರೂಪಾಯಿಗಳನ್ನು ಈಗಾಗಲೇ ಕೊಡಲಾಗಿದೆ. ನಗರಸಭೆಯಿಂದ ಫೈನಾನ್ಸ್ ಆಡಿಟ್ ರಿಪೋರ್ಟ್ ಇನ್ನೂ ಬರಬೇಕಾಗಿದೆ. ಅದನ್ನು ನಾವು ಕಾಯುತ್ತಿದ್ದೇವೆ. ಅದು ಬಂದಕೂಡಲೇ ಬಾಕಿಯನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಜನಸಂಖ್ಯೆ ಮತ್ತು ಸಮಸ್ಯೆಗಳನ್ನು ಆಧಾರವಾಗಿಟ್ಟುಕೊಂಡು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಣ ನೀಡಲು ಪ್ರಯತ್ನ ಮಾಡಿದ್ದೇವೆ. ಈಗ ವೃತ್ತಿ ತೆರಿಗೆಯಿಂದ ಸುಮಾರು ಎರಡು ಕೋಟಿ ಮತ್ತು ಪ್ರವೇಶ ತೆರಿಗೆಯಿಂದ ಒಂದೂವರೆ ಕೋಟಿ ರೂಪಾಯಿಗಳ ಆದಾಯ ಬರುತ್ತಿದೆ.

ಗೃಹನಿರ್ಮಾಣ ಮಂಡಲಿ ಕುರಿತು ಕೆಲವರು ಹೇಳಿದ್ದಾರೆ. ಕೆಲವು ವರ್ಷಗಳ ಕಾಲ ಶ್ರೀ ವೆಂಕಟರಮಣ ಅವರು ಅದರ ಅಧ್ಯಕ್ಷರಾಗಿದ್ದರು. ಆ ಕಾಲದಲ್ಲಿ ಅದು ಪ್ರಾರಂಭವಾಗಿತ್ತು. ಈಗ ಅದರ ಕಾರ್ಯಚಟುವಟಿಕೆಗಳು ಸೀಮಿತವಾಗಿರುವುದನ್ನು ನಾನು ಒಪ್ಪುತ್ತೇನೆ. ಗೃಹನಿರ್ಮಾಣ ಮಂಡಲಿ ಮನೆಗಳನ್ನು ಕಟ್ಟಕೂಡದೆನ್ನುವ ನಿಷೇಧವಿದ್ದುದನ್ನು ಹೊಸ ಸರ್ಕಾರ ತೆಗೆದು ಹಾಕಿದ ಮೇಲೆ ಕೇವಲ ಒಂದು ವರ್ಷದಲ್ಲಿ ಅದರ ಇಪ್ಪತ್ತು ಯೋಜನೆಗಳಿಗೆ ಮಂಜೂರಾತಿಸಿಕ್ಕಿದೆ.

೪–೩೦ ಪಿ.ಎಂ.

೧೧ ಕೋಟಿ ೬೪ ಲಕ್ಷ ರೂಪಾಯಿಗಳ ೨೦ ಯೋಜನೆಗಳಿಗೆ ನಾವು ಈಗಾಗಲೇ ಮಂಜೂರಾತಿಯನ್ನು ಪಡೆದಿದ್ದೇವೆ. ೩೫ ಕೋಟಿ ೭೬ ಲಕ್ಷ ರೂಪಾಯಿಗಳ ೪೨ ಯೋಜನೆಗಳನ್ನು ಮಂಜೂರಾತಿಗಾಗಿ ಕಳುಹಿಸಿದ್ದೇವೆ. ೧೩೬ ಜಾಗಗಳನ್ನು ಸರ್ವೆ ಕೂಡ ಮಾಡಿಸಿದ್ದೇವೆ. ೧೯೫೬ ರಿಂದ ಒಂದು ಕೋಟಿ ಒಂಬತ್ತು ಲಕ್ಷರೂಪಾಯಿ ಕ್ಯಾಪಿಟಲ್ ಲೋನ್ ಬರಬೇಕಾಗಿತ್ತು, ಇನ್ನೂ ಕೂಡ ವಸೂಲಾಗಿರಲಿಲ್ಲ. ಈ ವಿಚಾರವನ್ನು ಸಾಕಷ್ಟು ಪ್ರಯತ್ನ ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೇ, ಇನ್ನು ನಮಗೆ ಪಟ್ಟಣ ಪ್ರದೇಶಗಳಲ್ಲಿ ಸುಮಾರು ೪೩ ಲಕ್ಷ ಮನೆಗಳ ಅವಶ್ಯಕತೆ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೫೧ ಲಕ್ಷ ಮನೆಗಳ ಅವಶ್ಯಕತೆ ಇದೆ. ೧೯೮೧ ರಿಂದ ೧೯೯೧ರ ವರೆಗೆ ಅಂದರೆ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಸುಮಾರು ೯೪ಲಕ್ಷ ಮನೆಗಳನ್ನು ನಿರ್ಮಾಣ ಮಾಡಬೇಕೆಂದು ಸರ್ವೆ ಮಾಡಿಸಿದ್ದೇವೆ. ಇ.ಡಬ್ಲ್ಯು.ಎಸ್. ೭೫ ಪರ್ಸೆಂಟ್, ಎಲ್.ಐ.ಜಿ. ಯವರಿಗೆ ೧೫ ಪರ್ಸೆಂಟ್, ಇತರೆಯವರಿಗೆ ೧೦ ಪರ್ಸೆಂಟ್ ಬರುತ್ತದೆ ಇದಕ್ಕಾಗಿ ೪ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೭.೪೩ ಪರ್ಸೆಂಟ್, ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೨೪.೪೮ ಪರ್ಸೆಂಟ್ ಇದೆ. ಆಲೋಕೇಷನ್ ಕೂಡ ಆಗಿದೆ. ೯೪ ಲಕ್ಷ ಮನೆಗಳಿಗೆ ಸುಮಾರು ೧೧೭೧ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತವೆ. ಹುಡ್ಕೋ ಯೋಜನೆಯಲ್ಲಿ ೬ನೇ ಪಂಚವಾರ್ಷಿಕ ಯೋಜನೆ ಒಳಗೆ ಹನ್ನೆರಡೂವರೆ ಲಕ್ಷ ಮನೆಗಳನ್ನು ಕಟ್ಟಿಸುವ ವಿಚಾರವನ್ನು ಕೂಡ ಇಟ್ಟಿದ್ದೇವೆ. ಅಧ್ಯಕ್ಷರೇ, ಇವತ್ತು ರಷ್ಯಾ ದೇಶ ತನ್ನ ಒಟ್ಟು ವರಮಾನದಲ್ಲಿ ಮೂರು ಪರ್ಸೆಂಟ್ ಹಣವನ್ನು ಮನೆಗಳ ನಿರ್ಮಾಣಕ್ಕಾಗಿ ಇಟ್ಟಿದೆ. ಅಮೇರಿಕಾ ಕೂಡ ತನ್ನ ಒಟ್ಟು ವರಮಾನದಲ್ಲಿ ೯ ಪರ್ಸೆಂಟ್ ಹಣವನ್ನು ಮನೆಗಳ ನಿರ್ಮಾಣಕ್ಕಾಗಿ ಇಟ್ಟಿದೆ.

ಇವತ್ತು ಇಂಡಿಯಾ,ತನ್ನ ಒಟ್ಟು ವರಮಾನದಲ್ಲಿ ೪೫–೫೦ ಪರ್ಸೆಂಟ್ ಹಣವನ್ನು ಖರ್ಚು ಮಾಡುತ್ತಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಈ ಕೆಲಸವನ್ನು ಚುರುಕುಗೊಳಿಸಬೇಕಾಗಿದೆ. ಸಾಕಷ್ಟು ಸಿಬ್ಬಂದಿಯನ್ನು ಒದಗಿಸುವ ಬಗ್ಗೆಯೂ ಗಮನ ಕೊಡುತ್ತಿದ್ದೇವೆ. ಕೊಳಚೆ ನಿರ್ಮೂಲನ ಮಂಡಲಿಗಳು, ಗೃಹ ನಿರ್ಮಾಣ ಮಂಡಲಿಗಳ ಕೆಲಸ ಕಾರ್ಯಗಳು ಸ್ಥಗಿತವಾಗಿವೆಯೆಂದು ಕೆಲವು ಸದಸ್ಯರು ಹೇಳಿದರು. ಆ ರೀತಿ ಯಾವ ಮಂಡಲಿಗಳ ಕೆಲಸಗಳೂ ನಿಂತಿಲ್ಲ. ಪಿ.ಸಿ. ಸೇಥಿಯವರನ್ನು ಕರೆಸಿದ್ದೇವೆ. ಭೀಷ್ಮ ನಾರಾಯಣ ಸಿಷ್ನ ಅವರನ್ನು ಕರೆಸಿದ್ದೇವೆ. ಹುಡ್ಕೋ ಛೇರ್ಮನ್‌ರವರನ್ನು ಮೂರು ನಾಲ್ಕು ಸಾರಿ ಕರೆಸಿ ಮಾತನಾಡಿದ್ದೇವೆ. ನಮ್ಮ ಕರ್ನಾಟಕಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಸಮಾಲೋಚನೆ ಮಾಡಿದ್ದೇವೆ. ನಮ್ಮ ಎಲ್ಲ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಪ್ರಸ್ತಾಪ ಮಾಡಿದ್ದೇವೆ. ಇವತ್ತು ರಾಜ್ಯದಲ್ಲಿ ೧೧–೩೨ ಸಾವಿರ ನಿವೇಶನರಹಿತ ಜನ ಇದ್ದಾರೆ. ಇದರಲ್ಲಿ ಈಗಾಗಲೇ ೯ ಲಕ್ಷಕ್ಕಿಂತ ಮೇಲೆ ನಿವೇಶನ ಕೊಟ್ಟಿದ್ದೇವೆ. ಭೂ ಸ್ವಾಧೀನ ಮಾಡಿದಂತೆ ಕೇಸುಗಳಲ್ಲಿ ತಡೆಯಾಜ್ಞೆ ಬಂದಿದ್ದು ಸ್ವಲ್ಪ ತಡವಾಗಿದೆ, ಹೋದವರ್ಷ ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿಯೂ ಕೂಡ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಈ ಕೇಸಿಗೆ ಸಂಬಂಧಪಟ್ಟಂತೆ ಸುಮಾರು ೯೭ ಲಕ್ಷ ರೂಪಾಯಿಗಳು ಲ್ಯಾಪ್ಸ್ ಆಗಿದೆ. ಜಿಲ್ಲಾಧಿಕಾರಿಗಳ ಸಮ್ಮೇಳನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿ ಇದು ೨೦ ಅಂಶಗಳ ಕಾರ್ಯಕ್ರಮ ಬಹಳ ಯಶಸ್ವಿಯಾಗಬೇಕಾಗಿದೆಯೆಂದು ಆದೇಶ ಕೊಟ್ಟಿದ್ದೇವೆ. ಇವತ್ತು ಜನತಾ ಮನೆಗಳಾಗಲಿ, ಭಾಗ್ಯಮಂದಿರವಾಗಲೀ ಕೆಲಸ ಚುರುಕಾಗಿ ನಡೆಯಬೇಕಾಗಿದೆ. ಹಾಲಿ ಕಟ್ಟಿಸಿರುವ ಮನೆಗಳ ಪೈಕಿ ೬೩,೦೦೦ ಮನೆಗಳು ಇನ್ನೂ ಪೂರ್ಣವಾಗಿಲ್ಲ. ೧೯೮೦–೮೧ರಲ್ಲಿ ೫೦ ಸಾವಿರ ಮನೆಗಳನ್ನು ಕಟ್ಟಿದ್ದೇವೆ. ಪೂರ್ಣವಾಗಿ ದುಡ್ಡು ಕೊಟ್ಟಿದ್ದೇವೆ. ಹುಡ್ಕೋ ಯೋಜನೆಯಲ್ಲಿ ಕಟ್ಟಿರತಕ್ಕ ಮನೆಗಳಿಗೆ ಸಬ್ಸಿಡಿ ಕೊಟ್ಟಿದ್ದೇವೆ. ಅಪೂರ್ಣವಾಗಿರತಕ್ಕ ಮನೆಗಳನ್ನು ಮುಗಿಸಬೇಕೆಂದು ಡೈರೆಕ್ಷನ್ ಕೊಟ್ಟಿದ್ದೇವೆ. ಈ ವರ್ಷ ೫೦ ಸಾವಿರ ಮನೆಗಳನ್ನು ಕಟ್ಟಿದ್ದೇವೆ. ಹರಿಜನ ಗಿರಿಜನರಿಗೆ ಸೇರಿದ ೧೬,೦೦೦ ಮನೆಗಳಿಗೆ ೧೪ ಪರ್ಸೆಂಟ್ ಬಡ್ಡಿಗೆ ಬದಲಾಗಿ ೪ ಪರ್ಸೆಂಟ್ ಬಡ್ಡಿ ಮೇಲೆ ಸಾಲ ಕೊಡುವುದಕ್ಕೆ ಕೆಲವು ಬ್ಯಾಂಕುಗಳು ಒಪ್ಪಿಗೆ ನೀಡಿವೆ. ರಿಸರ್ವ್ ಬ್ಯಾಂಕಿನವರು ಮನ್ನಣೆ ಕೊಡುತ್ತಿದ್ದಾರೆ. ಹರಿಜನ ಗಿರಿಜನರಿಗಾಗಲೀ, ಅಲ್ಪಸಂಖ್ಯಾತರಿಗಾಗಲೀ ಒಂದೊಂದಾಗಿ ಅವರಿಗೆ ಸವಲತ್ತುಗಳನ್ನು ಕಲ್ಪಿಸಿಕೊಡುವುದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ.

ಇವತ್ತು ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಆಫೀಸರ್ಸ್ ಇದ್ದಾರೆ ಡೆಪ್ಯೂಟಿ ಡೈರೆಕ್ಟರ್ ಇದ್ದಾರೆ. ಟ್ರಾಫಿಕ್ ಪ್ರಾಬ್ಲಂ ಏನಿದೆ ಅದನ್ನು ಕಡಿಮೆ ಮಾಡುವ ದೃಷ್ಟಿಯಿಂದ ಕೆಲವು ಯೋಜನೆಗಳನ್ನು ಪ್ರಾರಂಭ ಮಾಡಿದ್ದೇವೆ. ನಗರದ ೫ ಭಾಗಗಳಲ್ಲಿ ರೈಲ್ವೆ ಸಬ್‌ವೇ ಬ್ರಿಡ್ಜ್‌ಗಳನ್ನು ಮಾಡಬೇಕೆಂದು ರೈಲ್ವೆ ಅಥಾರಿಟಿಯವರಿಗೆ ಕಳುಹಿಸಿದ್ದೇವೆ. ಮದ್ರಾಸಿನಲ್ಲಿರುವಂತೆ ಮೆಟ್ರೋ ಪಾಲಿಟನ್ ಟ್ರಾನ್ಸ್‌ಪೋರ್ಟ್ ಬ್ರಿಡ್ಜ್ ಮಾಡಬೇಕೆಂದು ಸರ್ವೆ ಮಾಡಿಸಿದ್ದೇವೆ. ಮ್ಯಾಪ್ ಆಗಿದೆ. ಈ ವಿಚಾರದಲ್ಲಿ ಕೇಂದ್ರದೊಡನೆ ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದ್ದಾರೆ. ನಾವು ಕೂಡ ತಿವಾರಿಯವರ ಜೊತೆಯಲ್ಲಿ ಮಾತನಾಡಿದ್ದೇವೆ. ಸೆಂಟ್ರಲ್ ಪ್ಲಾನಿಂಗ್ ಬೋರ್ಡ್‌ನವರು ಕೂಡ ಪರ್ಮಿಷನ್ ಕೊಡುವಂತ ಹಂತದಲ್ಲಿದೆ. ಬೆಂಗಳೂರಿನಲ್ಲಿ ನಡೆಯುವಂತ ಕೆಲವು ಯೋಜನೆಗಳಿಗೆ ಮಾನ್ಯ ಸದಸ್ಯರು ಸಾಕಷ್ಟು ದುಡ್ಡು ಖರ್ಚು ಮಾಡಿಲ್ಲವೆಂದು ಹೇಳಿದರು. ತಮಗೆಲ್ಲಾ ಗೊತ್ತಿರುವಂತೆ ಸುಭಾಷ್ ನಗರದಲ್ಲಿರುವಂತ ಓವರ್ ಬ್ರಿಡ್ಜ್ ೧೯೭೫ರಲ್ಲಿ ಪ್ರಾರಂಭವಾಯಿತು. ಪ್ರಾರಂಭವಾದಾಗಿನಿಂದ ೫೫೦ ಮೀಟರ್ ಕೆಲಸ ಮಾತ್ರ ಮಾಡಿದ್ದರು. ನಾವು ಒಂದೇ ವರ್ಷದಲ್ಲಿ ೫೫೦ ಮೀಟರ್ ಕೆಲಸ ಮುಗಿಸಿದ್ದೇವೆ. ರಸ್ತೆ ಕೆಲಸ ಕೂಡ ಜೊತೆಯಲ್ಲಿಯೇ ನಡೆಯುತ್ತದೆ. ಕೆ.ಆರ್. ಮಾರ್ಕೆಟ್ ೧೯೭೨ರಲ್ಲಿ ಪ್ರಾರಂಭವಾಯಿತು. ಮೊದಲು ೭ ಕೋಟಿ ರೂಪಾಯಿ ಎಸ್ಟಿಮೇಟ್ ಇದ್ದದ್ದು, ಇವತ್ತು ೧೭ ಕೋಟಿಗೆ ಬಂದಿದೆ. ಹೋಲ್‌ಸೇಲ್ ಮಾರ್ಕೆಟ್, ಮಟನ್ ಮಾರ್ಕೆಟ್, ಮಲ್ಟಿಸ್ಟೋರೀಡ್ ಕಟ್ಟಡ ಕಾರ್ ಪಾರ್ಕಿಂಗ್ ವ್ಯವಸ್ಥೆ ಕೂಡ ಮಾಡುತ್ತಿದ್ದೇವೆ. ಬೆಂಗಳೂರು ನಗರದಲ್ಲಿ ಪ್ಲಾನಿಟೋರಿಯಂ ಮಾಡಬೇಕೆನ್ನುವ ವಿಷಯ ಮನಸ್ಸಿನಲ್ಲಿದೆ. ಬಾಂಬೆ, ಕಲ್ಕತ್ತಾದಲ್ಲಿರುವಂತೆ ಪ್ರವಾಸಿಗರ ಅನುಕೂಲಕ್ಕೋಸ್ಕರ ಒಂದು ಪ್ಲಾನಿಟೋರಿಯಂ ಮಾಡುವ ಉದ್ದೇಶದಿಂದ ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಮದ್ರಾಸ್‌ನಲ್ಲಿ ಅಣ್ಣಾನಗರದಲ್ಲಿ ಒಂದು ಟವರ್ ಇದೆ. ಅದೇ ಮಾದರಿಯಲ್ಲಿ ಬೆಂಗಳೂರು ನಗರದಲ್ಲಿಯೂ ಕೂಡ ಒಂದು ಟವರನ್ನು ಜನರು ನೋಡುವುದಕ್ಕೆ ಅನುಕೂಲವಾಗುವಂತೆ ಮಾಡಲು ಹೊರಟಿದ್ದೇವೆ. ನಗರಕ್ಕೆ ಒಂದು ಇಂಡೋರ್ ಸ್ಟೇಡಿಯಂ ಮಾಡಬೇಕೆಂದು ಹೊರಟ್ಟಿದೇವೆ. ಜಯನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಒಂದು

ಈಜಂ ಕೊಳವನ್ನು ಮಾಡಿ ಮುಗಿಸಿದ್ದೇವೆ. ರಾಜಾಜಿನಗರದ ಷಾಪಿಂಗ್ ಕಾಂಪ್ಲೆಕ್ಸ್ ಕಟ್ಟಡದ ಕೆಲಸ ನಡೆಯುತ್ತಿದ್ದು, ಈಗಾಗಲೇ ೬೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಜಯನಗರ ಆಸ್ಪತ್ರೆಯ ಕಟ್ಟಡ ಕೆಲಸವು ಪೂರ್ಣವಾಗುವ ಹಂತದಲ್ಲಿದ್ದು. ಇನ್ನು ೧೦ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಬೇಕಾಗಿದೆ. ಬೆಂಗಳೂರು ನಗರ ಸಭೆಯ ಕಮೀಷನರ್‌ರವರಿಗೆ ಆದೇಶ ಕೊಟ್ಟು ನಗರದಲ್ಲಿ ಆಗಬೇಕಾದ ದೊಡ್ಡ ದೊಡ್ಡ ಕೇಸುಗಳನ್ನು ಆದಷ್ಟು ಬೇಗ ಮುಗಿಸಬೇಕೆಂದು ತಿಳಿಸಿದ್ದೇವೆ. ಇನ್ನು ರಸ್ತೆಗಳ ಮೇಲೆ ೮೦–೮೧ನೇ ಸಾಲಿಗೆ ೩ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೨–೮೩ನೇ ಸಾಲಿನಲ್ಲಿ ೩.೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೮೩–೮೪ನೇ ಸಾಲಿಗೆ ೩.೭೦ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ೮೪–೮೫ ರಲ್ಲಿ ೪ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇದ್ದೇವೆ. ಬೆಂಗಳೂರು ನಗರದ ಎಲ್ಲಾ ಕಡೆ ಸೋಡಿಯಂ ವೇಪರ್ ಲೈಟ್‌ಗಳನ್ನು ಬಾಂಬೆ, ಡೆಲ್ಲಿ ಹಾಗೂ ಮದ್ರಾಸಿನಲ್ಲಿ ಹಾಕಿರುವಂತೆ, ಈ ನಗರದಲ್ಲಿಯೂ ಹಾಕಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಇವತ್ತು ಲೈಟುಗಳನ್ನು ಹಾಕತಕ್ಕಂಥಾದ್ದು ಒಬ್ಬೊಬ್ಬರ ಅಧೀನದಲ್ಲಿಯೂ ಇದೆ. ಇದನ್ನು ರೀಪ್ಲೇಸ್ ಮಾಡುವ ಸಲುವಾಗಿ ಒಂದು ಮಾಸ್ಟರ್ ಪ್ಲಾನ್ ಮಾಡಿದ್ದೇವೆ. ಅದಕ್ಕೂ ಕೂಡ ಹಣವನ್ನು ಒದಗಿಸಿದ್ದೇವೆ. ಬೆಂಗಳೂರು ನಗರಕ್ಕೆ ೧೯೬೪ ರಲ್ಲಿ ೩೫ ಹಳ್ಳಿಗಳು, ೨೯ ಹ್ಯಾಂಪ್ಲೆಟ್ಸ್‌ಗಳನ್ನು ಸೇರಿಸಲಾಯಿತು. ಕಾರ್ಪೊರೇಷನ್ ವ್ಯಾಪ್ತಿಗೆ ಬಂದರೂ ಇದುವರೆವಿಗೂ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭ ಮಾಡಿರಲಿಲ್ಲ. ಹೋದವರ್ಷ ಇವುಗಳ ಅಭಿವೃದ್ಧಿಗಾಗಿ ಒಂದುಕೋಟಿ ೨೬ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೬೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ, ಕುಡಿಯುವ ನೀರನ್ನು ಒದಗಿಸಿದ್ದೇವೆ. ಉಳಿಕೆ ಹಣವನ್ನು ಕೊಡುತ್ತೇವೆ. ಬೆಂಗಳೂರು ನಗರಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವುದಕ್ಕೆ ಕಾರಣ ತೆರಿಗೆ ರೂಪದಲ್ಲಿ ಹಣ ಬರುತ್ತದೆ

ಅಧ್ಯಕ್ಷರೇ, ಮುಂದೆ ಬರತಕ್ಕಂಥ ವರ್ಷಗಳಲ್ಲಿ ಬೆಂಗಳೂರು ಸಮೀಪದಲ್ಲಿ ಹೈ ರೈಸ್ ಬಿಲ್ಡಿಂಗ್‌ಗಳಿಗೆ ಅವಕಾಶ ಕೊಡಬಾರದೆಂದು ನಿರ್ಣಯ ಮಾಡಲಾಗಿತ್ತು. ಕೊಟ್ಟರೂ ಕೂಡ ಬೆಂಗಳೂರು ಬಿಟ್ಟು ಒಂದೂವರೆ ಕಿಲೋಮೀಟರ್ ಆಚೆ ಕೊಟ್ಟು, ಕಾರ್ ಪಾರ್ಕಿಂಗ್ ಮತ್ತಿತರ ಅನುಕೂಲಗಳನ್ನು ಒದಗಿಸಬೇಕೆಂದು ತಿಳಿಸಲಾಗಿದೆ.

ಅಧ್ಯಕ್ಷರೆ, ಇವೊತ್ತು ಎಲ್ಲಿ ಕಾರ್ ಪಾರ್ಕಿಂಗ್ ಮಾಡಬೇಕು ಅದನ್ನು ನೋಡಿ ಮಾಡುತ್ತೇವೆ. ಒಂದು ಮನೆಗೆ ಏನಾದರೂ ಬೆಂಕಿ ಬಿದ್ದರೆ ಅಲ್ಲಿಗೆ ಫೈರಿಂಗ್ ವಾಹನ ಹೋಗಲಿಕ್ಕೆ ರಸ್ತೆ ಇಲ್ಲ. ಆದ್ದರಿಂದ, ಕಾರ್ ಪಾರ್ಕಿಂಗ್ ಯಾವ ಏರಿಯಾ ಅಂತ ನೋಡಿ ಜೋನಿಂಗ್ ಫಿಕ್ಸ್ ಮಾಡಿ ಹೈರೈಸ್ ಬಿಲ್ಡಿಂಗ್ ಕಟ್ಟಬೇಕು ಅಂತ ಸರ್ಕಾರದ ಉದ್ದೇಶ ಇದೆ. ಈ ರೀತಿಯಾಗಿ ಎಲ್ಲಾ ಮಾಡಿದ್ದೇವೆ. ಇನ್ನು ಅಲಸೂರು ಲೇಕ್ ೫೪ ಸಾವಿರ ಸ್ಕ್ವೇರ್ ಇದ್ದು, ಅಲ್ಲಿ ಏನೆಲ್ಲಾ ಕೊಟ್ಟಿತ್ತು, ಅದನ್ನು ಸರ್ಕಾರದವರು ಬಹಳ ಪ್ರಯತ್ನ ಮಾಡಿ ಉಳಿಸಿದ್ದೇವೆ. ಅಲ್ಲಿ ಡ್ರೈನ್ ಮೇಲೆ ಇದ್ದ ಸ್ಥಳವಾಗಲಿ, ಖಾಲಿ ಜಾಗವಾಗಲಿ, ಯಾವ ಒಬ್ಬ ವ್ಯಕ್ತಿಗೂ ಕೂಡ ಇವೊತ್ತಿನ ದಿವಸ ಕೊಟ್ಟಿಲ್ಲ. ಇವೊತ್ತು ಬೆಲೆ ಬಾಳತಕ್ಕ ಸ್ಥಳ ಏನಿದೆ ಅದನ್ನು ಉಳಿಸಬೇಕು ಎಂಬ ದೃಷ್ಟಿಯಿಂದ ಬಹಳ ಪ್ರಾಮಾಣಿಕತೆಯಿಂದ ಯಾರಿಗೂ ಲೀಸ್ ಕೊಟ್ಟಿಲ್ಲ; ಮಾರಾಟ ಮಾಡಿಲ್ಲ. ಒಂದು ಇಂಚು ಜಮೀನನ್ನು ಸರ್ಕಾರ ಯಾರಿಗೂ ಕೊಟ್ಟಿಲ್ಲ. ಬೆಂಗಳೂರು ನಗರದ ಪ್ರಾಪರ್ಟಿಯನ್ನು ಉಳಿಸಿಕೊಂಡು ಬಂದಿದ್ದೇವೆ. ಇವೊತ್ತು ಎಷ್ಟೋ ಆಸ್ಪತ್ರೆಗಳನ್ನು ಕಟ್ಟಿಸತಕ್ಕ ರೀತಿಯಲ್ಲಿ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸ್ ಅವರು ೮ ಆಸ್ಪತ್ರೆಗಳನ್ನು ಕಟ್ಟಬೇಕಾಗಿದೆ. ಸ್ಥಳ ಬೇಕು ಎಂದರೆ ಇಂದಿರಾನಗರದಲ್ಲಿ ಸಿವಿಕ್ ಅಮಿನಿಟೀಸ್‌ನಲ್ಲಿ ಇದ್ದ ಸ್ಥಳ ಕೂಡ ಇವೊತ್ತು ಇಲ್ಲ. ಇವೊತ್ತು ಎಲ್ಲ ಕಡೆಗಳಲ್ಲೂ ಕೂಡ ಕೆಲಸ ಕಾರ್ಯಗಳು ಸಮರ್ಪಕವಾಗಿ ಆಗುತ್ತಿವೆ ಎಂದು ಹೇಳುತ್ತಿದ್ದೇನೆ. ಅಧ್ಯಕ್ಷರೆ ಮಾನ್ಯ ಸದಸ್ಯರಾದ ಸಾಲಪ್ಪನವರು ಹೇಳುತ್ತಿದ್ದರು, ಅವರು ಕೂಡ ಅಧ್ಯಕ್ಷರಾಗಿದ್ದಾರೆ, ಮೊನ್ನೆ ಕೂಡ ಅವರಿಗೆ ಹೇಳಿದ್ದೇನೆ. ಬೆಂಗಳೂರು ವಾಟರ್ ಅಂಡ್ ಸಿವರೇಜ್ ಬೋರ್ಡ್ ವರ್ಕರ್ಸ್ ಯೂನಿಯನ್ ೧೧ ಡಿಮ್ಯಾಂಡ್‌ಗಳು ಏನಿತ್ತು, ಹಾಗೆ ಇಂಜಿನಿಯರ್ಸ್ ೫೭ ಡಿಮ್ಯಾಂಡ್‌ಗಳು ಏನಿತ್ತು ನಾವು ಬಂದನಂತರ ಮ್ಯಾನೇಜ್‌ಮೆಂಟ್ ಸೆಟಲ್‌ಮೆಂಟ್ ಅಂತ ಹೇಳಿ ಮುಗಿಸಿ ಅವರಿಗೆ ಎಕ್ಸ್‌ಗ್ರೇಷಿಯಾ ಪೇಮೆಂಟ್ ಕೂಡ ಕೊಟ್ಟಿದ್ದೇವೆ. ಆದರೂ ಕೂಡ ಸ್ವಚ್ಛತಾ ದೃಷ್ಟಿಯಿಂದ ಹೇಳುತ್ತಿದ್ದಾರೆ. ಎಲ್ಲಾ ಕಡೆ ಚೆನ್ನಾಗಿ ಕೆಲಸ ಕಾರ್ಯಗಳು ಆಗಬೇಕೆಂದು ಹೇಳುತ್ತಿದ್ದಾರೆ. ಇವೊತ್ತು ಎಲ್ಲ ಕಡೆ ಉತ್ತಮವಾಗಿ ಕೆಲಸ ಕಾರ್ಯಗಳು ಆಗಬೇಕಾದರೆ ಅಲ್ಲಿರತಕ್ಕ ಸಿಬ್ಬಂದಿ ವರ್ಗದವರೂ ಕೂಡ ಅಷ್ಟೇ ಪ್ರಾಮಾಣಿಕತನದಿಂದ ಸಹಕಾರ ಮಾಡಬೇಕಾಗುತ್ತದೆ. ಎಲ್ಲಿಯವರೆಗೆ ಕೆಲಸ ಕಾರ್ಯಗಳು ಆಗುವುದಿಲ್ಲ

ಅಲ್ಲಿಯವರೆಗೆ ಜನರ ಮೆಚ್ಚುಗೆ ಗಳಿಸುವುದು ಕಷ್ಟವಾಗುತ್ತದೆ. ಇನ್ನು ಮಾನ್ಯ ಆರ್ಮುಗಂ ಅವರು ಕೆ ಜಿ.ಎಫ್. ವಾಟರ್ ಸಪ್ಲೈ ವಿಚಾರವನ್ನು ಹೇಳಿದ್ದಾರೆ. ಅಲ್ಲಿ ಈಗಾಗಲೇ ಹದಿನೆಂಟೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮುಂದೆ ಮೂವತ್ತು ಕೋಟಿ ರೂಪಾಯಿ ಯೋಜನೆ ಕಾವೇರಿಯಿಂದ ನೀರನ್ನು ತರಬೇಕೆಂದು ಹೇಳುತ್ತಿದ್ದಾರೆ. ಕಾವೇರಿ ಯೋಜನೆ ೩೦ ಕೋಟಿ ರೂಪಾಯಿ ಖರ್ಚು ಮಾಡಿ ತರತಕ್ಕದ್ದು ಅದು ಸಾಧ್ಯವಾಗುವುದಿಲ್ಲ. ಆದರೂ ಕೂಡ ಬೇರೆ ಯಾವ ರೀತಿ ನೀರು ತಂದು ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆ, ಇಂಪ್ರೂವ್‌ಮೆಂಟ್ ಸ್ಕೀಮ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಇದೇ ರೀತಿ ಎಲ್ಲಾ ಕಡೆ ಮಾಡುತ್ತಿದ್ದೇವೆ. ಇವೊತ್ತು ಎಲ್ಲ ಸದಸ್ಯರು ತಮ್ಮ ಬೇಡಿಕೆಗಳನ್ನು ಇಟ್ಟಿದ್ದಾರೆ. ಕೆಲವು ಸಣ್ಣಪುಟ್ಟ ವಿಚಾರಗಳು ಇರಬಹುದು, ಒಂದೊಂದಾಗಿ ಪ್ರಸ್ತಾಪ ಮಾಡಲಿಕ್ಕೆ ಹೊರಟರೆ ಬಹಳ ವೇಳೆ ಆಗುತ್ತದೆ, ಆದ್ದರಿಂದ, ನಾನು ಹೋದ ವರ್ಷ ಕೂಡ ಮಾನ್ಯ ಸದಸ್ಯರಿಗೆ ಏನೇನು ವಚನಗಳನ್ನು ಕೊಟ್ಟಿದ್ದೆ, ಅದರ ಬಗ್ಗೆ ಒಂದೊಂದಾಗಿ ಕ್ರಮ ತೆಗೆದುಕೊಂಡಿದ್ದೇನೆ. ಕಾಮನ್ ಕೇಡರ್ ಮಾಡುವ ಸಲುವಾಗಿ ಈಗಾಗಲೇ ಸ್ಪೆಷಲ್ ಆಫೀಸರ್ ಅಪಾಯಿಂಟ್ ಮಾಡಿದ್ದೇವೆ. ಅವರು ಡ್ರಾಫ್ಟ್ ಕೂಡ ಮಾಡುತ್ತಿದ್ದಾರೆ. ಇನ್ನು ಮುನಿಸಿಪಾಲಿಟಿಗಳಲ್ಲೂ ಶಿಸ್ತು ಬರಬೇಕು ಎನ್ನುವ ದೃಷ್ಟಿಯಿಂದ ಟ್ರಾನ್ಸ್‌ಫರ್ ಬಗ್ಗೆ ಮಾನ್ಯ ಸದಸ್ಯರಾದ ಆರ್ಮುಗಂ ಅವರು ಪ್ರಸ್ತಾಪ ಮಾಡಿದ್ದಾರೆ. ಅದು ವಾಟರ್ ಸಪ್ಲೈಗೂ ಅನುಗುಣವಾಗುತ್ತದೆ, ಅರ್ಬನ್ ವಾಟರ್ ಬೋರ್ಡ್‌, ಸ್ಲಮ್ ಬೋರ್ಡ್ ಎಲ್ಲದಕ್ಕೂ ಆಗುತ್ತದೆ ಕಾರ್ಪೊರೇಷನ್‌ನಲ್ಲಿ ಕೆಲಸ ಮಾಡತಕ್ಕವರು ಗುಲ್ಬರ್ಗಕ್ಕೆ ಹೋಗಬಹುದು, ಗುಲ್ಬರ್ಗದಲ್ಲಿ ಕೆಲಸ ಮಾಡತಕ್ಕವರು, ಶಿವಮೊಗ್ಗಕ್ಕೆ ಹೋಗಬಹುದು, ಶಿವಮೊಗ್ಗದಿಂದ ಬೆಂಗಳೂರಿಗೆ ಬರಬಹುದು ಈ ರೀತಿಯಾಗಿ ಇವೊತ್ತು ತಿದ್ದುಪಡಿ ತಂದಿದ್ದೇವೆ. ಎಂದೂ ಈ ತರಹ ತಿದ್ದುಪಡಿ ಬಂದಿದ್ದಿಲ್ಲ. ಅವರಿಗೂ ಕೂಡ ನಾವು ಎಲ್ಲಿ ಹೋದರೂ ಕೆಲಸ ಮಾಡಬೇಕು ಎನ್ನುವ ಭಯ ಇರುತ್ತದೆ. ಇದರಿಂದ ಒಳ್ಳೆಯ ಶಿಸ್ತು ಬರುತ್ತದೆ ಎನ್ನುವ ದೃಷ್ಟಿಯಿಂದ ತಂದಿದ್ದೇವೆ, ವೆಸ್ಟೆಡ್ ಇಂಟರೆಸ್ಟ್ ಏನು ಇದೆ ಅದು ಒಂದು ಕಡೆ ಕೂಡಿ ಆಗುವುದು ಆಗುವುದಿಲ್ಲ. ಕರ್ನಾಟಕ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರ್ವೀಸ್ ಕೇಡರ್ ವಿಚಾರದಲ್ಲಿ ಈಗಾಗಲೇ ಹೇಳಿದ್ದೇನೆ. ಅದನ್ನು ಮಾಡಿದ್ದೇವೆ. ಎ.ಜಿ. ಕೂಡ ಸ್ಲಿಪ್ ಇಸ್ಯು ಮಾಡುತ್ತಿದ್ದಾರೆ. ಇನ್ನು ವಾಟರ್. ಹೌಸಿಂಗ್‌ನಲ್ಲಿ ೫ ಕೋಟಿ ರೂಪಾಯಿ ವಸೂಲಿ ಆಗಬೇಕಾಗಿದೆ. ಈಗ ಮದ್ರಾಸ್‌ನಲ್ಲಿ ಒಂದು ಅಮೆಂಡ್‌ಮೆಂಟ್ ತಂದಿದ್ದಾರೆ ಅದೇ ಅಮೆಂಡ್‌ಮೆಂಟ್‌ನ್ನು ಅರಿಯರ್ಸ್ ಅಟ್ಯಾಚ್ ಮಾಡಿಕೊಂಡು ಮಾಡಲಿಕ್ಕೆ, ಅವರಿಗೆ ಭಯ ತರಲಿಕ್ಕೆ ತರುತ್ತಿದ್ದೇವೆ. ಇನ್ನು ನಮ್ಮ ಸರ್ಕಾರದಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಿಗೆ ಎಷ್ಟೆಷ್ಟು ಡಿ.ಎ. ಸಿಕ್ಕುತ್ತದೆ. ಮುನಿಸಿಪಾಲಿಟಿಗಳಲ್ಲಿ ಕೆಲಸ ಮಾಡತಕ್ಕವರಿಗೆ ಎಷ್ಟು ಡಿ.ಎ. ಕೊಟ್ಟಿದ್ದೇವೆ ? ಒಂದೊಂದು ಕಡೆ ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಇಲ್ಲದ ಕಾರಣ ಕೊಟ್ಟಿಲ್ಲ. ಅಲ್ಲಿಯೂ ಕೂಡ ಎಕ್ಸಾಮಿನ್ ಮಾಡಿ ಯಾವ ರೀತಿ ಸಹಾಯ ಮಾಡಬೇಕು ಅದನ್ನು ಮಾಡುತ್ತಿದ್ದೇವೆ. ಇನ್ನು ಎಲೆಕ್ಷನ್ ವಿಚಾರವಾಗಿ ಹೇಳಬೇಕು ಎಂದರೆ ಸುಮಾರು ಎಂಟು ಹತ್ತು ವರ್ಷಗಳಿಂದ ಅಡ್ಮಿನಿಸ್ಟ್ರೇಟರ್ ಇದ್ದಾರೆ ಅಂದರೆ, ಈಗಾಗಲೇ ೧೩೭ ಮುನಿಸಿಪಾಲಿಟಿಗಳಿಗೆ ಎಲೆಕ್ಷನ್ ಆಗಿದೆ. ಇನ್ನು ೯೩ ಮುನಿಸಿಪಾಲಿಟಿಗಳಿಗೆ ಎಲೆಕ್ಷನ್ ಆಗಬೇಕಾಗಿದೆ

ಅಧ್ಯಕ್ಷರು.—ಮಾನ್ಯ ಸದಸ್ಯರು ೧೪ ವರ್ಷದಿಂದ ಆಗಬೇಕು ಎಂದು ಹೇಳಿದರು. ಇನ್ನು ಅಥಣಿ...

ಶ್ರೀ ಧರ್ಮಸಿಂಗ್.—ಅಧ್ಯಕ್ಷರೆ, ೧೯೬೭ ರಿಂದ ಇಲ್ಲಿಯವರೆಗೆ ಆಗಿಲ್ಲ ಎನ್ನತಕ್ಕದ್ದನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಯಾವ ಕಾರಣದಿಂದ ಆಗಿಲ್ಲ ಅದು ವಿವರ ಇಲ್ಲ, ಅದರ ಬಗ್ಗೆ ವಿವರ ನೋಡಿ ಹೇಳಬೇಕಾಗುತ್ತದೆ. ಇನ್ನು ಎಲ್ಲ ಕಡೆಗಳಲ್ಲೂ ನವೆಂಬರ್‌ನಲ್ಲಿ ಎಲೆಕ್ಷನ್ ಮಾಡಬೇಕೆಂದು ಇದ್ದೇವೆ. ಆ ವಿಚಾರದಿಂದ ೯೩ ಮುನಿಸಿಪಾಲಿಟಿಗಳಲ್ಲಿ ಎಲೆಕ್ಷನ್ ಏನು ಆಗಿದ್ದಿಲ್ಲ......

ಅಧ್ಯಕ್ಷರು.—೧೨ ವರ್ಷ ಆದಮೇಲೆ ಅಡ್ಮಿನಿಸ್ಟ್ರೇಟರ್ ನನ್ನದೇ ಖಾಯಂ ಅನ್ನುವ ರೈಟ್ ಬಂದು ಬಿಡಬಹುದು ಅಂತ ಹೇಳಿದೆ.

ಶ್ರೀ ಧರ್ಮಸಿಂಗ್.—ಈಗ ಕಾರ್ಪೊರೇಷನ್‌ನಲ್ಲಿ ಮಲ್ಟಿ ಮೆಂಬರ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡಿದ್ದೇವೆ. ಕೆಲವು ನೋಟಿಫಿಕೇಷನ್ ಕೂಡ ಮಾಡಿದ್ದೇವೆ. ಇನ್ನು ಮಾನ್ಯ ಬಸಪ್ಪನವರು ಒಂದು ಮಾತನ್ನು ಹೇಳಿ ಸ್ಪಷ್ಟೀಕರಣ ಕೇಳಿದ್ದಾರೆ. ಈಗ ೧೯೭೧ರ ಸೆನ್‌ಸಸ್ ಪ್ರಕಾರ ಟೆರಿಟೋರಿಯಲ್ ಡಿವಿಜನ್ ಆಗಿದ್ದು, ೧೯೮೧ರ ಸೆನ್ಸಸ್ ಆದನಂತರ ಅದೆಲ್ಲಾ ಫಿಗರ್ಸ್ ಸಿಕ್ಕಿಲ್ಲ. ಎಲೆಕ್ಷನ್ ಕಮಿಷನ್‌ಗೆ ಹೋಗಿ ಅದೆಲ್ಲಾ ಪ್ರಿಂಟ್ ಆಗಬೇಕು, ಆದಕಾರಣ ತಡವಾಗುತ್ತದೆ, ಎಲೆಕ್ಷನ್ ೧೯೭೧ರ ಸೆನ್ಸಸ್ ಪ್ರಕಾರ

ಆಗಬಹುದು. ೧೯೮೧ರ ಸೆನ್ಸಸ್ ಪ್ರಕಾರ ಆಗಬೇಕಾದರೆ ಎಲೆಕ್ಷನ್ ತಡವಾಗಿ ಆಗಬೇಕಾಗುತ್ತದೆ. ನಾನು ಬೆಳಿಗ್ಗೆ ಇದರ ಮೇಲೆ ಹೇಳಿದ್ದರಿಂದ ಅದನ್ನು ಸರಿಪಡಿಸುತ್ತಿದ್ದೇನೆ. ಇನ್ನೂ ಎಲ್ಲಾ ಕಡೆಯಲ್ಲೂ ವಿಜಿಲೆನ್ಸ್ ಸೆಲ್ ಮಾಡುತ್ತಿದ್ದೇವೆ. ಇವೊತ್ತು ಹುಬ್ಬಳ್ಳಿ, ಧಾರವಾಡ, ಬೆಂಗಳೂರು ಅಲ್ಲ. ಎಲ್ಲಾ ಮುನಿಸಿಪಾಲಿಟಿಗಳಲ್ಲೂ ವಿಜಿಲೆನ್ಸ್ ಸೆಲ್ ಮಾಡುತ್ತಿದ್ದೇವೆ. ೧೯೭೧ರ ಸೆನ್ಸಸ್ ಪ್ರಕಾರ ಟೆರಿಟೋರಿಯಲ್ ಡಿವಿಜನ್ ಆಗಿದೆ. ೧೯೮೧ರ ಸೆನ್ಸಸ್ ಪ್ರಕಾರ ಆಗಬೇಕಾಗಿದ್ದರೆ, ೧೯೮೧ರ ಫಿಗರ್ಸ್ ಪ್ರೊಸೆಸ್ ಆಗುತ್ತದೆ. ಎಲೆಕ್ಷನ್ ಕಮಿಷನ್‌ಗೆ ಹೋಗಬೇಕು, ಪ್ರಿಂಟ್ ಆಗಬೇಕು. ಅದಕ್ಕೆಲ್ಲಾ ಲೇಟ್ ಆಗುತ್ತದೆ. ಅವಕ್ಕೆ ಚೀಫ್ ಎಲೆಕ್ಟೋರಲ್ ಆಫೀಸರ್ ಏನು ಹೇಳುತ್ತಾರೆ ಎಂದರೆ, ಈಗ ನವೆಂಬರ್‌ನಲ್ಲಿ ಚುನಾವಣೆ ಮಾಡಬೇಕಾದರೆ ೧೯೭೧ರ ಸೆನ್ಸಸ್ ಪ್ರಕಾರ ಮಾಡಬೇಕು. ೧೯೮೧ರ ಸೆನ್ಸಸ್ ಪ್ರಕಾರ ಆಗಬೇಕಾದರೆ ಅದು ಸಮಯ ತೆಗೆದುಕೊಳ್ಳುತ್ತದೆಂದು ಹೇಳಿದ್ದಾರೆ. ಅವರೂ ಕೂಡ ಅದರ ಬಗ್ಗೆ ಎಗ್ಸಾಮ್ ಮಾಡೋಣ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—೧೯೭೧ನೇ ಇಸವಿ ಪ್ರಕಾರ ಚುನಾವಣೆ ಮಾಡುವುದಾದರೆ ಕೋರ್ಟಿಗೆ ಬೀಳುತ್ತದೆ. ಇನ್ನು ನಾಲ್ಕು ವರ್ಷ ಮುಂದೆ ಹೋಗುತ್ತದೆ. ಆದ್ದರಿಂದ, ಇನ್ನು ೬ ತಿಂಗಳು ಅಥವಾ ಒಂದು ವರ್ಷ ತಡ ಆದರೂ ಚಿಂತೆ ಇಲ್ಲ. ಅದರ ಬಗ್ಗೆ ಸರಿಯಾಗಿ ಪರಿಶೀಲನೆ ಮಾಡಬೇಕು.

MR. SPEAKER.—It depends upon the advocates also.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಅಂಥ ಅಡ್ವೊಕೇಟ್ಸ್ ಬಹಳ ಜನ ಇದ್ದಾರೆ.

ಶ್ರೀ ಧರ್ಮಸಿಂಗ್.—ಚುನಾವಣೆ ಮಾಡಬೇಕೆಂದು ನಮಗೆ ಬಹಳ ತೀವ್ರತೆ ಇದೆ. ನಿಧಾನ ಮಾಡಬೇಕು ಅಂತ ಇಲ್ಲ. ನವೆಂಬರ್‌ನಲ್ಲಿ ಚುನಾವಣೆ ಮಾಡಿಸಬೇಕೆಂದು ಇದ್ದೇವೆ. ಈಗ ಮಾನ್ಯ ಸದಸ್ಯರು ೧೯೭೧ರ ಸೆನ್ಸಸ್ ಪ್ರಕಾರ ಚುನಾವಣೆ ಮಾಡಿಸಿದರೆ ಕೋರ್ಟ್‌ಗೆ ಹೋಗುತ್ತಾರೆ ಎಂದು ತಿಳಿಸಿದ್ದಾರೆ. ೧೯೮೧ರ ಸೆನ್ಸಸ್ ಪ್ರಕಾರ ಚುನಾವಣೆ ಮಾಡಲಿಕ್ಕೆ ಹೋದರೆ ಹೆಚ್ಚು ಸಮಯ ಬೇಕಾಗುತ್ತದೆ. ಆದ್ದರಿಂದ ಅದರ ಬಗ್ಗೆ ವಿಚಾರ ಮಾಡೋಣ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಈಗ ಹತ್ತು ವರ್ಷಗಳಲ್ಲಿ ಓಟುದಾರರಾಗಿರತಕ್ಕವರಿಗೆ ಅವಕಾಶ ಕೊಡದೇ ಹೋದರೆ ಚುನಾವಣೆಯ ಮೂಲಭೂತ ಹಕ್ಕಿಗೆ ಅಡ್ಡಿ ಬಂದಂತಾಗುತ್ತದೆ. ಎಲೆಕ್ಷನ್ ರದ್ದಾಗುತ್ತದೆ.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಪ್ರಶ್ನೆಗಳ ಸಲುವಾಗಿ, ಗಮನ ಸೆಳೆಯುವ ಸೂಚನೆ ಸಲುವಾಗಿ ಸಾಕಷ್ಟು ಈ ವಿಷಯದ ಬಗ್ಗೆ ಉತ್ತರ ಕೊಟ್ಟಿದ್ದೇವೆ. ಇವತ್ತಿನ ದಿವಸ ಎಲ್ಲ ಕಡೆ ಅನಾನುಕೂಲಗಳು ಆಗುತ್ತಿವೆ ಎಂದು ಹೇಳಿದ್ದಾರೆ. ಹಾಗೆ ಗುಲ್ಬರ್ಗ ಕಾರ್ಪೊರೇಷನ್ ಬಗ್ಗೆ ಹೇಳಿದ್ದಾರೆ. ಶಿವಮೊಗ್ಗ ಭದ್ರಾವತಿ ಕೂಡಿಸಿ ಕಾರ್ಪೊರೇಷನ್ ಆಗಬೇಕೆಂದು ಮೊದಲಿನ ಪ್ರಪೋಸಲ್ ಇತ್ತು. ಏಕೆಂದರೆ ಅಲ್ಲಿ ಮಧ್ಯದಲ್ಲಿ ಬರತಕ್ಕ ಹಳ್ಳಿಗಳು ಸೇರಿಕೊಂಡು ಮಾಡಬೇಕಾಗುತ್ತದೆ. ನಾನು ಶಿವಮೊಗ್ಗಕ್ಕೆ ಹೋದಾಗಲೂ ಪ್ರಪೋಸಲ್ ಬಂದಿತ್ತು. ಅದು ಈಗ ಸ್ಪೀಡ್ ಅಪ್ ಮಾಡಿದ್ದೇವೆ. ಬೌಂಡ್ರಿ ವಿಷಯದಲ್ಲಿ ಸ್ವಲ್ಪ ಡಿಫೆಕ್ಟ್ ಇತ್ತು ಅದನ್ನು ತರಿಸಿದ್ದೇವೆ. ಅದು ಕಾರ್ಪೊರೇಷನ್ ಮಾಡಬೇಕೆಂದು ಮಾಡುತ್ತಿದ್ದೇವೆ. ಹೊಸ ಸರ್ಕಾರ ಬಂದ ಮೇಲೆ ಮಂಗಳೂರು ಕಾರ್ಪೊರೇಷನ್ ಮಾಡಿದ್ದೇವೆ. ಇವೊತ್ತು ಗುಲ್ಬರ್ಗದಲ್ಲಿ ೨ ಲಕ್ಷ ೧೮ ಸಾವಿರ ಜನಸಂಖ್ಯೆ ಆಗಿದೆ. ಕಾರ್ಪೊರೇಷನ್ ಮಾಡಬೇಕಾದರೆ ೨ ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಆದಾಯ ಇರಬೇಕು. ಈ ದೃಷ್ಟಿಯಿಂದ ಪ್ರಪೋಸಲ್ ಬರುತ್ತಿದೆ. ಇವೊತ್ತು ಶಿವಮೊಗ್ಗ, ಗುಲ್ಬರ್ಗ ಕಾರ್ಪೊರೇಷನ್ ಮಾಡಬೇಕೆಂದು ಇದ್ದೇವೆ. ಒಂದು ಕಾರ್ಪೊರೇಷನ್ ಮಾಡಿದರೆ ಸಿಬ್ಬಂದಿ ಮತ್ತು ಇತರ ದೃಷ್ಟಿಯಿಂದ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರಾದ ಮಾಳಗಿಯವರು ೨೪ ವರ್ಷಗಳ ಕಾಲ ನಗರಸಭಾ ಸದಸ್ಯರಾಗಿ ಕೆಲಸ ಮಾಡಿರುವುದರಿಂದ ಅವರು ಮುನಿಸಿಪಲ್ ಹೆಲ್ತ್ ಮ್ಯಾನ್ಯುಯಲ್ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲು ಮುನಿಸಿಪಾಲಿಟಿಯಲ್ಲಿ ಏನು ಸಿಬ್ಬಂದಿ ಇತ್ತು ಇವತ್ತೂ ಅದು ಅಷ್ಟೇ ಇದೆ. ಆದರೆ ಜನಸಂಖ್ಯೆ ಮಾತ್ರ ಜಾಸ್ತಿಯಾಗಿದೆ. ಆದ್ದರಿಂದ ಈ ಜನಸಂಖ್ಯೆಗೆ ಅನುಗುಣವಾಗಿ ಸಿಬ್ಬಂದಿ ವರ್ಗವನ್ನೂ ಜಾಸ್ತಿ ಮಾಡಬೇಕೆಂಬ ದೃಷ್ಟಿ ಈ ಸರ್ಕಾರಕ್ಕಿದೆ. ಎಲ್ಲಿಯವರೆಗೆ

ಇದು ಆಗುವುದಿಲ್ಲ, ಅಲ್ಲಿಯವರೆಗೂ ಸಮರ್ಪಕವಾದ ಕೆಲಸಗಳಾಗುವುದಿಲ್ಲ. ಇದು ಸರ್ಕಾರದ ಗಮನದಲ್ಲಿದೆ. ಮಾನ್ಯ ಸದಸ್ಯರುಗಳು ಬಹಳ ಆಸಕ್ತಿಯಿಂದ ಮಾತನಾಡಿ ತಮ್ಮ ತಮ್ಮ ನಗರಗಳಲ್ಲಿ ಯಾವ ಯಾವ ಕೆಲಸಗಳಾಗಬೇಕು, ಯಾವ ಯಾವ ಕೆಲಸಗಳಾಗಿಲ್ಲ ಎಂಬುದನ್ನು ಹೇಳಿದ್ದಾರೆ. ಇದನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಮುಂದೆ ಬರತಕ್ಕ ದಿವಸದಲ್ಲಿ ಇದನ್ನು ಸುಧಾರಣೆ ಮಾಡುತ್ತೇವೆಂದು ಹೇಳಬಯಸುತ್ತೇನೆ. ಇವತ್ತು ಉದಾಹರಣೆಗೆ ಹೇಳುವುದಾದರೆ ಕೋಲಾರದಲ್ಲಾಗಲಿ, ಕೆ.ಜಿ.ಎಫ್.ನಲ್ಲಾಗಲಿ, ಅಥವಾ ಬೇರೆ ಎಲ್ಲೇ ಆಗಲಿ ನಾವು ಯಾವರೀತಿ ಕೆಲಸಮಾಡುತ್ತಿದ್ದೇವೆ ಎಂಬುದನ್ನು ಹೇಳಬೇಕಾಗಿದೆ. ಇವತ್ತು ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ನಲ್ಲಿ ಕೆಲಸಮಾಡಿದಂಥ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದೇವೆ. ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಸಸ್ಪೆಂಡ್ ಮಾಡಿದ್ದೇವೆ. ಎಲ್ಲಿ ಜನರಿಗೆ ಪ್ರತಿಕೂಲ ಆಗುತ್ತಿದೆ ಎಂದು ಕಂಡು ಬಂದರೆ ಅಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಎಲ್ಲೆಲ್ಲಿ ಡೆವಲಪ್‌ಮೆಂಟ್ ಛಾರ್ಜಸ್ ತೆಗೆದುಕೊಳ್ಳದೆ ಅವರ ಮೇಲೆ ಹೆಚ್ಚು ಅನುಕಂಪವನ್ನು ತೋರಿಸಿದ್ದಾರೆ ಅದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ. ಯಾವುದೇ ರೀತಿಯ ಒತ್ತಡಕ್ಕೂ ಸರ್ಕಾರ ಮಣಿಯುವುದಿಲ್ಲ. ಎಲ್ಲೆಲ್ಲಿ ಸರಿಯಾಗಿ ಕೆಲಸವಾಗಿಲ್ಲ ಅಂಥ ಕಡೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳಿದ್ದೇವೆ. ಬಹಳ ದಿವಸದ ಕನಸನ್ನು ನಾವು ಇಂದು ನನಸು ಮಾಡುತ್ತಿದ್ದೇವೆ. ಹುಬ್ಬಳ್ಳಿ ಮತ್ತು ಗದಗ್‌ನಲ್ಲಿ ನೀರಿನ ಸ್ಕೀಂನ್ನು ಮಾಡುತ್ತಿದ್ದೇವೆ. ಗದಗ್‌ನಲ್ಲಿ ಬೇಸಿಗೆಯಲ್ಲಿ ನೀರು ಇಲ್ಲದೇ ಇದ್ದಾಗ ೧೯ ಬೋರ್‌ವೆಲ್‌ಗಳನ್ನು ಹಾಕಿ ಅವರಿಗೆ ಸಾಕಷ್ಟು ನೀರನ್ನು ಕೊಡುವ ವ್ಯವಸ್ಥೆ ಮಾಡಿದ್ದೇವೆ. ನಮಗೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನಿಂದ ೫೦ ಲಕ್ಷ ರೂ. ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ನಾವು ೪೭ ಲಕ್ಷ ರೂ.ಗಳನ್ನು ಖರ್ಚುಮಾಡಿದ್ದೇವೆ. ಇತ್ತೀಚೆಗೆ ಡಿವಿಜನಲ್' ಕಮೀಷನರ್ ಮತ್ತು ಡೆಪ್ಯುಟಿ ಕಮೀಷನರ್‌ರವರ ಸಭೆಯನ್ನು ಕರೆದಾಗ ಇಂಜಿನಿಯರ್‌ಗಳು ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿದು ೫೦ ಲಕ್ಷ ರೂ.ಗಳನ್ನು ನಾನು ಆಗಲೇ ಕೊಟ್ಟು ನೀವು ಸಮರ್ಪಕವಾಗಿ ಕೆಲಸಮಾಡಿ ಎಂದು ಹೇಳಿದ್ದೇನೆ. ನಾವೂ ೪೭ ಲಕ್ಷ ರೂ.ಗಳನ್ನು ಖರ್ಚುಮಾಡಿದ್ದೇವೆ. ಅವರಿಗೂ ೫೦ ಲಕ್ಷ ರೂ. ಕೊಟ್ಟಿದ್ದೇವೆ, ನಮಗೆ ಈ ರೀತಿ ಎಷ್ಟು ದುಡ್ಡು ಬಂದಿದೆ, ಅದರಲ್ಲಿ ಎಷ್ಟು ಕೆಲಸ ಮಾಡಬಹುದೆಂಬುದನ್ನು ನೋಡಿ ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೆ, ಇವತ್ತು ಬೆಂಗಳೂರು ನಗರದಲ್ಲಿ ಕುಡಿಯುವುದಕ್ಕೆ ನೀರು ಸಿಕ್ಕುತ್ತಿಲ್ಲ. ಪರ್ ಕ್ಯಾಪಿಟಾ ೧೦-೧೨ ಗ್ಯಾಲನ್ ನೀರನ್ನು ಕೊಡುತ್ತಿದ್ದೇವೆ. ಇವತ್ತು ೪೦ ಬೋರ್‌ನಲ್ಲಿ ಕಲ್ಲು ಇದೆ. ಕಲ್ಕತ್ತಾದಲ್ಲಿ, ಬೊಂಬಾಯಿಯಲ್ಲಿ ಬೋರ್ ಹಾಕಿದ್ದಾರೆ ೧೦ ಅಡಿಗಳಲ್ಲಿ ನೀರು ಬರುತ್ತದೆ. ಆದರೆ ಇಲ್ಲಿ ಅತಿ ಎತ್ತರವಾಗಿ ಕಲ್ಲು ಇರುವುದರಿಂದ ನೀರು ಬರುತ್ತಿಲ್ಲ. ಇದು ನಮಗೆ ತೊಂದರೆಯಾಗಿದೆ. ಇಷ್ಟೇ ಅಲ್ಲ, ಇಡೀ ದೇಶದಲ್ಲೇ ವಾಟರ್‌ಟೇಬಲ್ ಕೆಳಗೆ ಹೋಗುತ್ತಿದೆ. ಈ ರೀತಿ ನಮಗೆ ಅನೇಕ ತೊಂದರೆಗಳಿವೆ, ಈ ಎಲ್ಲ ತೊಂದರೆಯನ್ನೂ ಗಮನದಲ್ಲಿಟ್ಟುಕೊಂಡು ಇದನ್ನು ಯಾವ ರೀತಿ ಪರಿಹಾರ ಮಾಡಬೇಕೆಂದು ಹೊರಟಿದ್ದೇವೆ. ಇವತ್ತು ಬೆಳಿಗ್ಗೆ ಚಿತ್ರದುರ್ಗಕ್ಕೆ ನಾನು ಹೋಗಿದ್ದೆ. ಅಲ್ಲಿ ಇಂಟಿ-ಗ್ರೇಟೆಡ್ ಅರ್ಬನ್ ಡೆವಲಪ್‌ಮೆಂಟ್ ಪ್ಲಾನ್ ತೆಗೆದುಕೊಂಡಿದ್ದೇವೆ. ವಾಟರ್ ಸಪ್ಲೈ ಸ್ಕೀಂನ್ನು ಯು.ಜಿ.ಡಿ ಸ್ಕೀಂನ್ನು ತೆಗೆದುಕೊಂಡಿದ್ದೇವೆ. ಇದಕ್ಕೆ ಎಲ್ಲಿಂದಲಾದರೂ ದುಡ್ಡು ತಂದುಹಾಕಿ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಮಾನ್ಯ ಸದಸ್ಯರಾದ ಆರಕೇರಿಯವರು ಅಂಡರ್‌ಗ್ರೌಂಡ್ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ ಇದಕ್ಕೆ ನಾವು ೬೦ ಲಕ್ಷ ರೂ ಗಳನ್ನು ಖರ್ಚುಮಾಡಿದ್ದೇವೆ. ವಾಟರ್ ಸಪ್ಲೈ ಸ್ಕೀಂಗೆ ೮೭ ಲಕ್ಷ ರೂ.ಗಳನ್ನು ಅವರು ಕೇಳುತ್ತಿದ್ದಾರೆ. ಇಷ್ಟು ದುಡ್ಡನ್ನು ಕೊಡಬೇಕಾದರೆ ನಮಗೆ ಆರ್ಥಿಕ ತೊಂದರೆ ಬಹಳ ಇದೆ. ಇದನ್ನು ನಾವು ಗಮನದಲ್ಲಿ ಇಟ್ಟುಕೊಂಡು ಈ ವರ್ಷ ಎಷ್ಟು ಕೊಡಬೇಕೆಂದು ನೋಡುತ್ತಿದ್ದೇವೆ. ಈಗ ನಾವು ೪೨ ಸ್ಕೀಂಗಳನ್ನು ಏನು ತೆಗೆದುಕೊಂಡಿದ್ದೇವೆ, ಅದನ್ನು ಎಲ್ಲೆಲ್ಲಿ ಮಾಡಬೇಕೋ ಅಲ್ಲಲ್ಲಿ ಮಾಡುತ್ತೇವೆ.

ಇನ್ನು ಚಿತ್ರದುರ್ಗದಲ್ಲಿ ಬಡ ಜನರಿಗೆ ಸೈಟುಗಳನ್ನು ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅಲ್ಲಿ ಎಷ್ಟು ಜಮೀನು ಸಿಕ್ಕುತದೆಂಬುದನ್ನು ಎಕ್ಸಾಮಿನ್ ಮಾಡಿ ಅದನ್ನೂ ತೆಗೆದುಕೊಳ್ಳುತ್ತೇವೆ. ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವೆಲ್ಲವನ್ನೂ ಸರ್ಕಾರ ಗಮನದಲ್ಲಿಟ್ಟುಕೊಳ್ಳುತ್ತದೆಂದು ತಿಳಿಸಿ ಈ ಬೇಡಿಕೆಗೆ ಎಲ್ಲ ಮಾನ್ಯ ಸದಸ್ಯರೂ ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಎಲ್ಲರಿಗೂ ಮನದಟ್ಟಾಗುವಂತೆ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉತ್ತರ ಕೊಡುವ ಸಂದರ್ಭದಲ್ಲಿ ಒಂದು ವಿಷಯವನ್ನು ಅವರು ಮರೆತುಬಿಟ್ಟಿದ್ದಾರೆ, ಆದ್ದರಿಂದ ಅದಕ್ಕೆ ಅವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇನೆಂದರೆ ನಮ್ಮ ಬೆಂಗಳೂರು ನಗರಸಭೆಯಲ್ಲಿರತಕ್ಕ ಲೆಕ್ಕ ಪರಿಶೋಧನಾ ವ್ಯವಸ್ಥೆಯಲ್ಲಿ ಬಹಳ ಕುಂಠಿತವಿದೆ. ಅಲ್ಲಿ ಸ್ಟೇಟ್ ಅಕೌಂಟ್ಸ್ ಆಫೀಸರ್‌ರವರು ಲೆಕ್ಕ ಪರಿಶೋಧನೆಯನ್ನು ಮಾಡುತ್ತಾರೆ. ಆದರೆ ೧೯೭೬ರಿಂದ ಇವತ್ತಿನವರೆಗೂ ಅಲ್ಲಿಯ ಲೆಕ್ಕ ಪರಿಶೋಧನೆ ಕಾರ್ಯ ಆಗಿಲ್ಲ. ಆ ಅಧಿಕಾರಿಗೆ ನಗರ ಸಭೆಯವರು ಸುಮಾರು ೨೦ ಲಕ್ಷ ರೂ.ಗಳಷ್ಟು ಲೆಕ್ಕದ ಪುಸ್ತಕಗಳನ್ನೇ ಒದಗಿಸಿಲ್ಲ. ಅಂದರೆ ಅಲ್ಲಿ ಲೆಕ್ಕದಲ್ಲಿ ಸಾಕಷ್ಟು ದುರುಪಯೋಗ ಆಗಿದೆ. ಅಲ್ಲಿರತಕ್ಕ ಅಡ್ಮಿನಿಸ್ಟ್ರೇಟರ್‌ರವರೂ ಕೂಡ ಈ ವರದಿಯನ್ನು ಒಪ್ಪಿಲ್ಲ. ಅಲ್ಲದೆ ೧೯೭೬ ರಿಂದ ಪುನಃ ಲೆಕ್ಕಪತ್ರಗಳನ್ನು ಪೂರೈಸುವ ಬಗ್ಗೆ ಅವರೂ ಕೂಡ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆಂದು ನನಗನಿಸುವುದಿಲ್ಲ. ಅಲ್ಲಿ ಕೋಟ್ಯಾಂತರ ರೂಪಾಯಿಗಳ ವ್ಯವಹಾರವಾಗಿದ್ದರೂ ಇವತ್ತಿನವರೆಗೂ ಅಲ್ಲಿ ಲೆಕ್ಕಪತ್ರಗಳ ಪರಿಶೋಧನೆಯಾಗಿಲ್ಲ ಎಂದರೆ ಅವರು ಏನು ಕೆಲಸಮಾಡುತ್ತಿದ್ದರು ? ಹಣದ ವ್ಯವಸ್ಥೆ ಏನಿದೆ ಅದರ ಲೆಕ್ಕಪತ್ರಗಳ ಮೇಲೆ ಇವರಿಗೆ ಹತೋಟಿ ಇಲ್ಲ ಎಂದರೆ ಇದಕ್ಕೆ ಯಾರು ಹೊಣೆಗಾರರು ? ಇವತ್ತು ಅವರು ತಲೆ ತಪ್ಪಿಸಿಕೊಳ್ಳುವುದಕ್ಕೆ ಹೊರಟಿದ್ದಾರೆ ಅದೇ ರೀತಿ ಸಿ.ಐ.ಟಿ.ಬಿ.ಯಲ್ಲೂ ಕೂಡ ೧೯೭೧ ರಿಂದಲೂ ಸ್ಟೇಟ್ ಅಕೌಂಟ್ಸ್ ಆಫೀಸರ್‌ರವರು ಏನು ವರದಿ ಕೊಟ್ಟಿದ್ದಾರೆ ಆ ಲೆಕ್ಕ ಇದುವರೆಗೂ ಅಸ್ತಿತ್ವಕ್ಕೆ ಬಂದಿಲ್ಲ. ಇದುವರೆಗೂ ಲೆಕ್ಕಪತ್ರವನ್ನು ಯಾರೂ ಪರಿಶೋಧನೆ ಮಾಡಿಲ್ಲ. ಕೋಟ್ಯಾಂತರ ರೂಪಾಯಿಯ ವ್ಯವಹಾರ ಹಾಗಯೇ ಇದೆ ಅಲ್ಲಿನ ಹಣಕಾಸಿನ ವ್ಯವಸ್ಥೆ ಕುಸಿದು ಬಿದ್ದುಹೋಗಿದೆ, ಇದನ್ನು ಯಾವ ರೀತಿ ಸರಿಪಡಿಸುತ್ತೀರಿ ? ನೀವು ಮಾಡತಕ್ಕ ಅಭಿವೃದ್ಧಿ ಕಾರ್ಯಗಳನ್ನು ಯಾವರೀತಿ ಮಾಡುತ್ತೀರಿ ? ಎಂದು ನಾನು ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇಷ್ಟೇ ಅಲ್ಲ, ಇದೇರೀತಿ ರಾಜ್ಯದ ಎಲ್ಲ ಮುನಿಸಿಪಾಲಿಟಿಗಳಲ್ಲೂ ಆಗಿದೆ. ಸ್ಟೇಟ್ ಅಕೌಂಟ್ ಆಫೀಸರ್‌ಗಳು ಏನು ತಮ್ಮ ವರದಿಗಳನ್ನು ಮಾಡಿದ್ದಾರೆ ಅದನ್ನು ಇವತ್ತಿನವರೆಗೂ ಒಪ್ಪಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟ ಲೆಕ್ಕಪತ್ರವನ್ನು ಈ ಸದನದ ಮುಂದೆ ತಂದು ಯಾವರೀತಿ ಪರಿಶೀಲಿಸುತ್ತೇವೋ ಅದೇ ರೀತಿ ಈ ಕಾರ್ಪೊರೇಷನ್ಸ್ ಟ್ರಸ್ಟ್ ಬೋರ್ಡ್‌ಗಳು, ಇವುಗಳಲ್ಲಿ ಆಗತಕ್ಕ ಕೋಟ್ಯಾಂತರ ರೂಪಾಯಿಯ ವ್ಯವಹಾರ ಏನಿದೆ ಅದನ್ನೆಲ್ಲಾ ಈ ಸದನದ ಮುಂದೆ ತಂದು ಪರಿಶೀಲಿಸುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ. ?

ಶ್ರೀ ಐ. ಪಿ. ಡಿ, ಸಾಲಪ್ಪ.– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರಕೊಡುವಾಗ ಬಹಳ ಪ್ರಮುಖವಾದ ವಿಚಾರಗಳಿಗೆ ಸಂಬಂಧಪಟ್ಟಂತೆ ಉತ್ತರವನ್ನು ಕೊಟ್ಟಿದ್ದಾರೆ ನಾವು ನೇರವಾಗಿ ತಮ್ಮ ಸಮಸ್ಯೆಗಳನ್ನು ಅವರ ಗಮನಕ್ಕೆ ತಂದಿದ್ದೇವೆ. ಬೆಂಗಳೂರು ನಗರ ಸಭೆಯಲ್ಲಿ ಅವರೇ ಮಾಡಿದಂಥ ಸಭೆಯಲ್ಲಿ ಒಂದೊಂದು ಕ್ಷೇತ್ರ ದಲ್ಲೂ ೩೧ನೇ ತಾರೀಖಿನೊಳಗಾಗಿ ೧೦–೧೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಏನು ಕೆಲಸ ಮಾಡಿಸಬೇಕೆಂದು ಆದೇಶವನ್ನು ಕೊಟ್ಟರು ಇದು ಆಗಲಿಲ್ಲ. ಕಳೆದ ವರ್ಷ ಕೊಟ್ಟಂಥ ಗ್ರ್ಯಾಂಟ್ ಲ್ಯಾಪ್ಸ್ ಆಗಿಲ್ಲ, ಮುಂದುವರೆದಿದೆ ಎಂದು ಹೇಳುತ್ತಾರೆ. ಈ ವರ್ಷ ಜುಲೈ ಕಳೆದಿದೆ. ಇವತ್ತಿನವರೆಗೂ ಯಾವ ಒಂದು ಕೆಲಸಕ್ಕೂ ಕೈಹಾಕಿಲ್ಲ. ಹೀಗಿರುವಾಗ ಅವರು ಕೊಡತಕ್ಕ ಆಶ್ವಾಸನೆ ಯಾದರೂ ಏನು? ೧೦ವರ್ಷ ೨೦ ವರ್ಷಗಳ ಯೋಜನೆಗಳ ಬಗ್ಗೆ ಇವರು ಹೇಳುತ್ತೀದ್ದಾರೆಯೇ ಹೊರತು ಬಡಬಗ್ಗರ ವಿಚಾರದಲ್ಲಿ ಇವರು ಒಂದು ಮಾತನ್ನೂ ಪ್ರಸ್ತಾಪ ಮಾಡಲಿಲ್ಲವಲ್ಲಾ. ನಾವು ಸಮಾಜವಾದ ತತ್ವವನ್ನು ರಾಜ್ಯಾಂಗಬದ್ಧವಾಗಿ ಒಪ್ಪಿಕೊಂಡಿರತಕ್ಕವರು. ಆದರೆ ತಮ್ಮ ಸಮಾಜವಾದದ ಗತಿ ಏನಾಗಿದೆ. ಬಡಬಗ್ಗರ ವಿಚಾರದಲ್ಲಿ ಒಂದು ವಿಚಾರವನ್ನು ಕೂಡ ಹೇಳಲಿಲ್ಲವಲ್ಲಾ ? ಕಾರಣವಾದರೂ ಏನು ? ಅವರಿಗೆ ಕೆಲಸಮಾಡಿಕೊಡುವುದಕ್ಕೆ ಇಷ್ಟ ಇಲ್ಲವೆ ? ಕೊಳಚೆ ನಿವಾಸಿಗಳು ಸುಮಾರು ೮.೧೦ ಲಕ್ಷ ಜನ ನೀರಿಲ್ಲದೆ, ದೀಪ ಇಲ್ಲದೆ, ರಸ್ತೆ ಇಲ್ಲದೆ, ಚರಂಡಿ ಇಲ್ಲದೆ ಶಾಲೆ ಇಲ್ಲದೆ, ಏನೇನೂ ಇಲ್ಲದೆ ನಿರ್ಗತಿಕರಾಗಿ ಪ್ರಾಣಿಗಿಂತ ಹೀನವಾದ ಜೀವನವನ್ನು ಮಾಡುತ್ತಿದ್ದಾರೆ. ಇವರ ವಿಚಾರದಲ್ಲಿ ಒಂದು ಮಾತನ್ನೂ ಕೂಡ ಸಚಿವರು ಮಾತನಾಡಲಿಲ್ಲವಲ್ಲಾ ಎನ್ನುವ ಒಂದೇ ಒಂದು ದುಃಖ ನನ್ನದು.

೫-೦೦ ಪಿ.ಎಂ.

ಕರ್ನಾಟಕ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಸರ್ವೀಸ್ ಎಂದು ಮಾಡಿ ನೇರವಾಗಿ ಅವರೇ ಸಂಬಳವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿರತಕ್ಕಂಥದ್ದು ಸಮಾಜವಾದಕ್ಕೆ ವಿರುದ್ಧವಾಗಿರುತ್ತದೆ. ಇದು ಸಮಾಜವಾದ ನ್ಯಾಯವಾಗಿರುತ್ತದೆಯೋ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರೇ, ತಾವು ನಿನ್ನೆಯೂ ಕೂಡ ಇದೇ ವಿಚಾರಗಳ ಬಗ್ಗೆ ಮಾತನಾಡಿದ್ದೀರಿ. ಮತ್ತೆ ಅದನ್ನೇ ಹೇಳಿ ಕಾಲಾವಕಾಶವನ್ನು ತೆಗೆದುಕೊಳ್ಳುವುದರಲ್ಲಿ ಯಾವ ಪ್ರಯೋಜನವೂ ಇಲ್ಲ.

ಶ್ರೀ ಐ.ಪಿ.ಡಿ. ಸಾಲಪ್ಪ.—ಮಾನ್ಯ ಸಚಿವರು ಉತ್ತರ ಕೊಟ್ಟಿದ್ದರೆ ಕೇಳುತ್ತಿರಲಿಲ್ಲ.

ಅಧ್ಯಕ್ಷರು.—ತಾವು ಕ್ಲಾರಿಫಿಕೇಶನ್ ಕೇಳಬೇಕೇ ಹೊರತು ಮತ್ತೆ ಭಾಷಣ ಮಾಡುತ್ತಿರುವಿರಲ್ಲ.

ಶ್ರೀ ಎಂ.ಎಂ. ಮಾಳಗಿ.—ಪೌರ ಸಭೆಗಳಲ್ಲಿ ಅಂದರೆ ಧಾರವಾಡ ಕಾರ್ಪೊರೇಷನ್‌ನಲ್ಲಿ ಪಾರ್ಟ್ ಟೈಮ್ ನೌಕರರು ಕೆಲಸ ಮಾಡುತ್ತಿರುತ್ತಾರೆ. ಅವರನ್ನು ಫುಲ್ ಟೈಮ್ ನೌಕರರನ್ನಾಗಿ ಮಾಡಬೇಕೆಂದು ಕೇಳಿಕೊಂಡಿದ್ದೆ, ಅದಕ್ಕೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು.

ಶ್ರೀ ಮುತ್ತಿನಪೆಂಡಿಮಠ್.—ಗದಗ್ ಬೆಟ್ಟಗೇರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡುವ ಬಗ್ಗೆ ಕೇಳಿದ್ದೆ. ಮಾನ್ಯ ಸಚಿವರು ಈ ವಿಚಾರವನ್ನು ಕ್ಯಾಬಿನೇಟ್‌ನಲ್ಲಿ ಇಟ್ಟು ಹಣಕಾಸನ್ನು ಒದಗಿಸುತ್ತೇನೆಂದು ಹೇಳಿರುತ್ತಾರೆ. ಅದನ್ನು ಯಾವಾಗ ಕ್ಯಾಬಿನೇಟ್ ಮುಂದೆ ತರುತ್ತೀರಿ, ಹಣವನ್ನು ಯಾವಾಗ ಮಂಜೂರಾತಿ ಮಾಡುತ್ತೀರಿ. ಇಂಥ ವಿಚಾರಗಳನ್ನು ಕೇಳಿ ಕೇಳಿ ಬೇಜಾರಾಗಿರುತ್ತದೆ. ಮತ್ತೊಂದು ವಿಚಾರವೆಂದರೆ ಹೌಸಿಂಗ್ ಬೋರ್ಡ್ ಗದಗ್‌ನಲ್ಲಿ ಆಗಬೇಕೆಂದು ಕೇಳಿದ್ದೇವೆ. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ತಿಳಿಸಬೇಕು.

SRI K. BHASKAR NAIDU.—In asking some questions, perhaps, I have to go a little deeper into the matter.

MR. SPEAKER.—Please do not make a speech again.

SRI K. BHASKAR NAIDU.—Sir, it will be more than what is a question. First of all, the very Minister who should be here and who has to make a joint statement, is not here, *i.e.*, the Finance Minister. I have been tossed like a foot-ball from one end to the other whenever I go to him he says, you go to Finance Minister and approch him. Whenever I go to the Finance Minister, he says, you ask Municipal Administration Minister. What I want is, just drinking water supply. I want a definite assurance. Let him say "Mr. Naidu, I am putting this subject in the Cabinet on so and so day and I am coming and laying the foundation stone along with the Chief Minister to Bellary". For the last three years I am asking water: Time and again, I am requesting the hon. Minister for Municipal Administration for this. His port-folio may change and somebody may come. I am asking and I am begging for drinking water supply; which is the very essence of life. I want only a specific answer for this. Sir, you said, you ask a specific question.

Now, I am asking a specific question. On what date are you going to start this work ; that is what I want. For the last three years, I have been tossed from one end to the other like a football. We worked out a scheme on no-profit and no-loss basis and have passed a resolution to this effect. According to our scheme, every house a resolution to this ecect. According to our scheme, every house in a Municipal area will get drinking water and we charge them 10 rupees. But, nothing had happened to that resolution because first of all that has to come from the Divisional Commissioner's office. People are paying money, but they are not getting water We have paid a tax of Rs. 29 lakhs. Is it a mistake of us ? It is your mistake. We have not come across in the way. In the Governor's speech they have said that they are going to take 8 districts for the distribution and supply of water. Till today, it has not been implemented. Every time, they are saying, it needed some amendment or some Act. They have brought all Acts, but they could not see the light of the day.

Sir, I am not trying to make a speech. But. I want a categorical answer on this point. Water, water, drinking water supply for Gadag and Bellary.

ಕುಮಾರಿ ಎಸ್. ಪ್ರಮಿಳಾ.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರು ನಗರಕ್ಕೆ ಒಂದು ಸುಂದರ ಲೋಕವನ್ನು ತಂದು ಕೊಡುತ್ತೇನೆಂದು ಹೇಳಿದ್ದು ಪತ್ರಿಕೆಯಲ್ಲಿ ಬಂದಿರುತ್ತದೆ. ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಎಷ್ಟು ದಿವಸಗಳಲ್ಲಿ ತರುತ್ತೀರಿ ದಯುವಿಟ್ಟು ತಿಳಿಸಬೇಕು ? ಎರಡನೆಯುದಾಗಿ ಪ್ರತಿಯೊಂದು ದೇಶದಲ್ಲಿ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್ ಇರುವುದನ್ನು ನೋಡಿದ್ದೇವೆ. ಅದೇ ರೀತಿಯಲ್ಲಿ ಬೆಂಗಳೂರು ನಗರಕ್ಕೂ ಕೂಡ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನ ಅವಶ್ಯಕತೆ ಇರುತ್ತದೆ. ಅದನ್ನೂ ಕೂಡ ದಯುವಿಟ್ಟು ಆಗುಮಾಡಿ ಕೊಡುತ್ತೀರ. ಇದಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕಂಥ ಜಾಗ ಕೂಡ ಡಬ್ಬಲ್‌ರೋಡಿನಲ್ಲಿ ಇರತಕ್ಕಂಥ ಕಾರ್ಪೊರೇಷನ್ ಜಾಗದಲ್ಲಿ ಇರುತ್ತದೆ. ಇಲ್ಲಿರತಕ್ಕಂಥ ಜಾಗವನ್ನು ತೆಗೆದುಕೊಂಡು ತಕ್ಷಣ ಮಾಡುವುದಕ್ಕೆ ಪ ಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ. ಮೂರನೆಯದಾಗಿ ಬೆಂಗಳೂರು ನಗರ ವ್ಯಾಪ್ತಿಗೆ ಒಳಪಟ್ಟಂತೆ ಫುಟ್‌ಪಾತ್ ಮೇಲೆ ಅಂಗಡಿಗಳು ಬಂದಿರುತ್ತವೆ. ಅಲ್ಲದೆ ಅಕ್ರಮವಾಗಿ ಬೆಂಗಳೂರು ನಗರದ ರಸ್ತೆ ಬದಿಗಳಲ್ಲಿ ಜನರು ವಾಸ ಮಾಡತಕ್ಕಂಥದ್ದು ಇರುತ್ತದೆ. ಫುಟ್‌ಪಾತ್‌ನಲ್ಲಿರತಕ್ಕಂಥ ಅಂಗಡಿಗಳನ್ನು ಮತ್ತು ಜನರು ವಾಸ ಮಾಡತಕ್ಕಂಥದ್ದನ್ನು ತಪ್ಪಿಸುವುದಕ್ಕೆ ಏನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೀರಿ. ದಯುವಿಟ್ಟು ತಿಳಿಸಬೇಕು.

ಕೊನೆಯುದಾಗಿ ಬೆಂಗಳೂರು ನಗರದಲ್ಲಿ ೧೨ ಕ್ಷೇತ್ರಗಳು ಇರುತ್ತವೆ. ೧೨ ಅಸೆಂಬ್ಲಿ ಕನ್‌ಸ್ಟಿಟ್ಯೂಯೆನ್ಸಿಗಳು ಇರುತ್ತವೆ. ೧೯೭೭ನೇ ಇಸವಿಯಲ್ಲಿ ಚುನಾವಣೆ ನಡೆದಂಥ ಸಂದರ್ಭದಲ್ಲಿ ಬಿನ್ನಿಮಿಲ್ ಕ್ಷೇತ್ರಕ್ಕೆ ಕಾರ್ಪೊರೇಷನ್‌ನವರು ಅತಿ ಹೆಚ್ಚಿನ ಹಣವನ್ನು ವಿನಿಯೋಗ ಮಾಡಿದ್ದಾರೆ. ಬೇರೆ ಕ್ಷೇತ್ರಗಳಿಗೆ ಹಣವನ್ನು ಖರ್ಚು ಮಾಡಿದಿಲ್ಲ. ಅಭಿವೃದ್ಧಿಯನ್ನೂ ಮಾಡಿದಿಲ್ಲ. ಬೆಂಗಳೂರಿನ ೧೨ ಕ್ಷೇತ್ರಗಳ ಹಣವನ್ನು ಕಾರ್ಪೊರೇಷನ್‌ನವರು ಸಂಪೂರ್ಣವಾಗಿ ಆ ಒಂದು ಕ್ಷೇತ್ರಕ್ಕೆ ವಿನಿಯೋಗಿಸಿರುತ್ತಾರೆ. ಆದರಿಂದ

ಮೂರು ವರ್ಷಗಳಿಂದ ಅಭಿವೃದ್ಧಿಯಾಗದೇ ಇರತಕ್ಕಂಥ ಪ್ರದೇಶಗಳಿಗೂ ಅಭಿವೃದ್ಧಿ ಕಾರ್ಯಕ್ರಮ ಗಳನ್ನು ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಪ್ರಶ್ನೆಗಳನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಲಿಂಗಸಗೂರು ಕುಡಿಯುವ ನೀರಿನ ಬಗ್ಗೆ ಏನೇನು ಹೇಳಲಿಲ್ಲ. ದಯವಿಟ್ಟು ಅದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು. ಅದಲ್ಲದೆ ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಪುರಸಭೆಗಳಿಗೆ ಆರ್ಥಿಕ ಸೌಲಭ್ಯವನ್ನು ಒದಗಿಸಬೇಕು. ಕಾರ್ಮಿಕರ ಹಿತದೃಷ್ಟಿಯಿಂದ ಬರಗಾಲ ಕಾಮಗಾರಿಗಳಲ್ಲಿ ಉದ್ಯೋಗ ದೃಢೀಕರಣದ ಮುಖಾಂತರ ಕೆಲಸಗಳನ್ನು ಒದಗಿಸಲು ರಸ್ತೆ, ಕೆರೆಗಳ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಬೇಕು. ಮತ್ತು ಮುನಿಸಿಪಾಲಿಟಿಗಳಿಗೆ ಒಬ್ಬ ಅಸಿಸ್ಟೆಂಟ್ ಎಂಜಿನಿಯರ್ ಮತ್ತು ಒಬ್ಬ ಜೂನಿಯರ್ ಇಂಜಿನೀಯರನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಇ. ರಾಮಯ್ಯ.—ಮಾನ್ಯ ಸಚಿವರು ಪೀಪಲ್ ಹೌಸಿಂಗ್ ಸ್ಕೀಮ್ ಬಗ್ಗೆ ತಮ್ಮ ನಿಲುವು ಏನು ಎನ್ನುವುದರ ಬಗ್ಗೆ ಖಚಿತವಾಗಿ ಹೇಳಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಮನೆಯಿಲ್ಲದವರಿಗೆ ಪ್ರತಿಯೊಬ್ಬರಿಗೂ ಮನೆಯನ್ನು ಕಟ್ಟಿಕೊಳ್ಳಲು ಉಚಿತವಾಗಿ ಸಾಲವನ್ನು ಕೊಡುತ್ತಿರುತ್ತಾರೆ. ಅದೇ ರೀತಿಯಲ್ಲಿ ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ಸಾಲವನ್ನು ಕೊಟ್ಟಿಲ್ಲ ಮತ್ತು ಸೈಟುಗಳನ್ನೂ ಕೊಟ್ಟಿಲ್ಲ ಆ ಒಂದು ವ್ಯವಸ್ಥೆಯ ಬಗ್ಗೆ ಏನು ಮಾಡುತ್ತೀರಿ. ಪೀಪಲ್ ಹೌಸಿಂಗ್ ಸ್ಕೀಮ್ ಎಂದು ಹೇಳಿ ಮುನಿಸಿಪಾಲಿಟಿಗಳಿಗೆ ಗ್ರಾಂಟ್ ಮೂಲಕ ೮೨ ½ ಪರ್ಸೆಂಟ್ ಹಣವನ್ನು ಕೊಡುತ್ತೇವೆಂದು ಹೇಳಿದಂಥ ಪಾಲಿಸಿಯನ್ನು ಈವತ್ತಿನವರೆಗೂ ಇಂಪ್ಲಿಮೆಂಟ್ ಮಾಡಿಲ್ಲ, ಇದರ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಇನ್ನು ಎರಡನೆಯದಾಗಿ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನಲ್ಲಿ ಡಿ.ಸಿ. ಅವರು ಛೇರ್ಮನ್ ಆಗಿದ್ದಾರೆ. ಇದರಿಂದ ಕೆಲಸ ಕಾರ್ಯಗಳಿಗೆ ಬಹಳ ತೊಂದರೆಯಾಗಿದೆ. ಕೆಲಸಗಳು ಸ್ಥಗಿತಗೊಂಡಿದೆಯೆಂದೂ, ಸಿ.ಐ.ಟಿ ಬಿ.ಯನ್ನು ಯಾವಾಗ ಕಾನ್‌ಸ್ಟಿಟ್ಯೂಟ್ ಮಾಡುತ್ತೀರೆಂದು ಹೇಳಬೇಕು. ಇನ್ನು ಮೂರನೆಯದಾಗಿ. ಎಂಟ್ರಿ ಟ್ಯಾಕ್ಸ್. ಅಕ್ಟ್ರಾಯ್ ತೆಗೆದಿದ್ದರಿಂದ. ಸಂಬಂಧಪಟ್ಟ ಮುನಿಸಿಪಾಲಟಿಗೆ ಹಣವನ್ನು ಒದಗಿಸಲು ಎಂಟ್ರಿ ಟ್ಯಾಕ್ಸನ್ನು ಜಾರಿಗೆ ತರಲಾಯಿತು. ಈಗ ಈ ಎಂಟ್ರಿ ಟ್ಯಾಕ್ಸ್ ನೇರವಾಗಿ ಸಂಬಂಧಪಟ್ಟ ಮುನಿಸಿಪಾಲಿಟಿಗಳಿಗೆ ನೇರವಾಗಿ ಬರುತ್ತಾ ಇಲ್ಲ. ಮೊದಲು ಫೈನಾನ್ಸ್‌ಗೆ ಹೋಗಿ ಅಲ್ಲಿಂದ ಹಣ ಇಲ್ಲಿಗೆ ಬರಬೇಕಾಗಿದೆ. ಆದ್ದರಿಂದ ಎಂಟ್ರಿ ಟ್ಯಾಕ್ಸ್ ನೇರವಾಗಿ ಸಂಬಂಧಪಟ್ಟ ಮುನಿಸಿಪಾಲಿಟಿಗೆ ಬರತಕ್ಕ ಏರ್ಪಾಡಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಗೂಡೂಸಾಬ್.— ಅಧ್ಯಕ್ಷರೆ. ನಮ್ಮ ಊರಿನಲ್ಲಿ ಎರಡು ಮೋಟಾರ್‌ಗಳು ಕೆಟ್ಟು ಹೋಗಿದ್ದು ಅವುಗಳ ದುರಸ್ತಿಗೆ ಮೂರೂವರೆ ಲಕ್ಷ ರೂಪಾಯಿ ಬಡ್ಜೆಟ್‌ನಲ್ಲಿ ಪ್ರೊವೈಡ್ ಆಗಿದ್ದರೂ ಸಹಾ ಇನ್ನೂ ರಿಪೇರಿಯಾಗಿಲ್ಲ. ಇದರಿಂದಾಗಿ ಪೊಂಪಿನಲ್ಲಿ ನೀರು ಬರುತ್ತಿಲ್ಲ. ಯಾವ ಎಂಜಿನಿಯರ್‌ಗೆ ಮನವಿ ಮಾಡಿಕೊಂಡರೂ ಏನೂ ಕ್ರಮ ತೆಗೆದು ಕೊಂಡಿಲ್ಲ. ತುಂಗಭದ್ರಾ ನೀರು ಇದೆ ಎಂದು ಹೇಳುತ್ತಾರೆ, ಆದರೆ ಅದರ ನೀರು ಟ್ರೆಂಚ್ ಎಂಡರ್ಸ್‌ಗೇಸಿಗುತ್ತಾ ಇಲ್ಲ. ಬೋರ್‌ವೆಲ್‌ಗಳನ್ನು ಹಾಕಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪರಪ್ಪ ಕಳ್ಳೀಗುಡ್ಡ.— ಅಧ್ಯಕ್ಷರೇ, ನಗರಾಡಳಿತ ವ್ಯವಸ್ಥೆ ಎಂತಹದ್ದು ಎಂಬುದನ್ನು ಸ್ವಲ್ಪ ಹೇಳುತ್ತೇನೆ. ಬಾಗಲಕೋಟೆಯಲ್ಲಿ ಶಾಲಾ ಕಟ್ಟಡ ಬರೀ ಅರ್ಧಕ್ಕೇ ನಿಂತಿದೆ. ಅದು ಮಳೆಗಾಳಿಗೆ ಸಿಲುಕಿ ಅರ್ಧ ಬಿದ್ದು ಹೋಗಿದೆ. ಬಾಗಲಕೋಟೆಯನ್ನು ಸರಿಪಡಿಸತಕ್ಕದ್ದು ಮಾನ್ಯ ಮಂತ್ರಿಗಳ ಕೈಯಲ್ಲಿ ಇದೆ. ಯಾವ ಒಂದು ಅಭಿವೃದ್ಧಿ ಕಾರ್ಯಗಳೂ ಸರಿಯಾಗಿ ಆಗಿಲ್ಲ. ಶಾಲಾ ಕಟ್ಟಡ ಏಕೆ ಅರ್ಧಕ್ಕೇ ನಿಂತಿದೆ? ಅಧಿಕಾರಿಗಳು ಬೆಂಗಳೂರಿನಿಂದ ಇಲ್ಲಿಗೆ ಬರುತ್ತಾರೆ ಹಾಗೂ ಹೋಗುತ್ತಾರೆ. ಟಿ. ಎ., ಡಿ. ಎ. ತೆಗೆದುಕೊಳ್ಳುತ್ತಾರೆ. ಈ ಕಾಂಟ್ರಾಕ್ಟ್ಸ್ ಬಗ್ಗೆ ಪೂರ್ಣ ಪರಿಶೀಲನೆಯಾಗಬೇಕು. ಬಾಗಲಕೋಟೆಯಲ್ಲಿ ಎಲೆಕ್ಷನ್ ಆಗಿ ಎರಡೂವರೆ ವರ್ಷ ಆಯಿತು. ಮುನಿಸಿಪಾಲಿಟಿ ಅಧಿಕಾರಿಗಳಿಗೆ ಇನ್ನೂ ಅಧಿಕಾರ ಬಂದಿಲ್ಲ. ಇನ್ನಾದರೂ ಅಧಿಕಾರವನ್ನು ಕೊಡುತ್ತೀರಾ? ಈ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಬೇಕು.

SRI M. H. BEKINALKAR .— The Hon. Minister while making a reference with regard to a drinking water project at Bijapur (estimated cost Rs 87 lakhs) expressed financial difficulty. Would it be possible for him to lay the foundation stone atleast by the end of this year? Secondly, I did not get any answer from the Hon. Minister regarding decentralisation of powers in respect of autonomous bodies I would like the Hon. Minister to clarify these points.

ಶ್ರೀ ವಿ ಎ. ಮತ್ತಿಕಟ್ಟಿ.— ಮೂಲಭೂತವಾಗಿ ಎರಡು ವಿಚಾರಗಳ ಬಗ್ಗೆ ನಾನು ತಿಳಿಯಬೇಕಾಗಿದೆ. ಬಹಳ ಮುನಿಸಿಪಾಲಿಟಿಗಳು ಅರ್ಥಕವಾಗಿ ಹಿಂದುಳಿದಿದ್ದು ಅಲ್ಲಿನ ನೌಕರರಿಗೆ ಪಗಾರವನ್ನು ಕೊಡತಕ್ಕಂತಹ ಪರಿಸ್ಥಿತಿಯಲ್ಲೂ ಇಲ್ಲವಾಗಿದೆ. ಇದರಿಂದಾಗಿ ಊರಿನ ಪುರೋಭಿವೃದ್ಧಿ ಕೆಲಸ ದೂರ ಉಳಿದಂತೆಯೇ ಆಯಿತು. ಆದ್ದರಿಂದ ಸರ್ಕಾರ ಏನಾದರೂ ಯೋಜನೆ ಹಾಕಿಕೊಂಡು ಮುನಿಸಿಪಾಲಿಟಿಗಳು ಆರ್ಥಿಕವಾಗಿ ಸಫಲಗೊಳ್ಳಲು ಏನಾದರೂ ಕಾರ್ಯಕ್ರಮ ಕೈಗೊಳ್ಳಬೇಕು. ಶಾಪಿಂಗ್ ಕಾಂಪ್ಲೆಕ್ಸ್‌ಗಳನ್ನು ಮಾಡಿ ಅದರಿಂದ ಬರುವ ಆದಾಯದಿಂದಲಾದರೂ ನಗರದ ಪುರೋಭಿವೃದ್ಧಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ. ಈ ಬಗ್ಗೆ ಸರ್ಕಾರ ಕೆಲಸ ಮಾಡಬೇಕೆಂದು ನನ್ನ ಅಭಿಪ್ರಾಯವನ್ನು ಇಟ್ಟಿದ್ದೇನೆ.

ಶ್ರೀ ಬಸವರಾಜ್ ಎಚ್. ಪಾಟೀಲ್ .— ಬಿಜಾಪುರ ನಗರ ಸಭೆಯ ವ್ಯಾಪ್ತಿಯಲ್ಲಿ ಎರಡು ಲಂಬಾಣಿ ತಾಣಗಳು ಬರುತ್ತವೆ. ಅವರಿಗೆ ಸರಿಯಾದ ನಿವೇಶನ ಇಲ್ಲ, ಶಾಲಾ ಕಟ್ಟಡವಿಲ್ಲ. ಇವು ಟೌನ್‌ನಲ್ಲಿ ಇರುವುದರಿಂದ ತಾಲ್ಲೂಕು ಬೋರ್ಡ್ ಮುಖಾಂತರ ಕೆಲಸಕಾರ್ಯಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ. ಮುನಿಸಿಪಾಲಿಟಿಯಲ್ಲಿ ಗ್ರಾಂಟ್ ಇಲ್ಲದಿರುವುದರಿಂದ ಈ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಕಷ್ಟವಾಗಿದೆ. ಶಾಲಾ ಕಟ್ಟಡದ ವ್ಯವಸ್ಥೆ ಅವರಿಗೆ ಸರಿಯಾಗಿ ಇಲ್ಲವಾಗಿದೆ. ದಯಮಾಡಿ ಈ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI P.K RANGANATHA .— The disposal of Corporation quarters is pendi g since years. I would like the Hon. Minister to categorically state, whether it would be possible for him to dispose them off atleast by 15th August, 1981?

ಶ್ರೀ ಧರ್ಮಸಿಂಗ್ .— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಒಂದು ಬಹಳ ಮಹತ್ವವಾದ ವಿಚಾರವನ್ನು ಇಟ್ಟಿದ್ದಾರೆ. ಕಾರ್ಪೊರೇಷನ್‌ನಲ್ಲಿ ಬಹಳದಿವಸಗಳಿಂದ ಆಡಿಟ್ ಆಗಿಲ್ಲ, ಲೆಕ್ಕಪತ್ರಗಳು ಸರಿಯಾಗಿಲ್ಲವೆಂದು ಹೇಳಿದ್ದಾರೆ. ಅವರು ಲೆಕ್ಕಪತ್ರ ಸಮಿತಿಯ ಅಧ್ಯಕ್ಷರಾಗಿದ್ದು ಅವರು ಎಲ್ಲಾ ಕಡೆ ವಿಸಿಟ್ ಮಾಡಿ ಬಂದಿದ್ದಾರೆ. ನಾನು ಇವತ್ತಿನ ದಿವಸ ಹೇಳಬಯಸುತ್ತೇನೆ. ಏನೇನು ಆಡಿಟ್ ರಿಪೋರ್ಟ್ ಇದೆ ಅದನ್ನು ಎಕ್ಸಾಮಿನ್ ಮಾಡಲಾಗುತ್ತಿದೆ ಎಂದು. ಇದರಲ್ಲಿ ಏನಾದರೂ ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಮೂಲಕ ಹೇಳಬಯಸುತ್ತೇನೆ.

MR. SPEAKER.— The hon. Member says that the accounts have not been audited since 1976.

ಶ್ರೀ ಧರ್ಮಸಿಂಗ್ .—ಅದನ್ನು ನೋಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ...

MR. SPEAKER.— Every year accounts should be audited.

ಶ್ರೀ ಧರ್ಮಸಿಂಗ್ .— ಅವರ ಮೇಲೆ ನೋಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಇನ್ನು ಮಾನ್ಯ ಸಾಲಪ್ಪನವರು ಪೌರಕಾರ್ಮಿಕರ ಬಗ್ಗೆ ಏನೂ ಕೆಲಸ ಮಾಡಿಲ್ಲವೆಂದು ಹೇಳಿದ್ದಾರೆ. ಕೊಳಚೆ ಪ್ರದೇಶದಲ್ಲಿ ಯಾವ ಕಾರ್ಯಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ಸುಮಾರು 10 ಸಾವಿರ ಟೆನಮೆಂಟ್ಸ್ ಕಟ್ಟಿಸುವ ಕಾರ್ಯಕ್ರಮ ಕೈಗೊಳ್ಳಬೇಕಾಗಿದೆ. ಗುಲ್ಬರ್ಗ, ಬೀದರ್, ಬಳ್ಳಾರಿಯಲ್ಲಿ ತೆಗೆದುಕೊಂಡಿದ್ದೇವೆ. ಎಲ್ಲಾ ಕಡೆ ಟೆನಮೆಂಟ್ಸ್ ಕಟ್ಟಿಸಬೇಕಾಗುತ್ತದೆ. ಸಾಕಷ್ಟು ಸ್ಲಮ್

ಗಳನ್ನು ಇಂಪ್ರೂವ್‌ಮೆಂಟ್ ಮಾಡಲಾಗಿದೆ. ಎಲ್ಲಾ ಕಾರ್ಯಗಳೂ ಪೂರ್ಣ ಆಗಿದೆ ಎಂದು ನಾನು ಹೇಳಲಿಲ್ಲ. ಪೌರ ಕಾರ್ಮಿಕರ ಹಿತರಕ್ಷಣೆಬಗ್ಗೆ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಸಾಲಪ್ಪ ಕಮಿಟಿಯ ರಿಪೋರ್ಟನ್ನು ಒಪ್ಪಿಕೊಂಡಿದ್ದೇವೆ. ಹಾಗೂ ಸದಸ್ಯರು ವಾಟರ್ ಸಪ್ಲೈ ಬೋರ್ಡ್ ಬಗ್ಗೆ ಹೇಳಿದ್ದಾರೆ. ೧೮ ಪರ್ಸೆಂಟ್ ಹಣ ಸಮರ್ಪಕವಾಗಿ ಖರ್ಚಾಗಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ಈಗ ಖರ್ಚು ಮಾಡುತ್ತಿದ್ದೇವೆ.

ಪೆನ್‌ಷನ್ ಕೊಡುವ ಬಗ್ಗೆ ಕೂಡ ಸಾಕಷ್ಟು ಹಣವನ್ನು ಪ್ರೊವೈಡ್ ಮಾಡಿ ಖರ್ಚುಮಾಡಿದ್ದೇವೆ. ಅದು ಅವರಿಗೆ ಗುರುತಿದೆ. ಹಲವು ಕಡೆಗಳಲ್ಲಿ ಮುನಿಪಾಲಿಟಿಗಳಿಗೆ ಹಣ ಸಿಕ್ಕುತ್ತಿಲ್ಲ, ಆಕ್ಟ್ರಾಯಿ ತೆಗೆದ ನಂತರ ಕಾಂಪೆನ್‌ಸೇಷನ್ ಮುಟ್ಟುತ್ತಿಲ್ಲ, ಗ್ರಾಂಟ್ ವೇಳೆಗೆ ಸಿಗದೆ ಬಹಳ ತ್ರಾಸ್ ಆಗುತ್ತಿದೆ ಎಂದು ಹೇಳಿದರು. ಅವರು ಮೇಲಿಂದ ಮೇಲೆ ಬಂದು ಪ್ರಸ್ತಾಪ ಮಾಡುತ್ತಿರುತ್ತಾರೆ ಅದಕ್ಕೆ ಪರಿಹಾರ ಕೂಡ ಮಾಡಿಕೊಡುತ್ತಿದ್ದೇನೆ. ಇದರ ಬಗ್ಗೆ ಸಾಕಷ್ಟು ಅನುಕಂಪ ತೋರಿಸಿಲ್ಲ ಇನ್ನ ತಕ್ಕದ್ದು ಪ್ರಸ್ತಾಪ ಮಾಡಿದ್ದಾರೆ. ಹಾಗೇನು ಇಲ್ಲವೆಂದು ಹೇಳುತ್ತಿದ್ದೇನೆ. ಭಾಸ್ಕರನಾಯ್ಡುರವರು ಸ್ಪೆಸಿಫಿಕ್ ಆಗಿ ವಾಟರ್ ಸಪ್ಲೈ ಬಗ್ಗೆ ಹೇಳಿದ್ದಾರೆ. ಇದಕ್ಕೂ ಮೊದಲು ಅವರಿಗೆ ಗುರುತಿದೆ ಪ್ರಸ್ತಾಪ ಮಾಡಿದ್ದೇವೆ, ತೀರ್ಮಾನಕ್ಕೆ ಬಂದಿದ್ದೇವೆ ಮಾತನಾಡಿದ್ದೇವೆ. ಗದಗದ ಮುತ್ತಿನಪೆಂಡಿಮಠ ಅವರು ಮತ್ತು ಭಾವಿಯವರು ಹೇಳಿದ್ದಾರೆ ಈಗ ಗದಗ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ೭.೪೦ ಲಕ್ಷ ರೂಪಾಯಿಗಳನ್ನು ಬಳ್ಳಾರಿ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಸುಮಾರು ೩ ಕೋಟಿಗಳನ್ನು ಅಂದಾಜು ಮಾಡಿದ್ದೇವೆ. ಯಾವುದಾದರೂ ಸ್ಕೀಮ್ ಮಾಡಬೇಕಾದರೆ ನಮ್ಮ ಹಣ ಜೊತೆಗೆ ಎಲ್.ಐ.ಸಿ. ಅವರದ್ದು ನೋಡಿ ಮಾಡಬೇಕಾಗುತ್ತದೆ. ಹೊಸನಗರದಾಗಲೀ ಸಾಗರದಾಗಲಿ ಅಥವಾ ಭಾಲ್ಕಿಯದಾಗಲೀ ಯಾವುದೇ ಆಗಲಿ ನಾವು ಹಣಕಾಸಿನ ಸ್ಥಿತಿಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ. ಗೂಡುಸಾಬ್‌ರವರು ಪ್ರಪ್ರಥಮವಾಗಿ ಹೇಳುತ್ತಿದ್ದಾರೆ, ಅವರು ಎಷ್ಟೋ ಸಲ ಭೇಟಿಯಾದಾಗ ಬೇರೆ ವಿಷಯಗಳನ್ನು ಹೇಳಿದ್ದಾರೆ ಎಂದೂ ಕೂಡ ಈ ವಿಷಯವನ್ನು ಹೇಳಲಿಲ್ಲ. ಹೊಸಪೇಟೆಗೆ ನೀರನ್ನು ಕೊಡಲಿಕ್ಕೆ ಐ.ಆರ್.ಡಿ.ಪಿ. ಪ್ಲಾನ್‌ನಿಂದ ದುಡ್ಡು ತಂದು ಕೊಟ್ಟಿದ್ದೇವೆ. ಸಾಕಷ್ಟು ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆಂದು ಗೂಡುಸಾಬ್‌ರವರಿಗೆ ನೀರನ್ನು ಕೊಡುತ್ತೇವೆ. ಬಳ್ಳಾರಿ ಮತ್ತು ಗದಗ ಕೆಲಸ ಆಗುತ್ತಿದೆ, ಪ್ರಯತ್ನ ಮಾಡುತ್ತಿದ್ದೇವೆ. ಸರ್ಕಾರ ಯಾವುದೇ ತರಹ ಭರವಸೆಯನ್ನು ಕೊಟ್ಟರೆ ಹೇಳುವ ವೇಳೆಗೆ ಅಷ್ಟೇ ಜವಾಬ್ದಾರಿಯಿಂದ ಹೇಳುತ್ತೇವೆ, ಮಾನ್ಯ ಸದಸ್ಯರು ಕೂಡ ಆಗುರವಾಗಿ ಹೇಳುತ್ತಾರೆ ಎಂದು ತಿಳಿದುಕೊಳ್ಳುವುದು ಬೇಡ. ಎಲ್ಲಾ ಕೆಲಸಗಳಲ್ಲೂ ಕೂಡ ಪರಿಶೀಲನೆ ಮಾಡುತ್ತಿದ್ದೇವೆ, ಮಾಡಿದ್ದೇವೆಂದು ಸಾಕಷ್ಟು ಹೇಳಿದ್ದೇನೆ. ಕಳೆದ ವರ್ಷ ಹೇಳಿದ ಕೆಲಸಗಳನ್ನೆಲ್ಲಾ ಮಾಡಿದ್ದೇವೆ. ಇನ್ನು ಹೆಚ್ಚಿನ ಕೆಲಸ ಕಾರ್ಯಗಳು ಆಗಬೇಕು. ಗದಗ ಬೇಟಗೇರಿಯಾಗಲೀ ಬಳ್ಳಾರಿ ಹೊಸನಗರವಾಗಲೀ ಎಲ್ಲಾ ಕೂಡ ವಾಟರ್ ಸಪ್ಲೈ ಸ್ಕೀಮ್ ಕೆಲಸ ಮಾಡುತ್ತಿದ್ದೇವೆ. ಹೊಸಪೇಟೆಗೆ ೮೭ ಲಕ್ಷ ಇದೆ ಆದರೆ ಇವತ್ತು ಎಲ್ಲಾ ಕಡೆ ಏನು ಆಗುತ್ತಿದೆ ಮುನಿಸಿಪಲ್ ಎಲೆಕ್ಟೆಡ್ ಬಾಡಿ ಇದೆ. ಇವತ್ತು ಬಿಜಾಪುರದಲ್ಲಿ ಎಲೆಕ್ಟೆಡ್ ಬಾಡಿಯವರು ಒಪ್ಪುವುದಿಲ್ಲ. ಇವತ್ತಿನ ದಿವಸ ೮೭ ಲಕ್ಷ ಇಂಪ್ರೂವ್‌ಮೆಂಟ್ ಸ್ಕೀಮ್ ಮಾಡಲಿಕ್ಕೆ ಹೊರಟಾಗ ಎಲೆಕ್ಟೆಡ್ ಬಾಡಿ ಒಪ್ಪಬೇಕಾಗಿದೆ ಶಿವಮೊಗ್ಗದಲ್ಲಿ ೧೦೦ ಲಕ್ಷ ತೆಗೆದುಕೊಳ್ಳುತ್ತಿದ್ದೇವೆ ಅಲ್ಲಿ ಎಲೆಕ್ಟೆಡ್ ಬಾಡಿ ಇದೆ ಅದು ಒಪ್ಪಿಕೊಳ್ಳುತ್ತಿದೆ. ನಾವು ಯಾವುದೇ ಸ್ಕೀಮ್‌ನ್ನು ಮುನಿಪಾಲಿಟಿಗೆ ಮಾಡಿದರೆ, ಒಳಚರಂಡಿ ವ್ಯವಸ್ಥೆಗೆ ಸಹಾಯ ಮಾಡಬೇಕಾದರೆ ಮುನಿಸಿಪಲ್ ಎಲೆಕ್ಟೆಡ್ ಬಾಡಿಯವರು ಚರ್ಚೆಮಾಡಿ ನಿರ್ಣಯ ಮಾಡಿ ನಮಗೆ ಕಳುಹಿಸಬೇಕಾಗುತ್ತದೆ. ಎಲ್ಲಾ ಕಡೆ ಎಲೆಕ್ಟೆಡ್ ಬಾಡಿ ಇರಬೇಕು ತಮ್ಮೆಲ್ಲರಿಗೂ ಇರುವ ರೀತಿಯಲ್ಲಿ ಸರ್ಕಾರಕ್ಕೂ ಕೂಡ ಅನುಕಂಪ ಇದೆ, ಆ ರೀತಿ ಮಾಡುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಹೇಳಿದ್ದಾರೆ. ಬಿಜಾಪುರದಲ್ಲಿ ಲೋ ಕಾಸ್ಟ್ ಹೌಸಿಂಗ್ ಸ್ಕೀಮ್‌ನ ಬಗ್ಗೆ ಹೇಳಿದ್ದಾರೆ, ಮಾನ್ಯ ರಾಮಯ್ಯನವರು ಕೂಡ ಹೇಳಿದ್ದಾರೆ. ಇವತ್ತು ೪ ಸಾವಿರ ರೂಪಾಯಿಗಳಿಗೆ ಜನತಾ ಮನೆಗಳನ್ನು ಕೊಡುತ್ತಿದ್ದೇವೆ. ಇನ್ನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ, ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಬಿ. ಇ. ರಾಮಯ್ಯ.—ಮನೆಗಳನ್ನು ಕೊಡುತ್ತಿದ್ದೀರಿ. ಅಲ್ಲಿ ಸ್ಥಳವೇ ಇಲ್ಲವಲ್ಲ. ಸ್ಥಳವಿಲ್ಲದಿದ್ದರೆ ಹಣ ತೆಗೆದುಕೊಂಡು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಧರ್ಮಸಿಂಗ್.—ಸ್ಥಳವನ್ನು ಕೊಡಿಸಲಿಕ್ಕೆ ಸ್ಥಳೀಯ ಶಾಸಕರು ಪ್ರಯತ್ನ ಮಾಡಬೇಕಾಗುತ್ತದೆ. ಹೊಳೇನರಸೀಪುರದಲ್ಲಿ ೧೯೭೩ ರಿಂದ ೧ ಎಕರೆ ೨೬ ಗುಂಟೆ ಜಮೀನಿನ ವ್ಯವಹಾರ ಹೈಕೋರ್ಟ್‌ಗೆ

ಹೋಗುತ್ತಿತ್ತು ಬರುತ್ತಿತು ಈಗ ಅಲ್ಲಿ ೪೦ ಸೈಟುಗಳನ್ನು ಮಾಡಿ ಕೊಡಲಾಗಿದೆ. ಯಾರು ಸೈಟ್‌ಲೆಸ್ ಪೀಪಲ್ ಇರುತ್ತಾರೆ ಅಂತಹವರಿಗೆ ಸೈಟುಗಳನ್ನು ಕೊಡುವ ಬಗ್ಗೆ ಕೆಲವರು ಮತ್ತು ಲ್ಯಾಂಡ್‌ಲಾರ್ಡ್‌ಗಳಿಂದ ಎಡರು ತೊಡರುಗಳು ಬರುತ್ತವೆ ಇವುಗಳನ್ನೆಲ್ಲಾ ನೋಡಿಕೊಂಡು ಮಾಡಬೇಕಾಗಿದೆ. ಮಾನ್ಯ ಚೌಡಯ್ಯನವರು ಇಲ್ಲಿ ಇಲ್ಲ, ಮಂಡ್ಯಾ ಜಿಲ್ಲೆಯಲ್ಲಿ ಸಾಕಷ್ಟು ಒತ್ತಡಗಳು ಬಂದರೂ ಕೂಡ ನಾನು ಬಂದ ಮೇಲೆ ರಾಜಶೆಟ್ಟಿಪುರದಲ್ಲಿ ಕ್ರಮ ತೆಗೆದುಕೊಂಡಿದ್ದೇನೆ. ಈ ತರಹ ಮಾಡುತ್ತಾರೆ, ಸ್ಥಳೀಯ ಶಾಸಕರು ನೀವು ಕೂಡ ಸಹಾಯ ಮಾಡಬೇಕಾಗುತ್ತದೆ.

ಶ್ರೀ ಬಿ ಇ. ರಾಮಯ್ಯ.—೫೭ ಎಕರೆ ಅಕ್ವಿಜಿಷನ್ ಮಾಡಿದ್ದಾರೆ, ಹಣವಿಲ್ಲದೆ ಆ ಕೆಲಸ ನಿಂತು ಬಿಟ್ಟಿದೆ.

ಶ್ರೀ ಧರ್ಮಸಿಂಗ್.—ಯಾವುದಾದರೂ ಸ್ಪೆಸಿಫಿಕ್ ಆಗಿ ತಿಳಿದುಬಂದರೆ ಅದನ್ನು ನೋಡೋಣ. ಇನ್ನು ಬಸವರಾಜ ಪಾಟೀಲರು ಹೇಳಿದ್ದಾರೆ ಅಪ್ಪರ್ ಕೃಷ್ಣದಿಂದ ನೀರು ತರಬೇಕಾಗಿದೆ. ೧೨ ಕಿಲೋಮೀಟರ್ ದೂರವಾಗುತ್ತದೆ ಇದು ಸಮಾಲೋಚನೆಯಾಗಬೇಕು. ನಗರಸಭೆಯವರಿಗೆ ಕೇಳಿದ್ದೇವೆ ಅದು ಬಹಳ ಕಾಸ್ಟಲಿಯಾಗುತ್ತದೆ ಎಂದು ಹೇಳಿದ್ದಾರೆ, ಅದನ್ನು ಕೇಳಿ ಮಾಡಿದ್ದೇವೆ ಬೋರ್ ಹಾಕಿ ನೀರು ಕೊಡುವ ವಿಚಾರ ಮಾಡುತ್ತಿದ್ದೇವೆ. ಬೋರ್ ಹಾಕಬೇಕಾದರೆ ಅಲ್ಲಿ ಯಾರೋ ಒಬ್ಬರು ಸ್ವಾಮಿಜಿಯವರ ಹೆಸರು ಹೇಳಿದರು. ಅವರ ಹೇಳಿದ ಕಡೆ ನೀರು ಬರುತ್ತದೆಂದು ಅಲ್ಲಿಯವರು ಹೇಳುತ್ತಾರೆ. ಅವರು ತೋರಿಸಿದ ಕಡೆ ನೀರು ಬರಲಿಲ್ಲ. ಸಾಕಷ್ಟು ಶ್ರಮ ಮಾಡಿದ್ದೇವೆ. ನಾವು ಮಾಡಿರುವ ಪ್ರಯತ್ನವನ್ನು ತಾವು ಮೆಚ್ಚಬೇಕು. ಆದರೂ ಪರಮನೆಂಟ್ ವಾಟರ್ ಸಪ್ಲೈ ಸ್ಕೀಮ್ ಮಾಡಬೇಕು, ಸ್ವಾಮಿಜಿಯವರು ಹೇಳಿದ ಕಡೆನೂ ನೀರು ಬರಲಿಲ್ಲ ..

MR. SPEAKER.—Let not that blunder be repeated,

ಶ್ರೀ ಧರ್ಮಸಿಂಗ್.—ಕೆಲವು ಸಾರಿ ಅವರು ಹೇಳಿದ ಕಡೆ ನೀರು ಬಂದಿದೆಯಂತೆ. ಅದೇ ರೀತಿ ಬಾದಾಮಿ ಎಂಬ ಕ್ಷೇತ್ರಾಭಿವೃದ್ಧಿ ಅಧಿಕಾರಿ ಏನು ಇದ್ದಾರೆ. ಅವರು ತೋರಿಸಿದ ಕಡೆ ನೀರು ಬರುತ್ತದೆ ಎನ್ನುವುದು ಇದೆ. ಕೆಲವು ಕಡೆ ಅದು ಯಶಸ್ವಿಯಾಗಿದೆ. ಪ್ರತ್ಯೇಕ ವಾಟರ್ ಸಪ್ಲೈ ಮಾಡಿ ಸಹಾಯ ಮಾಡಲಿಕ್ಕೆ ಹೊರಟಾಗ ಜಿಯಾಲಜಿಸ್ಟ್ ಹೇಳಿದ ಕಡೆ ನೀರು ಬರುವುದಿಲ್ಲ ಸ್ವಾಮಿಜಿ ಹೇಳಿದ ಕಡೆ ಬರುತ್ತದೆಂದು ಅಲ್ಲಿಯವರ ನಂಬಿಕೆ ಇದೆ. ನಮ್ಮ ಎಕ್ಸ್‌ಪರ್ಟ್ಸ್‌ಗಳು ಹೇಳುವ ರೀತಿಯಲ್ಲಿ ಅದನ್ನೂ ಕೂಡ ಮಾಡಿದ್ದೇವೆ.

ಶ್ರೀ ಬಿ. ಇ. ರಾಮಯ್ಯ.—ಎಂಟರಿಟ್ಯಾಕ್ಸ್ ಬಗ್ಗೆ ತಾವು ಹೇಳಲಿಲ್ಲ. ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗುತ್ತಿದೆ. ಇದನ್ನು ತಮ್ಮ ಡಿಪಾರ್ಟ್‌ಮೆಂಟ್‌ನಲ್ಲೇ ಇಟ್ಟುಕೊಂಡು ತಾವೇ ಡಿಸ್ಟ್ರಿಬ್ಯೂಷನ್ ಮಾಡಬೇಕು. ಈ ವಿಷಯದಲ್ಲಿ ಸರ್ಕಾರದ ನಿರ್ಧಾರ ಏನು?

ಶ್ರೀ ಧರ್ಮಸಿಂಗ್.—ಇದು ದೊಡ್ಡ ಪ್ರಶ್ನೆ. ಅರ್ಥ ಮಂತ್ರಿಗಳು ಹೇಳಿದ್ದಾರೆ ಆಕ್ಟ್ರಾಯಿ ಮತ್ತು ಎಂಟರಿಟ್ಯಾಕ್ಸ್‌ನಿಂದ This year we are getting Rs. 3½ crores extra ಎಂದು. ಇದನ್ನು ಡೆವಲಪ್‌ಮೆಂಟ್ ಬಗ್ಗೆ ಉಪಯೋಗಿಸಲಾಗುತ್ತದೆ. ಮಾನ್ಯ ಮತ್ತಿಕಟ್ಟಿಯವರು ಹೇಳಿದ್ದಾರೆ ಎಲ್ಲೆಲ್ಲಿ ಮುನಿಸಿಪಲ್ ಖಾಲಿ ಲ್ಯಾಂಡ್ ಇದೆ, ಅಂತಹ ಕಡೆಗಳಲ್ಲಿ ಮಾರ್ಕೆಟ್ ಕಾಂಪ್ಲೆಕ್ಸ್‌ಗಳನ್ನು ಮಾಡಬೇಕು. ಆದರಿಂದ ಹೆಚ್ಚು ಆದಾಯ ಬರತಕ್ಕ ರೀತಿಯಲ್ಲಿ ಮುನಿಸಿಪಾಲಟಿಗಳನ್ನು ಬೆಳಸಬೇಕೆಂದು ಹೇಳಿದ್ದಾರೆ. ಇವತ್ತು ಇಂಡಿ ಮುನಿಸಿಪಾಲಟಿ ಅಧ್ಯಕ್ಷರು ಇಂತಹ ಕೆಲಸ ಮಾಡುತ್ತಿದ್ದಾರೆ. ನಮ್ಮ ಗುಲ್ಬರ್ಗಾದಲ್ಲಿ ಕೂಡ ಮಾಡುತ್ತಿದ್ದಾರೆ. ಗುಲ್ಬರ್ಗಾದಲ್ಲಿ ಮಾಡುತ್ತಿದ್ದಾರೆ ಅಂದರೆ ನಾನು ಮಂತ್ರಿಯಾಗಿರುವುದರಿಂದ ಮಾಡುತ್ತಿಲ್ಲ ಅವರು ಹೈದರಾಬಾದ್ ಸ್ಟೇಟ್ ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡು ಮಾಡುತ್ತಿದ್ದಾರೆ. ಬೇರೆ ಜನರಿಗೆ ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೆ, ವೆಕೆಂಟ್ ಲ್ಯಾಂಡ್‌ನ್ನು ಕೊಡಬೇಡಿ ಅದನ್ನು ಪ್ರಾಪರ್ಟಿ ಮಾಡಿಕೊಳ್ಳಿ, ಅದನ್ನು ಉಳಿಸಿಕೊಂಡು ಬ್ಯಾಂಕ್‌ನಲ್ಲಿ ಲೋನ್ ತೆಗೆದುಕೊಂಡು ಅದರಿಂದ ಕಮರ್ಷಿಯಲ್‌ಆಗಿ ಪರಿವರ್ತನೆ ಮಾಡಿದರೆ ಹೆಚ್ಚು ಆದಾಯ ಬರುತ್ತದೆಂದು ಹೇಳಿದ್ದಾರೆ. ಅದೇ ರೀತಿ ಎಲ್ಲಾ ಕಡೆಗೂ ಹೇಳುತ್ತಿದ್ದಾರೆ. ಮೊನ್ನೆ ಬೀದರ್‌ನಲ್ಲಿ ಬಸ್‌ಸ್ಟ್ಯಾಂಡ್ ಮಾಡಿ ಎಷ್ಟೋ ಲಕ್ಷ ರೂಪಾಯಿಗಳನ್ನು ತಂದಿದ್ದಾರೆ. ಆ ಹಣದಿಂದ ಲೈಟ್ ವಗೈರೆ ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದಾರೆ. ಮಾನ್ಯ ಪರಪ್ಪನವರು ಎಲೆಕ್ಷನ್ ಆಗಿ ಎರಡೂವರೆ ವರ್ಷ

ಗಳಾಗಿದೆ ಎಂದು ಹೇಳಿದರು, ಅದರ ಬಗ್ಗೆ ಕೂಡ ನೋಡೋಣ. ಮಾಳಗಿಯವರು ಮಾತನಾಡುತ್ತಾ ಪೌರಕಾರ್ಮಿಕರನ್ನು ಖಾಯಂ ಮಾಡಬೇಕೆಂದು ಹೇಳಿದ್ದಾರೆ. ಎಲ್ಲೆಲ್ಲಿ ಪೌರಕಾರ್ಮಿಕರಿದ್ದಾರೆ ಅದರ ಬಗ್ಗೆ ವಿಚಾರ ಮಾಡುತ್ತೇವೆ. ತುಮಕೂರು ವಾಟರ್ ಸಪ್ಲೈ ಸ್ಕೀಮ್‌ನ್ನು initial ತಂದಿದ್ದೇವೆ. ತುಮಕೂರು ಎಚ್.ಎಂ.ಟಿ. ಇದೆ ತುಮಕೂರು ವಾಟರ್ ಸಪ್ಲೈ ಸ್ಕೀಮ್ ವಿಚಾರದಲ್ಲಿ ಅದನ್ನು ಕೂಡ ಪ್ರಿಪೇರ್ ಮಾಡುತ್ತಿದ್ದೇವೆ. ತುಮಕೂರು ಮತ್ತು ಗುಲ್ಬರ್ಗಾ ಎರಡೂ ಕೂಡ ಇನ್ಸಿಯಲ್ ಸ್ಕೀಮ್‌ನಲ್ಲಿ ಸೇರಿವೆ. ಗುಲ್ಬರ್ಗಾ ಸೇರಿದೆ ಅಂದರೆ ಅವರು ೩೦ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ, ತುಮಕೂರಿನವರೂ ಕೂಡ ಕೊಡುತ್ತಾರೆ. ಇನ್ಸಿಯಲ್ ಸ್ಕೀಮ್ ಅಂದರೆ ಹರಿಜನರು ಬಡವರು ಇರುವಂತಹ ಕಡೆಗಳಲ್ಲಿ ಸೊಸೈಟಿ ಮಾಡಿ ಮಾಡಲಿಕ್ಕೆ ಹೊರಟಿದ್ದೇವೆ ಅದರಲ್ಲಿ ಸಿಗುತ್ತದೆ. ಚಿಕ್ಕಮಂಗಳೂರು ಬಗ್ಗೆ ಕೂಡ ಪ್ರಸ್ತಾಪ ಮಾಡಲಾಗಿದೆ. ಅದನ್ನು ಕೂಡ ಐ.ಯು.ಡಿ.ಪಿ. ಲಿಸ್ಟ್‌ಗೆ ಸೇರಿಸಿದ್ದೇವೆ. ಚಿಕ್ಕಮಗಳೂರು ಮತ್ತು ರಾಣೇಬೆನ್ನೂರು ಐ.ಯು.ಡಿ.ಪಿ.ಯಲ್ಲಿ ಸೇರಿಸಲಾಗಿದೆ. ಮಾನ್ಯ ಸದಸ್ಯರೆಲ್ಲರೂ ನಾನು ಮಂಡಿಸಿರುವ ಬೇಡಿಕೆಗಳಿಗೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MR. SPEAKER.—The question is :

"That the respective sums not exceeding the amounts

"That thte respective sums not exceeding the amounts mentioned in the list of Demands inclusive of the sum granted on account be granted to the Government to defray the charges which will come in course of payment during the financial year for the period ending with the 31st March 1982, in respect of Demand Nos. 30, 31 and 32".

The Motion was adopted and the respective sums were granted

[As ordered by the Chair, the Motion of Demands for Grants adopted by the House are reproduced below :—

DEMAND No. 30

"That a sum not exceeding Rs. 15,47,00,000 on Revenue Account and Rs. 6,68,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Housing (Excluding Government Residential Buildings)."

DEMAND No. 31

"That a sum not exceeding Rs. 8,33,00,000 on Revenue Account and Rs. 6,85,00,000 on Capital Account 'on account' be granted inclusive of the sum granted to the Government

to defray the charges which will come in course of payment during the financial year ending 31st day of March 1982 in respect of "Urban Development, etc.,"

DEMAND No. 32

"That a sum not exceeding Rs. 27,88,00,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Compensations and Grants to Local Bodies and Panchayat Raj Institutions".

MR. SPEAKER.—Next Demand.

SRI KAGODU THIMMAPPA (Minister for Public Works) :— Sir, on the recommendation of the Governor, I beg to move :

Demand No. 43. Public Works (Excluding Construction)

"That a sum not exceeding Rs. 43,95,80,000 on Revenue Acount inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Public Works (Excluding Construction)".

Demand No. 44—(Buildings)

"That a sum not exceeding Rs. 5,25,11,000 on Revenue Account and Rs. 12,20,85,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Buildings."

Demand No. 45—(Roads and Bridges)

"That a sum not exceeding Rs. 34,76,00,000 on Revenue Account and Rs. 11,83,50,000 on Capital Account inclusive

of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Roads and Bridges".

The question was proposed

5-30 p.m.

SRI M. M. J. SADYOJATHA (Minister for Transport and Minor Irrigation).—Sir, on the recommendation of the Governor, I beg to move :—

Demand No. 33—(Minor Irrigation)

"That a sum not exceeding Rs. 14,04,60,000 on Revenue Account and Rs. 13,87,00000 on Capital Account inclusive of the sum granted 'on account' be granted to the Government to defray the Charges which will come in course of payment to defray the Charges which will come in course of payment during the financial year ending 31st day of March 1982 in respect of 'Minor Irrigation".

The question was proposed

SRI D. B. PAWAR (Minister of State for Fisheries and Ports).—Sir, on the recommendation of the Governor, I beg to move :—

Demand No. 63—(Fisheries)

"That a sum not exceeding R.s 2,83,82,000 on Revenue

"That a sum not exceeding Rs. 2,83,82,000 on Revenue Account and Rs. 1,66,40,000 on Capital Account inclusive of the sum granted "on account" be granted to the Government to defray the charges which will come in course of payment during the financial year ending 31st day of March 1982 in respect of "Fisheries."

Demand No. 46—Ports and Water Transport Services

"That a sum not exceeding Rs. 79,00,000 on Revenue Account and Rs. 1,36,95,000 on Capital Account inclusive

of the sum granted 'on account' be granted to the Government to defray the charges which will come in course of payment during the financial year ending 31st day of March, 1982 in respect of "Ports and Transport Services."

The question was proposed

SRI B. B. CHIMMANAKATTI (Minister of State for Major and Medium Irrigation).—Sir, on the recommendation of the Governor, I beg to move :

Demand No. 34—(Irrigation Navigation, Drainage and Flood Control Projects)

"That a sum not exceeding Rs. 61,15,15,0o0 on Revenue Account and Rs. 147,30,50,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Irrigation, Navigation, Drainage and Flood Control Projects."

The question was proposed

SRI G. H. ASWATHA REDDY (Minister of State for Power).—Sir, on the recommendation of the Governor, I beg to move :—

Demand No. 47—Power Projects

"That a sum not exceeding Rs. 1,09,00,000 on Revenue Account and Rs. 89,48,99,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1982 in respect of "Power Projects."

The question was proposed

MR. SPEAKER.—All the Demands are before the House for discussion.

†ಶ್ರೀ ವಿ. ಬಿ. ಭಾವಿ (ಮುಂಡರ್ಗಿ).—ಮಾನ್ಯ ಅಧ್ಯಕ್ಷರೇ, ಈವೊತ್ತಿನ ದಿವಸ ಲೋಕೋಪಯೋಗಿ ಸಚಿವರು ಮತ್ತು ಸಣ್ಣ ನೀರಾವರಿ ಸಚಿವರು ಮತ್ತು ಮಧ್ಯಮ ನೀರಾವರಿ ಸಚಿವರು ಮತ್ತು ಮೀನುಗಾರಿಕೆ ಸಚಿವರು ಮತ್ತು ವಿದ್ಯುಚ್ಛಕ್ತಿ ಸಚಿವರು ಮಂಡಿಸಿರತಕ್ಕಂಥಾ ಎಲ್ಲಾ ಬೇಡಿಕೆಗಳಿಗೂ ನನ್ನ ಬೆಂಬಲವನ್ನು ಸೂಚಿಸುತ್ತಾ ಸರ್ಕಾರಕ್ಕೆ ಕೆಲವೊಂದು ಸಲಹೆಗಳನ್ನು ಕೊಡಲು ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಈ ಬಡ್ಜೆಟ್ ಚರ್ಚೆ ಎಂದರೆ ಈ ವರ್ಷದಲ್ಲಿ ಆದಂಥಾ ಕೆಲಸದ ಒಂದು ಬ್ಯಾಲೆನ್ಸ್ ಷೀಟ್ ಇದು ಎಂದರೆ ತಪ್ಪಾಗಲಿಕ್ಕಿಲ್ಲ ಎಂದು ನನ್ನ ಭಾವನೆ. ಸರ್ಕಾರದವರು ಮಾಡಿದಂಥಾ ಒಂದು ಕೆಲಸ ಮತ್ತು ಇನ್ನು ಮುಂದೆ ಸಾಧಿಸಬೇಕಾದಂಥ ಕೆಲಸಗಳ ಬಗ್ಗೆ ಸರ್ಕಾರದ ಒಂದು ವರದಿ ಈ ಸಭೆಯು ಈವೊತ್ತು ಮುಂದೆ ಬೀಳುತ್ತಾ ಇದೆ. ಅದರಲ್ಲಿರತಕ್ಕಂಥಾ ಸಾಧನೆಗಳನ್ನೂ ಮತ್ತು ಮುಂದೆ ಆಗಬೇಕಾದಂಥಾ ಕೆಲಸಗಳನ್ನೂ ಮತ್ತು ಇದರಲ್ಲಿರತಕ್ಕಂಥಾ ನ್ಯೂನತೆಗಳನ್ನೂ ನೋಡಿದಾಗ ಆ ಎಲ್ಲ ಅಂಶಗಳನ್ನೂ ನಾವು ಅವಲೋಕಿಸಿದಾಗ ಅದರ ಬಗ್ಗೆ ನಮ್ಮ ಆ ಸಲಹೆಗಳನ್ನೂ ಸಹ ಕೊಡುವುದು ನಮ್ಮ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ಮಾನ್ಯ ಅಧ್ಯಕ್ಷರೇ, ಮೊಟ್ಟಮೊದಲನೆಯದಾಗಿ ನಾನು ಈ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಕೆಲವೊಂದು ಸಲಹೆಗಳನ್ನು ಈವೊತ್ತು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳ ಒಂದು ಗಮನವನ್ನು ಸೆಳೆಯಲು ಇಚ್ಛೆಪಡುತ್ತೇನೆ, ಅಧ್ಯಕ್ಷರೇ, ಉತ್ತಮವಾದ ಈ ಒಂದು ವಿಚಾರವನ್ನು ಸಚಿವರ ಗಮನಕ್ಕೆ ತರುತ್ತೇನೆ. ಅದೇನೆಂದರೆ ಈ ಲೋಕೋಪಯೋಗಿ ಇಲಾಖೆಯೊಡನೆ ಈ ಸಣ್ಣ ನೀರಾವರಿ ಇಲಾಖೆಯನ್ನೂ ಸಹ ವಿಲೀನಗೊಳಿಸುವ ಬಗ್ಗೆ ನಾನು ಒಂದೆರಡು ಮಾತುಗಳನ್ನು ಆಡಲು ಬಯಸುತ್ತೇನೆ. ಈವೊತ್ತು ಸಣ್ಣ ನೀರಾವರಿ ಇಲಾಖೆಯನ್ನು ಈ ಲೋಕೋಪಯೋಗಿ ಇಲಾಖೆಯೊಂದಿಗೆ ಏತಕ್ಕೆ ವಿಲೀನಗೊಳಿಸಬೇಕು ಎಂದರೆ ಇದರಲ್ಲಿರತಕ್ಕಂಥಾ ಇಂಜಿನೀಯರ್‌ರ ಒಂದು ಆಡಳಿತದ ಕರ್ತವ್ಯ ನಿರ್ವಹಣೆ ಈ ಲೋಕೋಪಯೋಗಿ ಇಲಾಖೆಯಲ್ಲಿದೆ. ಮತ್ತು ಈವೊತ್ತು ಈ ಹಣಕಾಸಿನ ಆರ್ಥಿಕ ನಿಯಂತ್ರಣ ಏನು ಇದೆ ಅದು ಸಣ್ಣ ನೀರಾವರಿ ಇಲಾಖೆಯಲ್ಲಿದೆ. ಈವೊತ್ತು ಈ ಆಡಳಿತ ನಿರ್ವಹಣೆ ಮಾಡತಕ್ಕಂಥಾ ಕರ್ತವ್ಯ ಲೋಕೋಪಯೋಗಿ ಇಲಾಖೆಗೆ ಸೇರಿದ್ದು. ಈವೊತ್ತು ಈ ಲೋಕೋಪಯೋಗಿ ಇಲಾಖೆಯ ಒಂದು ರೀತಿ ನಿಯಂತ್ರಣ ಇರತಕ್ಕಂಥಾದ್ದು ಹಾಗೆಯೇ ಸಣ್ಣ ನೀರಾವರಿ ಇಲಾಖೆಯಲ್ಲಿ ಒಂದು ರೀತಿ ನಿಯಂತ್ರಣ ಇರತಕ್ಕಂಥಾದ್ದು ಇರುವುದರಿಂದ ಈ ಎರಡೂ ಇಲಾಖೆಯ ಕೆಲಸಗಳು ಏನು ಇವೆ ಆ ಕೆಲಸಗಳು ಕಾರ್ಯಗತ ಮಾಡುವುದರಲ್ಲಿ ಒಂದಕ್ಕೊಂದು ಸಮನ್ವಯ ಇಲ್ಲದ ಕಾರಣ ಈವೊತ್ತು ಎಲ್ಲಾ ಕೆಲಸಗಳೂ ಕೂಡ ವಿಳಂಬವಾಗುತ್ತಾ ಇವೆ. ಮುಖ್ಯವಾಗಿ ಈ ಸಣ್ಣ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆ ಏನು ಇದೆ ಇದು ಒಂದು ದೊಡ್ಡ ಸಮುದ್ರ ಇದ್ದ ಹಾಗೆ. ಇದು ಅಷ್ಟು ದೊಡ್ಡ ಇಲಾಖೆ. ಇದಕ್ಕೆ ತಡೆಯೇ ಇಲ್ಲ. ಅದಕ್ಕಾಗಿ ಈವೊತ್ತಿನ ದಿವಸ ಸರ್ಕಾರದವರು ಹಾಕಿಕೊಂಡಿರತಕ್ಕಂಥಾ ಕಾರ್ಯಕ್ರಮಗಳು ಅದು ಸಣ್ಣ ನೀರಾವರಿ ಇಲಾಖೆಯಿಂದಾಗಲಿ ಅಥವಾ ಲೋಕೋಪ ಇಲಾಖೆಯಿಂದಾಗಲಿ ಹಾಕಿಕೊಂಡಿರತಕ್ಕಂಥಾ ಕಾರ್ಯಕ್ರಮಗಳು ಏನು ಇವೆ ಅವೆಲ್ಲಾ ಹಳ್ಳಿಗಾಡಿನ ಜನರಿಗೆ ಮುಟ್ಟಿ ಅದರ ಫಲ ಪಡೆಯಬೇಕಾದರೆ ಇವೆರಡು ಇಲಾಖೆಯನ್ನೂ ಕೂಡ ಒಂದುಗೂಡಿಸುವುದು ಬಹಳ ಪ್ರಾಮುಖ್ಯವಾದ ವಿಚಾರ ಎಂದು ಹೇಳುತ್ತೇನೆ. ಮಾನ್ಯ ಸಚಿವರು ಇದರ ಗಂಭೀರತೆಯನ್ನು ಪರಿಗಣಿಸಿ ಇದರ ಬಗ್ಗೆ ಯೋಗ್ಯವಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ನಾನು ಕಳಕಳಿಯಿಂದ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ವಾರ್ಷಿಕ ವರದಿಯಲ್ಲಿ ಕೆಲವು ಅಂಕಿ ಸಂಖ್ಯೆಗಳನ್ನು ಏನು ಕೊಟ್ಟಿದ್ದಾರೆ ಅದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ವಾರ್ಷಿಕ ವರದಿಯ ೧೧ನೇ ಪೇಜಿನಲ್ಲಿ Development of Roads in Sugar factory areas ಅಂತ ಇದೆ. ಅಧ್ಯಕ್ಷರೇ, ಅದರಲ್ಲಿ ೧೯೭೭–೭೮ನೇ ಇಸವಿಯಲ್ಲಿ, ೧೯೭೮–೭೯ನೇ ಇಸವಿಯಲ್ಲಿ, ೧೯೭೯–೮೦ನೇ ಇಸವಿಯಲ್ಲಿ ಮತ್ತು ೧೯೮೦–೮೧ನೇ ಇಸವಿಯಲ್ಲಿ ಆ ಅಧಿಕಾರಿಗಳು ಏನು ಅಂಕಿ ಸಂಖ್ಯೆಗಳನ್ನು ಬಹಳ ಚಾಣಾಕ್ಷತನದಿಂದ ಕೊಟ್ಟಿದ್ದಾರೆ ಆ ಅಂಕಿ ಸಂಖ್ಯೆಗಳು ಸತ್ಯಕ್ಕೆ ದೂರವಾದುದು ಎನ್ನುವ ಅಂಶವನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಈ ಕಬ್ಬಿನ ಕರದ ಬಗ್ಗೆ ವಸೂಲಾಗುವ ಮೊಬಲಗು ಇಷ್ಟು ಅಂತ ಅದರಲ್ಲಿ ಇಲ್ಲ. ಮತ್ತು ಈ ಷುಗರ್ ಫ್ಯಾಕ್ಟರಿ ಏರಿಯಾಸ್‌ನಲ್ಲಿ ಲೋಕೋಪಯೋಗಿ ಇಲಾಖೆಯ ವಶದಲ್ಲಿರತಕ್ಕಂಥಾ ಚಕ್ಕಡಿ

ತಿರುಗಾಡುವ ರಸ್ತೆಗಳೆಷ್ಟು ತೆಗೆದುಕೊಂಡಿದ್ದೀರಿ ಮತ್ತು ಇತರೇ ವಾಹನಗಳು ತಿರುಗಾಡುವ ರಸ್ತೆಗಳನ್ನು ಎಷ್ಟು ತೆಗೆದುಕೊಂಡಿದ್ದೀರಿ. ಮತ್ತು ಈ ಒಂದು ಕಬ್ಬಿನ ಕರದ ಮೂಲಕ, ಏನು ಹಣ ವಸೂಲಾಗುತ್ತದೋ ಆ ಮೂಲಕ ಈ ರಸ್ತೆಗಳಿಗೆ ಎಷ್ಟು ಹಣ ಖರ್ಚು ಮಾಡಿದ್ದೀರಿ, ಈ ಕಬ್ಬಿನ ಕರದಿಂದ ಎಷ್ಟು ಹಣ ಬರುತ್ತದೆ ಇದರ ಬಗ್ಗೆ ನನ್ನ ಸಲಹೆಗಳನ್ನು ಇಡಬಯಸುತ್ತೇನೆ. ಅದಕ್ಕೆ ತಾವು ಉತ್ತರ ಕೊಡುವಾಗ ಅದರ ಲೆಕ್ಕವನ್ನು ಕೊಡಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಕಬ್ಬಿನ ಮೇಲಿನ ಕರದ ವಿಚಾರ ಈ ಡಿಪಾರ್ಟ್‌ಮೆಂಟಿಗೆ ಬರುವುದಿಲ್ಲ. ಷುಗರ್ ಪರ್ಚೇಸ್ ಟ್ಯಾಕ್ಸ್ ವಿಚಾರ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಬರುತ್ತದೆ.

ಶ್ರೀ ವಿ. ಬಿ. ಭಾವಿ.—ಇಲ್ಲ ಸ್ವಾಮಿ. ಈ ಡಿಪಾರ್ಟ್‌ಮೆಂಟ್‌ನವರು ಈ ಕರವನ್ನು ಕಲೆಕ್ಟ್ ಮಾಡಿ ಆಯಾ ಏರಿಯಾದಲ್ಲಿ ರಸ್ತೆಗಳನ್ನು ಮಾಡತಕ್ಕಥ ಕೆಲಸಕ್ಕೆ ಆ ಹಣವನ್ನು ಖರ್ಚು ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಇದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಚಾರ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ ಡಿಮ್ಯಾಂಡ್ ಇಲ್ಲಿಗೆ ಯಾವಾಗ ಚರ್ಚೆಗೆ ಬರುತ್ತದೆಯೋ ಆಗ ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ವಿ ಬಿ. ಭಾವಿ.—ಸ್ವಾಮಿ, ಈ ಲೋಕೋಪಯೋಗಿ ಇಲಾಖೆಯವರು ನಮ್ಮ, ಭಾಗದಲ್ಲಿ ಎಷ್ಟೆಷ್ಟು ಕಿಲೋಮೀಟರ್ ರಸ್ತೆಗಳನ್ನು ತೆಗೆದುಕೊಂಡು ಮಾಡಿದ್ದಾರೆ ಎಂಬ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಾನು ಈ ಗ್ರಾಮೀಣ ಸಂಪರ್ಕ ರಸ್ತೆಗಳ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಈ ಗ್ರಾಮೀಣ ಸಂಪರ್ಕ ರಸ್ತೆಗಳ ಬಗ್ಗೆ ಕೇಂದ್ರ ಸರ್ಕಾರ ಒಂದು ಒಳ್ಳೆಯ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಕೇಂದ್ರ ಸರ್ಕಾರದವರು ಈ ಗ್ರಾಮೀಣ ಸಂಪರ್ಕ ರಸ್ತೆಗಳಿಗಾಗಿ ಸುಮಾರು ೧೧೩೦ ಕೋಟಿ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದೆ ಎಂದು ಬಲ್ಲ ಮೂಲಗಳಿಂದ ನನಗೆ ತಿಳಿದು ಬಂದಿದೆ.

ಅಧ್ಯಕ್ಷರು.—ಕರ್ನಾಟಕಕ್ಕೆ ಮಾತ್ರ ಸ್ಯಾಂಕ್ಷನ್ ಮಾಡಿದ್ದಾರೆಯೇ ?

ಶ್ರೀ ವಿ. ಬಿ. ಭಾವಿ.—ಕರ್ನಾಟಕವೂ ಸೇರಿದಂತೆ ಎಲ್ಲಕ್ಕೂ ಒಟ್ಟು ಅಷ್ಟು ಸ್ಯಾಂಕ್ಷನ್ ಮಾಡಿದ್ದಾರೆ ; ಒಟ್ಟು ೧೧೩೦ ಕೋಟಿ ರೂಪಾಯಿಗಳನ್ನು ಈ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರು ನಿಗಧಿಪಡಿಸಿದ್ದಾರೆಂದು ಬಲ್ಲ ಮೂಲಗಳಿಂದ ಬಂದಂತಹ ವದಂತಿ ಇದು. ಆದರೆ ನಮ್ಮ ರಾಜ್ಯ ಸರ್ಕಾರದವರು ಈ ಗ್ರಾಮೀಣ ಸಂಪರ್ಕ ರಸ್ತೆಗಳನ್ನು ಮಾಡುವುದಕ್ಕಾಗಿ ನಮ್ಮ ರಾಜ್ಯದ ಪಾಲಿಗೆ ಎಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ತೆಗೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ ಎನ್ನುವ ಬಗ್ಗೆ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕೆಂದು ಕೇಳುತ್ತೇನೆ. ಏಕೆಂದರೆ ಕೇಂದ್ರ ಸರ್ಕಾರದವರು ಅತಿ ಮುಖ್ಯವಾಗಿ ಈ ಗ್ರಾಮೀಣ ಸಂಪರ್ಕ ರಸ್ತೆಗಳಿಗಾಗಿ ಈ ಒಂದು ಯೋಜನೆಯನ್ನು ಹಾಕಿಕೊಂಡು ಇಷ್ಟು ಹಣ ಎಂದು ಕೊಡುವಾಗ ಅದನ್ನು ತೆಗೆದುಕೊಳ್ಳಬೇಕಾದ್ದು ರಾಜ್ಯ ಸರ್ಕಾರದ ಕರ್ತವ್ಯ. ಆದ್ದರಿಂದ ಈ ಇಲಾಖೆ ಈ ಒಂದು ಕೆಲಸವನ್ನು ಮಾಡುವುದರ ಸಲುವಾಗಿ ಎಷ್ಟು ಹಣವನ್ನು ಕೇಂದ್ರ ಸರ್ಕಾರದಿಂದ ಪ್ರಯತ್ನಪಟ್ಟು ನಮ್ಮ ಸರ್ಕಾರದವರು ತೆಗೆದುಕೊಂಡಿದ್ದಾರೆ ? ಒಂದು ವೇಳೆ ಆ ಹಣವನ್ನು ಕೇಂದ್ರದವರಿಂದ ತೆಗೆದುಕೊಳ್ಳುವುದರಲ್ಲಿ ವಿಫಲವಾಗಿದ್ದಾರೆ ಅದಕ್ಕೆ ಹೊಣೆಗಾರರು ಯಾರು ಎಂಬ ಬಗ್ಗೆ ಕೂಡ ಮಾನ್ಯ ಸಚಿವರು ವಿವರಣೆಯನ್ನು ಕೊಡಬೇಕು. ಇನ್ನು ಪೇಜ್ ನಂಬರ್ ೧೩ರಲ್ಲಿ ರೂರಲ್ ರೋಡ್ಸ್ ಬಗ್ಗೆ ಹಾಕಿಕೊಂಡಿರತಕ್ಕಂಥ ಮಾಸ್ಟರ್ ಪ್ಲಾನ್ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ.

"A master plan estimated to cost Rs. 949 crores has been prepared for connecting all the inhabited villages in the State with all-weather roads. As a first phase of the above Master Plan, a resource based plan co ting Rs. 36 crores has been drawn up for constructing C. D. works having a linear water way of less than six metres and side drains. Under this plan it is proposed to cover 65% of the

total inhabited villages with C.D. works and side drains. This plan is being implemented from the year 1980-81 and there is a budget provision of Rs. 4.95 crores for this programme during the year. During 1981-82 Rs. 1.5 crores is provided for this programme."

ಈ ಬೃಹತ್ ಯೋಜನೆಗಳ ಬಗ್ಗೆ ರಾಜ್ಯ ಸರ್ಕಾರದವರು ಮಾಸ್ಟರ್ ಪ್ಲಾನ್‌ಗಳನ್ನು ಹಾಕಿಕೊಂಡು ೧೯೮೦-೮೧ನೇ ಇಸವಿಯಲ್ಲಿ ೪.೯೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಹಣವನ್ನು ಸರ್ಕಾರ ಖರ್ಚು ಮಾಡಿದೆ ? ಈ ರಾಜ್ಯದ ಯಾವಯಾವ ಭಾಗದಲ್ಲಿ ಎಲ್ಲೆಲ್ಲಿ ರಸ್ತೆಗಳು ಇಲ್ಲ ಅಲ್ಲೆಲ್ಲಾ ಈ ಬೃಹತ್ ಯೋಜನೆಗಳನ್ನು ಕೈಕೊಳ್ಳಬೇಕೆಂದು ಉದ್ದೇಶ ರಾಜ್ಯ ಸರ್ಕಾರಕ್ಕೆ ನಿಜವಾಗಿ ಇದ್ದರೆ ೧೯೮೦-೮೧ನೇ ಸಾಲಿಗೆ ೪.೯೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಮತ್ತು ೧೯೮೧-೮೨ನೇ ಸಾಲಿಗೆ ೧.೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ; ನಮಗೆ ತಿಳಿದ ಹಾಗೆ ಈ ಬೃಹತ್ ಯೋಜನೆಗಳಿಗಾಗಿ ವರ್ಷದಿಂದ ವರ್ಷಕ್ಕೆ ಈ ಹಣದ ಮೊಬಲಗನ್ನು ಏರಿಸಿಕೊಂಡು ಹೋಗುತ್ತಿರುವುದನ್ನು ನಾವು ನೋಡಿದ್ದೇವೆ ; ಆದರೆ ೧೯೮೧-೮೨ಕ್ಕೆ ೧.೫. ಕೋಟಿ ರೂಪಾಯಿಗಳನ್ನು ಕೊಟ್ಟಿರುವ ಉದ್ದೇಶವೇನು ಎಂಬ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ಪೇಜ್ ನಂಬರ್ ೧೫ರಲ್ಲಿ ನ್ಯಾಷನಲ್ ಹೈವೇಸ್ ಬಗ್ಗೆ ಬಹಳ ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಕರ್ನಾಟಕ ರಾಜ್ಯಾದ್ಯಂತ ೪ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸುವ ಬಗ್ಗೆ ರಾಜ್ಯ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಪ್ರಪೋಸಲ್ಸನ್ನು ಕಳಿಸಿದ್ದಾರೆ ಎಂದು ನಮಗೆ ಸುದ್ದಿ ಬಂದಿದೆ. ಇದು ನಿಜವೇ? ಇದು ನಿಜವಾಗಿದ್ದಲ್ಲಿ ನಮ್ಮ ಸರ್ಕಾರದವರು ಈ ಬಗ್ಗೆ ಮುಂದೆ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ, ಈ ಬಗ್ಗೆ ಸಲಹೆಗಳು ಕೇಂದ್ರ ಸರ್ಕಾರದಲ್ಲಿ ಯಾವ ಹಂತದಲ್ಲಿ ಉಳಿದಿವೆ ಎಂಬ ಬಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇನ್ನು ನಾನು ಈ ಸೇತುವೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಧಾರವಾಡ ಜಿಲ್ಲೆಯಲ್ಲಿ ನನ್ನ ಮತದಾರ ಕ್ಷೇತ್ರವಾದ ಮುಂಡರಗಿಯಲ್ಲಿ ಒಂದು ಸೇತುವೆಯನ್ನು ನಿರ್ಮಾಣ ಮಾಡಬೇಕಾಗಿದೆ. ನಾನು ಇಲ್ಲಿಗೆ ಶಾಸಕನಾಗಿ ಬಂದಾಗಿನಿಂದಲೂ ಈ ಬಗ್ಗೆ ಹೇಳಿಕೊಳ್ಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿರತಕ್ಕಂಥ ಒಂದು ರೋಡ್‌ನಲ್ಲಿ ಈ ತುಂಗಭದ್ರಾ ನೀರು ಬರುತ್ತಿದೆ. ಆದಕ್ಕಾಗಿ ನನ್ನ ಮುಂಡರಗಿ ಕ್ಷೇತ್ರದಲ್ಲಿ ಸಿಮ್ಮಾಲೂರ್ ಮತ್ತು ಹೂವಿನಹಡಗಲಿ ತಾಲ್ಲೂಕಿನ ನಡುವೆ ಈ ತುಂಗಭದ್ರಾಗೆ ಒಂದು ಸೇತುವೆಯನ್ನು ನಿರ್ಮಾಣ ಮಾಡಬೇಕು. ಇದಕ್ಕೆ ಬಲವಾದ ಕಾರಣಗಳು ಇವೆ. ಅಲ್ಲಿ ಸೇತುವೆಯನ್ನು ಏತಕ್ಕೆ ನಿರ್ಮಾಣ ಮಾಡಬೇಕೆಂದರೆ ಅಲ್ಲಿ ಸೇತುವೆಯನ್ನು ಮಾಡುವುದರಿಂದ ಆ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗುತ್ತದೆ. ಅದು ರಾಷ್ಟ್ರೀಯ ಹೆದ್ದಾರಿಯಾದರೆ ಅಲ್ಲಿಂದ ಬೆಂಗಳೂರಿಗೆ ಬರಬೇಕಾದರೆ ೫೦ ಮೈಲಿಗಳಷ್ಟು ದೂರ ಕಡಿಮೆಯಾಗುತ್ತದೆ. ೫೦ ಮೈಲಿಯಷ್ಟು ದೂರ ಕಡಿಮೆಯಾದರೆ ಪೆಟ್ರೋಲ್ ಮತ್ತು ಡಿಸಲ್ ಖರ್ಚು ಕೂಡ ಕಡಿಮೆಯಾಗುತ್ತದೆ. ಅಲ್ಲದೇ ಅಲ್ಲಿಂದ ಬೆಂಗಳೂರಿಗೆ ಕಾರಿನಲ್ಲಿ ಬರಬೇಕಾದರೆ ೫೭ ರೂಪಾಯಿಗಳಷ್ಟು ನಮಗೆ ಉಳಿಯುತ್ತದೆ. ಸೋಲಾಪುರ ನ್ಯಾಷನಲ್ ಹೈವೇನಿಂದ ಬರತಕ್ಕಂಥ ಟ್ರಕ್‌ಗಳೂ ಕೂಡ ನಮ್ಮ ತಾಲ್ಲೂಕಿಗೆ ಬಂದು ಹೋಗುತ್ತವೆ. ಕನಿಷ್ಟಪಕ್ಷ ೧೨೦ ರೂಪಾಯಿಗಳಷ್ಟು ಡೀಸೆಲ್‌ನ್ನು ಉಳಿಸುತ್ತಾರೆ. ಇದೂ ಅಲ್ಲದೆ ನಮ್ಮ ಕ್ಷೇತ್ರ ಉತ್ತಮ ವ್ಯಾಪಾರ ಕೇಂದ್ರವಾಗಿ ಪರಿವರ್ತನೆಗೊಳ್ಳುತ್ತಿದೆ ಈ ವಿಚಾರವನ್ನು ನಾನು ಮಾನ್ಯ ಮಂತ್ರಿಯವರ ಮುಂದೆ ಇಟ್ಟಿದ್ದೇನೆ. ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಿ ಈ ವಿಚಾರದಲ್ಲಿ ಯಾವಾಗ ಅವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆ ಉತ್ತರವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಇದೇ ರೀತಿಯಾಗಿ ಇನ್ನೊಂದು ವಿಚಾರವೇನೆಂದರೆ ಪಶ್ಚಿಮ ಕರಾವಳಿಯ ಹೆದ್ದಾರಿಯಲ್ಲಿ ಕಾರವಾರ ಮತ್ತು ಗೋವಾಗಳ ನಡುವೆ ಒಂದು ಸೇತುವೆ ನಿರ್ಮಾಣವಾಗುತ್ತಾ ಇದೆ. ೧೯೭೩ನೇ ಇಸವಿಯಿಂದ ಇದು ಚಾಲೂ ಆಗಿದೆ. ೧೯೭೩ನೇ ಇಸವಿಯಲ್ಲಿ ಪ್ರಾರಂಭವಾದಂಥ ಈ ಸೇತುವೆ ನಿರ್ಮಾಣ ಕಾರ್ಯ ಸಂಪೂರ್ಣವಾಗಿ ಮುಗಿದಿದೆಯೋ ಹೇಗೆ ? ಇದು ಇನ್ನೂ ಮುಗಿಯದಿದ್ದ ಪಕ್ಷದಲ್ಲಿ ಆಗಿರತಕ್ಕಂಥ ವಿಳಂಬಕ್ಕೆ ಹೊಣೆಗಾರರು ಯಾರು ? ಇದಕ್ಕೆ ಇಂಜಿನಿಯರ್ ಹೊಣೆಗಾರರೇ ಅಥವಾ ಕಂಟ್ರಾಕ್ಟರ್‌ಗಳು ಹೊಣೆಗಾರರೇ ? ಇಲ್ಲಿಯವರೆಗೆ ಈ ಸೇತುವೆ ನಿರ್ಮಾಣ ಕಾರ್ಯ ಏತಕ್ಕೆ ಮುಗಿಯಲಿಲ್ಲ ? ಈ ನನ್ನ ಎಲ್ಲಾ ಪ್ರಶ್ನೆಗಳಿಗೆ ಮಾನ್ಯ ಮಂತ್ರಿಯವರು

ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೆಲ್ಲವನ್ನೂ ಅವಲೋಕಿಸಿ ನೋಡಿದಾಗ ಲೋಕೋಪಯೋಗಿ ಇಲಾಖೆಯಲ್ಲಿ ಕೆಲಸಮಾಡತಕ್ಕಂಥ ಕೆಲವಾರು ಇಂಜಿನಿಯರುಗಳು ಏನಿದ್ದಾರೆ ಅವರಲ್ಲಿ ಅಸಮಾಧಾನ ಇದೆಯೆಂದು ಗೊತ್ತಾಗುತ್ತಿದೆ. ಅವರಲ್ಲಿ ಇರತಕ್ಕಂಥ ಅಸಮಾಧಾನದ ಬಗ್ಗೆ ಅದನ್ನು ತಮ್ಮ ಮುಖಾಂತರ ಈ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆ. ಅವರನ್ನು ಅಷ್ಟು ಲಘುವಾಗಿ ಕಾಣತಕ್ಕಂಥ ಪರಿಸ್ಥಿತಿಯಲ್ಲಿ ಮಾನ್ಯ ಮಂತ್ರಿಯವರು ಇರಬಾರದು. ಏಕೆಂದರೆ ಅವರು ರಾಷ್ಟ್ರವನ್ನು ನಿರ್ಮಾಣ ಮಾಡತಕ್ಕಂಥ ಶಿಲ್ಪಿಗಳು ಆ ಇಂಜಿನಿಯರ್‌ಗಳು. ಅದಕ್ಕಾಗಿ ನಾನು ಬಹಳ ಸಾರಿ ಈ ವಿಚಾರವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಯಾವೊಬ್ಬ ಇಂಜಿನಿಯರ್ ತನ್ನ ಕರ್ತವ್ಯದಲ್ಲಿ ನಿರತನಾಗಿ ಕೆಲಸಮಾಡಬೇಕಾದರೆ ಎಲ್ಲಿಯಾದರೂ ಒಂದು ಸಣ್ಣ ತಪ್ಪು ಆಗಬಹುದು. ಆದರೆ ಇಂಜಿನಿಯರ್ ಮಾಡತಕ್ಕಂಥ ಕೆಲಸವನ್ನು ಸಾಮಾನ್ಯವಾಗಿ ಬೇರೆ ಯಾರೂ ಮಾಡುವುದಕ್ಕೆ ಆಗುವುದಿಲ್ಲ ; ಐ.ಎ.ಎಸ್. ಅಧಿಕಾರಿಗಳೂ ಕೂಡ ಆ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ತಮಗೆ ಈ ಒಂದು ವಿಚಾರವನ್ನು ಹೇಳುತ್ತಿದ್ದೇನೆ. ಇವತ್ತು ಯಾರೇ ಇಂಜಿನಿಯರ್ ಬಗ್ಗೆ ಏನಾದರೂ ರಿಪೋರ್ಟ್ ತರಿಸಬೇಕಾದರೆ ಅವರ ಬಗ್ಗೆ ಏನಾದರೂ ರಿಮಾರ್ಕ್ಸ್ ಪಾಸ್ ಮಾಡಬೇಕಾದರೆ ಚೀಫ್ ಇಂಜಿನಿಯರ್‌ರವರು ಡೆಪ್ಯುಟಿ ಕಮಿಷನರ್‌ರವರಿಂದ ಕಾನ್‌ಫಿಡೆನ್‌ಷಿಯಲ್ ರಿಪೋರ್ಟನ್ನು ಕೇಳುತ್ತಾರೆ. ಇದು ಸರಿಯಲ್ಲ. ಇದನ್ನು ಮಾನ್ಯ ಸಚಿವರು ಬಹಳ ಗಂಭೀರವಾಗಿ ಪರಿಗಣಿಸಬೇಕು. ಏಕೆಂದರೆ ಈ ಇಲಾಖೆಯ ಪೂರ್ಣ ಜವಾಬ್ದಾರಿಯನ್ನು ಹೊತ್ತಿರತಕ್ಕಂಥವರು ಮಾನ್ಯ ಮಂತ್ರಿಯವರು. ಸಾಮಾನ್ಯವಾಗಿ ಯುವಕ ಇಂಜಿನಿಯರ್‌ಗಳು ಸಮಾಧಾನದಿಂದ ಅವರ ಕಾರ್ಯವನ್ನು ಅವರು ಮಾಡದೇ ಹೋದರೆ ಈ ಲೋಕೋಪಯೋಗಿ ಇಲಾಖೆಗೆ ಕಳಂಕ ಬರುತ್ತದೆ. ಅದರಲ್ಲಿ ಅಸಮಾಧಾನವಿದ್ದರೆ ಅವರಲ್ಲಿ ಯಾವ ಒಂದು ನೈತಿಕ ಮಟ್ಟ ಉಳಿಯುವುದಿಲ್ಲ. ಡೆಪ್ಯುಟಿ ಕಮಿಷನರ್‌ವರು ಆ ಒಬ್ಬ ತಾಂತ್ರಿಕ ಮನುಷ್ಯನ ಬಗ್ಗೆ ರಿಪೋರ್ಟ್ ಬರೆಯುತ್ತಾರೆ ? whether the Deputy Commissioner is professionally competent to write confidential reports of the Engineers ? In what way, he is professionally competent to write the confidential reports about the Engineers. ಅದಕ್ಕಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ನಾನು ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತಿದ್ದೇನೆ ಚೀಫ್ ಇಂಜಿನಿಯರ್‌ರವರು ಡೆಪ್ಯುಟಿ ಕಮಿಷನರ್‌ರವರಿಂದ ರಿಪೋರ್ಟನ್ನು ತರಿಸುವುದನ್ನು ಬಿಟ್ಟು ಅವರ ಇಲಾಖೆಯಲ್ಲಿರುವಂಥ ದಕ್ಷ ಅಧಿಕಾರಿಗಳಿಗೆ ಈ ಕೆಲಸವನ್ನು ವಹಿಸಿ ಅವರಿಂದ ರಿಪೋರ್ಟನ್ನು ತೆಗೆದುಕೊಳ್ಳುವಂತೆ ಮಾನ್ಯ ಸಚಿವರು ಅವರಿಗೆ ಆದೇಶ ಕೊಡಬೇಕು. ಮಾನ್ಯ ಸಚಿವರು ಇಂತಹ ಒಂದು ವ್ಯವಸ್ಥೆಯನ್ನು ಮಾಡಿಕೊಡುವುದು ಒಳ್ಳೆಯದು ಎಂದು ನಾನು ಹೇಳುತ್ತಿದ್ದೇನೆ.

ಇದರಲ್ಲಿರತಕ್ಕಂತಹ ಅಸಮಾಧಾನ ಮತ್ತು ದ್ವೇಷಾಸೂಯೆಯೆಂದು ವಾತಾವರಣವನ್ನು ತಾವು ಕಡಿಮೆ ಮಾಡಿದಂತಾಗುತ್ತದೆ ಎಂದು ನಾನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಇನ್ನು ಹಿಂದೆ ಲೋಕೋಪಯೋಗಿ ಇಲಾಖೆಯ ಖಾತೆಯನ್ನು ವಹಿಸಿ ಕೊಂಡಿದ್ದಂತಹ ಮಾನ್ಯ ಚನ್ನಬಸಪ್ಪನವರು ಮಂತ್ರಿಗಳಾಗಿದ್ದಾಗ ಮಾಡಿದಂತಹ ಕಾನೂನು ಅದನ್ನು ವಜಾಮಾಡಿದರು. ಈ ವಿಚಾರವನ್ನು ನಾನು ಇವತ್ತು ಈ ಸಭೆಯಲ್ಲಿ ಬಹಳ ವಿಷಾದದಿಂದ ಹೇಳಬೇಕಾಗಿದೆ. ವ್ಯಕ್ತಿಯು ತನ್ನ ನೈತಿಕ ಮಟ್ಟವನ್ನು ಕಾಯ್ದುಕೊಳ್ಳದೆ ಹೋದರೆ ಮುಂದೆ ಯಾವ ಕೆಲಸವನ್ನು ಮಾಡುವುದಕ್ಕೆ ಮನಸ್ಸು ಬರುವುದಿಲ್ಲ. ಆದ್ದರಿಂದ ಇದನ್ನು ಮಾನ್ಯ ಮಂತ್ರಿಗಳು ಬಹಳ ಗಂಭೀರವಾಗಿ ಗಮನಿಸಬೇಕೆಂದು ನಾನು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ.

ಮತ್ತೆ ಈ ಲೋಕೋಪಯೋಗಿ ಇಲಾಖೆಯಲ್ಲಿ ಸರ್ಟಿಫಿಕೇಟ್ ಡಿಪ್ಲಮಾ ಮತ್ತು ಗ್ರ್ಯಾಜ್ಯುಯೇಟ್ ಇಂಜಿನೀಯರ್‌ಗಳು ಇವರಲ್ಲಿರತಕ್ಕಂತಹ ಒಂದು ಅನಾಮಲಿಯನ್ನು ಹೋಗಲಾಡಿಸಲು ಮಾನ್ಯ ಮಂತ್ರಿಗಳು ಏನಾದರೂ ಪ್ರಯತ್ನವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇದರ ಬಗ್ಗೆ ನಾನು ಕೆಲವಾರು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನಗೆ ಕಂಡು ಬಂದ ಹಾಗೆ ಇವತು ಆಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನೀಯರ್‌ಗಳು ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿರುತ್ತಾರೆ ಅವರಿಗೆ ತನ್ನ ತಾಲ್ಲೂಕಿನಲ್ಲಿ ಒಂದು ಹಕ್ಕು ಚಲಾವಣೆ ಮಾಡುವಂಥ ಅಧಿಕಾರವಿಲ್ಲ. ಮತ್ತು ರೆವಿನ್ಯೂ ಇಲಾಖೆಯಲ್ಲಿ ಒಬ್ಬ ತಹಶೀಲ್ದಾರರಿಗೆ ಇರುವ ಅಧಿಕಾರಕ್ಕಿಂತ

ಈ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್‌ಗಳಿಗೆ ಕಡಿಮೆ ಅಧಿಕಾರವಿದೆ. ಅವರ ಅಧಿಕಾರವನ್ನು ಮೊಟಕುಗೊಳಿಸಿದ್ದಾರೆ. ಈ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರು ಹಳ್ಳಿಗಳಲ್ಲಿ ಸಂಪರ್ಕವಾಗಿ ಕೆಲಸ ಮಾಡಬೇಕು. ಆತನು ಕೆಲಸ ಮಾಡಬೇಕಾದರೆ ಆತನಿಗೆ ಯಾವ ವಿಧವಾದ ಅಧಿಕಾರವಿಲ್ಲದಿದ್ದರೆ ಆತನು ಹೇಗೆ ತಾನೆ ನನ್ನ ಕೆಲಸವನ್ನು ನಿರ್ವಹಿಸಲು ಸಾಧ್ಯ ? ರೆವಿನ್ಯೂ ಇಲಾಖೆಯಲ್ಲಿರತಕ್ಕಂತಹ ಒಬ್ಬ ತಹಶೀಲ್ದಾರರ ಅಧಿಕಾರಕ್ಕಿಂತಲೂ ಈ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್‌ಗೆ ಕಡಿಮೆ ಅಧಿಕಾರವಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಿ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅವರಿಂದ ಸರ್ಕಾರಕ್ಕೆ ಹೆಚ್ಚಿನ ಸೇವೆಯನ್ನು ತೆಗೆದುಕೊಳ್ಳಲು ಮತ್ತು ಅವರಲ್ಲಿರತಕ್ಕಂತಹ ಒಂದು ಅಸಮಾನತೆಯನ್ನು ಹೋಗಲಾಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅನಂತರ ಪೈ ಕಮಿಷನ್ನಿನವರು ಇಂಜಿನೀಯರ್‌ಗಳ ವೇತನ ಶ್ರೇಣಿಯನ್ನು ಗೊತ್ತು ಮಾಡಿದ್ದಾರೆ. ಅದರಲ್ಲಿರುವ ಕೆಲವು ಅನಾಮಲಿಯನ್ನು ಸರಿಪಡಿಸುವುದಕ್ಕಾಗಿ ಸಚಿವರ ಸಮಿತಿಯನ್ನು ನೇಮಿಸಿದ್ದಾರೆ. ಎಂದು ನಾನು ಕೇಳಿದ್ದೇನೆ ಈ ಉಪಸಮಿತಿಯವರ ವರದಿ ಏನಾದರೂ ಸರ್ಕಾರಕ್ಕೆ ಬಂದಿದೆಯೇ ? ಆ ವರದಿಯ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಕ್ರಮ ತೆಗೆದುಕೊಂಡಿದ್ದಾರೆಯೆ? ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವಿವರಣೆಯನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೆ ಪ್ರೊಬೇಷನರಿ ಇಂಜಿನೀಯರುಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಸರ್ಕಾರದವರು ತಯಾರಾಗಿದ್ದಾರೆ ಎಂದು ಕೇಳಿದ್ದೇನೆ. ಈ ಯೋಜನೆಯನ್ನು ಕಾರ್ಯರೂಪಕ್ಕೆ ಸರ್ಕಾರದವರು ಆಲೋಚನೆ ಮಾಡಬೇಕಾಗುತ್ತದೆ ಏತಕ್ಕೆಂದರೆ ತರಬೇಕಾದರೆ ಇದನ್ನು ಸ್ವಲ್ಪ ಸಂಶಯ ಇದೆ ಎಂದು ನನಗೆ ಕಂಡುಬರುತ್ತದೆ. ಕಾರಣ ಸುಮಾರು ೨೦–೩೦ ವರ್ಷಗಳಿಂದ ಈ ಇಲಾಖೆಯಲ್ಲಿ ಕೆಲಸ ಮಾಡಿಕೊಂಡು ಬಂದಿರತಕ್ಕಂತಹ ಇಂಜಿನೀಯರ್‌ಗಳಿಗೆ ಬಡ್ತಿಯನ್ನು ಕೊಡುವುದನ್ನು ಬಿಟ್ಟು ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿಕೊಂಡರೆ ೨೦–೩೦ ವರ್ಷಗಳಿಂದ ಈ ಇಲಾಖೆಯಲ್ಲಿ ಕೆಲಸ ಮಾಡಿಕೊಂಡಿರತಕ್ಕ ಇಂಜಿನೀಯರುಗಳಿಗೆ ನ್ಯಾಯ ಸಿಗುತ್ತದೆಯೇ ಎನ್ನುವ ಮಾತನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಆದ್ದರಿಂದ ನಾನು ಹೇಳುವುದೇನೆಂದರೆ ಮೊದಲು ಪರ್ಮನೆಂಟ್ ಆಗಿರುವ ಹುದ್ದೆಗಳಿಗೆ ಬಡ್ತಿಯನ್ನು ಕೊಟ್ಟು ಆ ಮೇಲೆ ಏನಾದರೂ ಹುದ್ದೆಗಳು ಖಾಲಿ ಇದ್ದರೆ ಆ ಹುದ್ದೆಗಳಿಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿಕೊಂಡರೆ ಒಳ್ಳೆಯದೆಂದು ನನ್ನ ಭಾವನೆ. ಸರ್ಕಾರಕ್ಕೆ ಈ ಭಾವನೆ ಏತಕ್ಕೆ ಬಂತು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆ ಕೊಡಬೇಕೆಂದು ನಾನು ಕೇಳುತ್ತೇನೆ. ಈಗ ಖಾಲಿಯಾಗಿರುವ ೧೬ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್‌ಗಳ ಹುದ್ದೆಗಳನ್ನು ಬರ್ತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಏನಾದರೂ ಪರಿಶೀಲನೆ ಮಾಡಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಅಧ್ಯಕ್ಷರು.—ರಿಕ್ರೂಟ್‌ಮೆಂಟ್ ರೂಲ್ಸ್‌ನಲ್ಲಿ ಪ್ರೊಮೋಷನ್‌ಗೆ ಇಷ್ಟು ಹುದ್ದೆಗಳು ಡೈರೆಕ್ಟ್ ರಿಕ್ರ್ಯೂಟ್‌ಮೆಂಟ್ ಇಷ್ಟು ಹುದ್ದೆಗಳು ಎಂದು ಇರುತ್ತದೆ. ಅದರ ಪ್ರಕಾರ ಅವರು ನೇಮಕ ಮಾಡಿಕೊಳ್ಳುತ್ತಾರೆ.

ಶ್ರೀ ವಿ. ಬಿ. ಭಾವಿ.—ಆ ಖಾಯ್ದೆಯ ಪ್ರಕಾರ ಎಲ್ಲರಿಗೂ ಬಡ್ತಿ ಸಿಕ್ಕಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅಲ್ಲಿ ಕೆಲಸ ಮಾಡತಕ್ಕವರಿಗೂ ಬಡ್ತಿ ಸಿಕ್ಕುವಂತೆ ಮಾನ್ಯ ಮಂತ್ರಿಗಳೂ ಪ್ರಯತ್ನ ಮಾಡಬೇಕು ಮತ್ತು ಅಲ್ಲಿ ಈ ಎಷ್ಟು ಹುದ್ದೆಗಳು ಖಾಲಿ ಇವೆ ಮತ್ತು ಎಷ್ಟು ಹುದ್ದೆಗಳು ಖಾಲಿ ಬೀಳುತ್ತವೆ ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತಾರೆ ಎನ್ನತಕ್ಕಂತಹ ಮಾಹಿತಿಯನ್ನು ಸಹಾ ಮಾನ್ಯ ಸಚಿವರು ದಯವಿಟ್ಟು ಅವರು ಉತ್ತರ ಕೊಡುವ ಸಮಯದಲ್ಲಿ ನಮಗೆ ತಿಳಿಸಬೇಕು. ಈ ಇಲಾಖೆಯಲ್ಲಿ ಸರ್ಕಾರದವರು ಲಂಚಗೊಳಿತನವನ್ನು ನಿವರ್ತಿಲನ ಮಾಡುವುದಕ್ಕೆ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸಬೇಕಾಗಿದೆ, ಮತ್ತು ಸರ್ಕಾರದವರಿಗೆ ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ಅಸಿಸ್ಟೆಂಟ್ ಇಂಜಿನೀಯರುಗಳನ್ನು ಸಸ್‌ಪೆಂಡ್ ಮತ್ತು ಚೀಫ್ ಇಂಜಿನೀಯರ್ ಸಸ್‌ಪೆಂಡ್ ಎಂದು ಎಲ್ಲಿ ನೋಡಿದರೂ ಪತ್ರಿಕೆಯಲ್ಲಿ ಓದುತ್ತಿದ್ದೇನೆ. ಆದರ ಸರ್ಕಾರಕ್ಕೆ ಬೇರೆ ಡಿಪಾರ್ಟ್‌ಮೆಂಟ್‌ನಲ್ಲಿ ಅಧಿಕಾರಿಗಳು ಸಿಗಲಿಲ್ಲವೆ ? ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಅವರ ಮೇಲೆ ಯಾವ

ಕ್ರಮವನ್ನು ತೆಗೆದುಕೊಳ್ಳಲಿಲ್ಲವೆ. ಸರ್ಕಾರದವರು ಉಳಿದ ಇಲಾಖೆಗಳ ಅಧಿಕಾರಿಗಳು ಮೇಲೆ ಏತಕ್ಕೆ ನಿಗಾ ಇಟ್ಟಿಲ್ಲ. ಅವರ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ. ಇದನ್ನು ಮಾನ್ಯ ಲೋಕೋಪಯೋಗಿ ಸಚಿವರು ಬಹಳ ಗಂಭೀರವಾಗಿ ಪರಿಗಣಿಸಬೇಕು ಎಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ತಿಳಿಸುತ್ತೇನೆ. ಉಳಿದ ಇಲಾಖೆಗಳಲ್ಲಿ ಮಂತ್ರಿಗಳು ಅಷ್ಟು ಎಫಿಷಿಯನ್ಸ್‌ಯಾಗಿ ಇಲ್ಲ ಎನ್ನತಕ್ಕಂತಹ ಭಾವನೆಯೇನು ? ನಾನು ಇವತ್ತು ಇದರಲ್ಲಿರತಕ್ಕಂತಹ ನ್ಯೂನತೆಗಳನ್ನು ಹೇಳುತ್ತಿದ್ದೇನೆ ಅಷ್ಟೆ. ಈ ಇಲಾಖೆಯಲ್ಲಿಯೇ ಒಂದು ಜಾಗ್ರತಾ ಆಯೋತ ಇದೆ. ಈ ತಾಂತ್ರಿಕ ತನಿಖಾ ವಿಭಾಗ ಒಂದನ್ನು ಮಾಡಿದ್ದಾರೆ. ಈ ತಾಂತ್ರಿಕ ತನಿಖಾ ವಿಭಾಗದಲ್ಲಿ ಚೀಫ್ ಇಂಜಿನೀಯರ್ ಒಬ್ಬರು ಇದ್ದಾರೆ. ಮತ್ತು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ಒಬ್ಬರು ಇದ್ದಾರೆ. ಒಬ್ಬ ಲೋಕೋಪಯೋಗಿ ಇಲಾಖೆಯ ಅಧಿಕಾರಿ ಏನಾದರೂ ತಪ್ಪು ಮಾಡಿದರೆ ಅದನ್ನು ತಾಂತ್ರಿಕ ತನಿಖಾ ವಿಭಾಗದವರು ತನಿಖೆ ಮಾಡುವುದಕ್ಕೋಸ್ಕರವಾಗಿ ಒಂದು ಸೆಲ್ ಇದೆ. ಅದು ಬಿಟ್ಟು ಬೇರೆ ಯಾರೋ ಒಬ್ಬರು ಇಂಜಿನೀಯರ್ ತಪ್ಪು ಮಾಡಿದರೆ ಪೋಲೀಸ್ ಅಧಿಕಾರಿಗಳು ಅದನ್ನು ತನಿಖೆ ಮಾಡಲು ಹೋಗುವುದಕ್ಕೆ ಕಾರಣವೇನು ? ಹಾಗಾದರೆ ತಾಂತ್ರಿಕ ತನಿಖಾ ವಿಭಾಗವನ್ನು ಯಾವ ಉದ್ದೇಶಕ್ಕೋಸ್ಕರ ಮಾಡಿದ್ದಾರೆ? ಇದಕ್ಕೆ ಮುಖ್ಯಮಂತ್ರಿಗಳು ವಿವರಣೆಯನ್ನು ಕೊಡಬೇಕು. ಎಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಈ ಇಲಾಖೆಯಲ್ಲಿರತಕ್ಕಂತಹ ಅಸಮಂತೆಗಳನ್ನು ಮತ್ತು ದ್ವೇಷಸೂಯೆಯನ್ನು ಹೋಗಲಾಡಿಸಲು ನಾನು ಕೊಡತಕ್ಕ ಕೆಲವು ಸಲಹೆಗಳನ್ನು ಬಹಳ ಗಂಭೀರವಾಗಿ ಪರಿಗಣಿಸಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ಮಾಡುತ್ತಾರೆ ಎಂಬ ನನ್ನ ಭಾವನೆ. ಇನ್ನು ಸಣ್ಣ ನೀರಾವರಿಯ ಬಗ್ಗೆ ಕೆಲವು [illegible] ಹೇಳುವುದಕ್ಕೆ ಇಚ್ಛಿಸುತ್ತೇನೆ. ಈ ಸಣ್ಣ ನೀರಾವರಿ ಇಲಾಖೆಯಲ್ಲಿ ಎರಡು ಭಾಗಗಳು ಇವೆ. ಒಂದು ಸಣ್ಣ ನೀರಾವರಿ ಮತ್ತು ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಎಂದು. ಈ ಸಣ್ಣ ನೀರಾವರಿ ಇಲಾಖೆ ಚೀಫ್ ಇಂಜಿನೀಯರ್‌ರವರ ಕಛೇರಿ ಧಾರವಾಡದಲ್ಲಿ ಇತ್ತು. ಇದನ್ನು ಈಗ ಬೆಂಗಳೂರಿಗೆ ಸ್ಥಳಾಂತರ ಗೊಳಿಸಿದ್ದಾರೆ. ಇದನ್ನು ಸ್ಥಳಾಂತರ ಮಾಡಿದಕ್ಕೆ ಯಾವುದೇ ಯೋಗ್ಯವಾದ ಕಾರಣಗಳನ್ನು ಇದುವರಿವಿಗೂ ಕೊಟ್ಟಿಲ್ಲ. ಈ ಸಣ್ಣ ನೀರಾವರಿ ಇಲಾಖೆಯ ಚೀಫ್ ಇಂಜಿನೀಯರ್‌ರವರ ಕಛೇರಿಯನ್ನು ಧಾರವಾಡದಿಂದ ಬೆಂಗಳೂರಿಗೆ ಸ್ಥಳಾಂತರ ಗೊಳಿಸಿರುವುದಕ್ಕೆ ಕೆಲವು ಬಲವತ್ತಾದ ಕಾರಣಗಳು ಇವೆ. ಇವತ್ತು ಸಣ್ಣ ನೀರಾವರಿ ಇಲಾಖೆಗೆ ೩೦ ಕೋಟಿ ರೂಪಾಯಿಗಳು ಒದಗಿಸಿದ್ದಾರೆ. ಈ ಇಲಾಖೆಯಲ್ಲಿ ಎರಡು ಭಾಗಗಳಾಗಿ ಮಾಡಿಕೊಂಡಿದ್ದಾರೆ. ಒಂದನೆಯದು ನಾರ್ತ್ ಜೋನ್ ಎರಡನೆಯದಾಗಿ ಸೌತ್ ಜೋನ್ ಎಂದು. ಈ ನಾರ್ತ್ ಜೋನ್‌ಗೆ ೧೫ ಕೋಟಿ ರೂಪಾಯಿಗಳು ಕೊಟ್ಟಿದ್ದಾರೆ. ಮತ್ತು ಸೌತ್ ಜೋನ್‌ಗೆ ೧೫ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ವಿಶ್ವ ಬ್ಯಾಂಕ್‌ನಿಂದ ಸಹಾಯಧನವನ್ನು ಕೊಟ್ಟಿದ್ದಾರೆ. ವಿಶ್ವಬ್ಯಾಂಕ್ ನೆರವಿನಿಂದ ಮಾಡತಕ್ಕ ಕೆಲಸಗಳು ೧೬೦ ಇವೆ. ಈ ಉತ್ತರ ವಿಭಾಗದಲ್ಲಿ ಮಾಡತಕ್ಕ ಕೆಲಸಗಳು ೯೬ ಇವೆ. ದಕ್ಷಿಣ ವಿಭಾಗದಲ್ಲಿ ಮಾಡತಕ್ಕ ಕೆಲಸಗಳು ೬೪ ಇವೆ. ಹೀಗಿರುವಾಗ ಉತ್ತರ ವಿಭಾಗದಲ್ಲಿ ೯೬ ಕೆಲಸಗಳನ್ನು ತೆಗೆದುಕೊಳ್ಳುವುದನ್ನು ಬಿಟ್ಟು ೬೪ ಕೆಲಸಗಳನ್ನು ಮಾತ್ರ ಮಾಡುವುದಕ್ಕೆ ಸ್ಯಾಂಕ್ಷನ್ ಕೊಟ್ಟು ಸಣ್ಣ ನೀರಾವರಿ ಇಲಾಖೆಯ ಚೀಫ್ ಇಂಜನೀಯರ್ ಅವರ ಕಛೇರಿಯನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಿದ್ದಾರೆ.

೬-೧೦ ಪಿ. ಎಂ.

ಇವರು ಪಬ್ಲಿಕ್ ಇಂಜಿನಿಯರಿಂಗ್ ಇಲಾಖೆಯನ್ನು ಇಲ್ಲಿಗೆ ಸ್ಥಳಾಂತರ ಮಾಡಿದ್ದರೆ ನಾನು ಒಪ್ಪುತ್ತಿದ್ದೆ. ಏಕೆಂದರೆ, ಕೆಲವೊಂದು ಕೆಲಸಗಳು ಈ ಯುನಿಸೆಫ್‌ನಿಂದ ಬರುತ್ತಿವೆ. ಜೊತೆಗೆ ಸ್ವಿಡ್ಜರ್ ಲೆಂಡ್‌ನಿಂದ ಇಲ್ಲಿಗೆ ರಿಗ್ಸ್ ಮತ್ತು ಪಂಪ್‌ಗಳನ್ನು ಕಳುಹಿಸುತ್ತಿದ್ದಾರೆ. ಇದರ ಜೊತೆಗೆ ಕೆಲವು ಡ್ಯಾನಿಡೋ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅಲ್ಲಿಂದ ನಮಗೆ ಫ್ರೀ ಆಫ್ ಕಾಸ್ಟ್‌ನಲ್ಲಿ ಪಂಪ್ಸ್ ಮತ್ತು ರಿಗ್ಸ್ ಬರುತ್ತಿವೆ. ಆದ್ದರಿಂದ ಇದನ್ನು ಸ್ಥಳಾಂತರ ಮಾಡಿದ್ದರೆ ನಾನು ಒಪ್ಪುತ್ತಿದ್ದೆ. ಆದರೆ ಇದನ್ನು ಬಿಟ್ಟು ಸಣ್ಣ ನೀರಾವರಿ ಇಲಾಖೆಯನ್ನು ಬೆಂಗಳೂರಿಗೆ ಸ್ಥಳಾಂತರ ಮಾಡಿದ್ದಾಗ ಇದರಿಂದ ಅಲ್ಲಿನ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಆದಕಾರಣ ಮುಖ್ಯ ಇಂಜಿನೀಯರ್ ಅವರ ಕಛೇರಿ

ಧಾರವಾಡದಲ್ಲಿಯೇ ಇರುವುದು ಒಳ್ಳೆಯದೆಂದು ಹೇಳುತ್ತೇನೆ. ಇದರಿಂದ ಅಲ್ಲಿನ ಜನರು ಅವರ ಜೊತೆ ನೇರ ಸಂಪರ್ಕ ಇಟ್ಟುಕೊಳ್ಳಲು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಸಣ್ಣ ಸಣ್ಣ ಕೆಲಸಕ್ಕೆಲ್ಲಾ ಬೆಂಗಳೂರಿಗೆ ಬರಬೇಕಾಗುತ್ತದೆ. ಆದ್ದರಿಂದ ಈ ಆಫೀಸನ್ನು ಧಾರವಾಡದಲ್ಲಿಯೇ ಇಡಬೇಕು. ಒಂದು ವೇಳೆ ಆ ಕಛೇರಿ ಬೆಂಗಳೂರಿನಲ್ಲಿಯೆ ಇರುವುದು ಒಳ್ಳೆಯದೆಂಬ ಅಭಿಪ್ರಾಯ ಸರ್ಕಾರಕ್ಕೆ ಇದ್ದರೆ, ಇನ್ನೊಂದು ಚೀಫ್ ಇಂಜಿನಿಯರ್ ಕಛೇರಿಯನ್ನು ಕ್ರಿಯೇಟ್ ಮಾಡಿ ಧಾರವಾಡದಲ್ಲಿ ಇಡಿ. ಇದಕ್ಕೆ ೮.೧೦ ಲಕ್ಷ ರೂ.ಗಳಷ್ಟು ಮಾತ್ರ ಖರ್ಚು ಬರುತ್ತದೆ. ಆದ್ದರಿಂದ ಸರ್ಕಾರಕ್ಕೆ ಏನಾದರೂ ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಉದ್ದೇಶದಿಂದ ಧಾರವಾಡದಲ್ಲಿ ಒಂದು ಆಫೀಸನ್ನು ತೆರೆಯಬೇಕೆಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†SRI P. F. RODRIGUES (Mangalore).—Sir, I stand here to speak on Demand Nos. 46 and 63 and I congratulate the Government for its achievement in the department of fisheries. While congratulating I would like to bring to the notice of the Hon'ble Minister of State for Fisheries and Ports that, the report says, out of a total of 25,000 Sq. Kms. of the continental shelf, only 9,000 Sq. Kms. has been exploited. That shows a vast majority of area of the sea has still remained virgin. May be, it is being exploited by foreign hands. Sir, through you, I appeal to the Government that the entire 25,000 Sq.Kms. of continental shelf should be exploited and get more wealth out of the sea shore and make it available to the people. Sir, it is a well known fact that fish contains all the necessary ingredients required for the human body and it is a cheap food which can reach the poor man without much difficulty. Therefore, my suggestion to the Government is, if we are to explore this continental shelf, we must acquire deep-sea trawlers, because the present day pursese boats can hardly do this job as they can go only upto a depth of 25 fathoms. As we go upto an area of 200 miles the depth increases and we will not be able to catch the wealth of the sea. So the only way to catch the wealth of the sea is to have deep-sea trawlers. Sir, we have developed the Malpe Fishing Harbour at a cost of Rs. 4.26 crores. If it is not going to be made use of, then the entire scheme, my submission is, will be of no use. So my humble request to the Government is to go in for deep-sea trawlers which can bring sea wealth to the shore.

Now we are able able earn, as given in the report, foreign exchange to the tune of Rs. 15 crores, by export of fish. This foreign exchange we can earn much more if we export other fish. Sir, I had an occa-

sion to meet an officer, who was a retired officer of Government of India, now employed in a private agency. He told me that in the Middle East their requirement from pin to an elephant can be supplied by our country which is just at the corner. But today Arab is getting things from America by air and one such thiug is fish. We are told that the export of fish to Middle East countries is being done through a private agency. Why it has given to private agency? Can't the Fisheries Corporation do this job? The report says that a beginning has been made. It is very good. But my submission is, take over the entire export of fish to Middle East countries and try to earn more money by way of foreign exchange. It is further stated in the report, that fisheries of some major tanks is leased out to private agencies. It is a very good step indeed, because the private agencies can also develop good fish and make available to consumers.

Then one more thing is, we have got 289 KMs length of sea from Karwar right upto Mangalore. But unfortunately, I find in the report that sea wealth is being distributed only within the shores of Karnataka. Why not go beyond that? We have got road and railway transport systems. Why not take it to other places? Sir, I had an occasion when the railways had agreed to transport fish from here to Delhi and from Mangalore to Delhi, Not only this, they had even given permission to open fish canteen in Bangalore City Railway Station. Why this is not being done and why not popularise fish which is a good food. A canteen has been opened in to Legislators' Home which is serving well and it is a well known fact. My request is, open such canteens in other places also so that people may become fish eaters. It is a good habit, because it is a very good food. Sir, we can transport it to Delhi, Calcutta, Bombay and other places? I had an occasion to see fish in the market at Delhi. All the fish were out of size and out of shape. What is happening is, they go to Bombay and from Bombay they transmit to Delhi and in the process the whole thing gets dried up and it is a pity that the people in Delhi have to eat such a kind of fish. We can definitely send the fish in a better manner and definitely we can have better income from this. I find in the report that in respect of Fisheries harbour of Malpe and Honnavar as against the budget provision of Rs. 158.56 lakhs only Rs. 86.05 lakhs has been spent. Why is this lethargy? Provision is there and only Rs. 86 lakhs has been spent. This sort of affaiar should not be there. This money should have been spent and this sh uld have been made available to the trade. and then definitely there would have been an

improvement in the matter of catching fish and exporting them. I would like to speak a few words about inland fisheries. Inland water resources cover only 4 lakh hectares of land and out of that it is a matter of regret that we have exploited only 1.55 lakh hectares. Balance is still to be exploited. I don't know why the Government has left all those lands. These lands could have been made use of for the inland fisheries. Sir, there is on problem *i.e.* having inland farms. Sir, we have got beautiful farms at Bhadra and Shantisagar. Shantisagar is a better fish farm than the Bhadra because of environmental conditions and also due to other facilities. But Sir, it is a matter of regret that near the fish farms there are no quarters for our officers. Sir, it is a matter known to the Department that wherever there is a fish farm quarters must also be there. Because during the breeding season officers must be there; otherwise the whole thing goes wrong. Suppose, officers reside 10-15 kilometers away from their places, how can we expect these human beings to cover this 10-15 kilometers and be present in the morning near the fish farms Wherever fish farms are there Government must have a housing scheme for these people so that officers remain there and devote their best attention. Sir, I must congratulate the officers of Fisheries Department who are doing excellent work because the have put the Karnataka on the map of the world as far a. fisheries is concerned. Really on should be happy about thems But what is it that we have done for them ? My submission is this. Please form a nucleus housing plan and give it to the Housing Board in co-operation with the HUDCO scheme and construct houses for them. I am submitting this to the Government on behalf of the officers who are working in the Fisheries Department.

Finally, I come to the Ports. Sir, it is a matter of joy for me that God given natural harbour—Karwar harbour is going to be developed as an all-weather Port. There was a lethargy on the part of the Government of India in respect of it and the Government has taken very bold steps to develop it and one should be happy about it. One more suggestion that I would like to maka to the Government in respect of this is: the Government have been spending eight crores of rupees for the development of this harbour. Let not our efforts remain there only. Please ask the Government of India to have a railway line from Dharwad to Karwar so that all our wealth that we want to export to foreign countries can pass through it and all the things that we want to import can also pass

through it and the vast inner land can be opened up and then real development will be seen there. While speaking on the Ports I am not unmindful of the officers working in this Department. Sir the post of the State Port Officer has fallen vacant since two and a half years. According to the rules the State Port Officer has to be a master of Marine Law and a nautical advisor to the State Government. He should also possess a piloting licence in order to pilot the ships into harbour. Sir, the present incumbent who is holding that office is yet to be confirmed why don't you confirm him? I do not know why he has been kept incharge of the post for two-and-a half years though he is a qualified officer. I request the Government to regularise the services of the officer so that the officers who are doing hard work would be satisfied that justice has been done to them. I would also like to congratulate the Government and the Ministry for having launched to ICP launches at Sadashivagadh, the load carrying trucks as a result of which so much of traffic is increased through Karwar port.

Sir, I have had an occasion to request the then Finance Secretary to release funds to replace broken tied rhpes which were acquired during Hyder Ali time. To this the Finance Secretary agreed to do something in the matter but that was not done latter. It is a matter of joy and pride that we have got these fast moving trucks as a result which lot of activities are taking place. I congratulate the Minister for this gesture. Sir, in Linganamakki dam there is a ferry boat connecting Hosanagar to Sagar. But during summer season it is difficult to navigate. Sir, when Linganamakki dam was constructed the trees were cut off—unfortunately they were cut off at the middle, not at the bottom. I request the Government to use their good offices and see that trees are cut off at the bottom so that navigation is safe and vessels can easily pass through it.

Another thing is regarding dredging of Mangalore harbour. Sir, Mangalore post is interlinked with all other ports and it gets silted every year. Fortunately last year weather was good enough and the wholething washed out. Unless it becomes free of silt and unless we have a depth of sixteen feet water, no fishing boat can either enter or go out. So, my another submission is this. Please think about dredging of Mangalore harbour.

One more suggestion I wish to make i.e., water canal between Mangalore and Coondapur. Sir, this scheme is pending since a long time and experts have come there and studied the feasibility of this. But Sir, I am sorry to say that my district has two rivers of sorrow, i.e., the river of Gurupur and Netravathi which cause a lot of damages during the monsoon season. If the canal is dug the flood water will pass through the canal to the North.

Secondly, as a result of this fisheries activities can be improved. The slow moving goods traffic can go in this, thereby lessening the incidences on these roads and national highways. A very interesting note has been given here stating that it is not economically viable in terms of returns. I am very pained to know this sort of attitude on the part of the government. The Public Works Department acquires the land and pays for it; to form and maintain the roads they pay for it; to construct bridges, they pay for it. Do they think in terms of money and returns? No. Then, why this step-motherly treatment as far as canal from Mangalore to Coondapur is concerned? I appeal to the Hon'ble Minister to kindly think about this seriously to start this project. Sir, I know that I spoke more than the time allotted to me, I am grateful to the Chair for having given me an opportunity to make my submission on the Budget.

† ಶ್ರೀ ಡಿ. ವಿ. ವೈಗಾಂವ್‌ಕರ್ (ಕಾರವಾರ).—ಸನ್ಮಾನ್ಯ ಅಧ್ಯಕ್ಷರೇ, ಡಿಮ್ಯಾಂಡ್ ನಂ. ೪೬ ಮತ್ತು ೬೩ ಮೇಲೆ ಮಾನ್ಯ ಶ್ರೀ ರೋಡ್ರಿಗ್ಸ್‌ರವರು ಮಾತನಾಡಿದ ಮೇಲೆ ನನಗೆ ಇದೇ ವಿಷಯದ ಮೇಲೆ ಮಾತನಾಡಲು ಅವಕಾಶ ಬಂದಿರತಕ್ಕಂಥದ್ದು ಕಾಕತಾಳ ನ್ಯಾಯವೋ ಗೊತ್ತಿಲ್ಲ ನಾನು ಸಹ ಇದರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಈ ಮತ್ಸ್ಯೋದ್ಯಮ ಅಭಿವೃದ್ಧಿಯ ಬಗ್ಗೆ ಒಂದು ಸಣ್ಣ ಹೊತ್ತಿಗೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ನಮಗೆಲ್ಲಾ ಒದಗಿಸಿದ್ದಾರೆ. ಇದರೊಳಗೆ ಸಾಮಾನ್ಯವಾಗಿ ನಮ್ಮ ಮತ್ಸ್ಯೋದ್ಯಮದ ಅಭಿವೃದ್ಧಿಯ ಬಗ್ಗೆ ಮಾಡಿದಂಥ ಕಾರ್ಯ ಅಥವಾ ಮಾಡುವಂಥಾ ಕಾರ್ಯದ ಯೋಜನೆ ಇವುಗಳ ಚಿತ್ರವನ್ನು ಚಿತ್ರೀಕರಿಸಿದ್ದಾರೆ. ಮತ್ತೆ ತಾವು ಮಾಡಿದಂಥ ಪ್ರಗತಿಯನ್ನು ಬಿಂಬಿಸಲಿಕ್ಕೆ ತಕ್ಕ ಮಟ್ಟಿಗೆ ಪ್ರಯತ್ನ ಮಾಡಿದ್ದಾರೆ. ಇದೇ ಪ್ರಕಾರ ಇದೇ ತರಹದ ಹೊತ್ತಿಗೆಯನ್ನು ಹಿಂದೆ ಕೂಡ ಕೊಡುತ್ತಿದ್ದರು. ಆದರೆ ಈ ಸಾರ್ತಿ ಒದಗಿಸಿರತಕ್ಕಂಥ ಹೊತ್ತಿಗೆಗೂ ಹಿಂದೆ ಒದಗಿಸುತ್ತಿದ್ದ ಹೊತ್ತಿಗೆಗಳಿಗೂ ಭೇದ ಎಷ್ಟಿದೆಯೆಂಬುದನ್ನು ನಾವು ನೋಡುವುದಾದರೆ, ಹಿಂದೆ ಮತ್ಸ್ಯೋದ್ಯಮದ ಬೆಳವಣಿಗೆ ನಮ್ಮ ರಾಜ್ಯದಲ್ಲಿ ಸಮಗ್ರವಾಗಿ ಹೇಗೆ ಮಾಡಬೇಕು, ಮತ್ತೆ ಹಾಗೆ ಮಾಡುತ್ತಿರುವಾಗ ನಾವು ಎದುರಿಸಬೇಕಾದಂಥ ಕೆಲವು ನ್ಯೂನ್ಯತೆಗಳು ಏನು ಎಂಬುದನ್ನು ಕಾಣಿಸುತ್ತಿದ್ದರು. ಅದನ್ನು ಈ ಸಾರ್ತಿ ಕಾಣಿಸಿಲ್ಲ. ಇಷ್ಟು ಭೇದದ ಹೊರತು ಇನ್ನು ಏನೂ ಹೆಚ್ಚಿಗೆ ಇದರಲ್ಲಿ ಭೇದವಿಲ್ಲ. ಸಾಮಾನ್ಯವಾಗಿ ಮೊದಲ ನೋಟಕ್ಕೆ ಈ ವರ್ಷದ ಈ ಹೊತ್ತಿಗೆಯನ್ನು ಓದಿದಾಕ್ಷಣ ಸಾಮಾನ್ಯವಾಗಿ ನಮ್ಮ ಮತ್ಸ್ಯೋದ್ಯಮ ಬೆಳೆಸುವಲ್ಲಿ ಈ ಯಾಂತ್ರೀಕೃತ ದೋಣಿಗಳ ಬೆಳವಣಿಗೆ ಆದರಿಂದಾಗಿ ಮತ್ಸ್ಯೋದ್ಯಮದ ವ್ಯಾಪಾರ ಬೆಳೆದಿದು ಅದು ಎಲ್ಲವನ್ನೂ ಒಪ್ಪತಕ್ಕ ಮಾತು ಆಗಿದೆ. ಆದರೆ ಇದು ಕೇವಲ ಮತ್ಸ್ಯೋದ್ಯಮದ ಮತ್ಸ್ಯೋತ್ಪಾದನೆಯನ್ನು ಮಾಡಿದಾಕ್ಷಣ ಅಥವಾ ಯಾಂತ್ರೀ

ಕೃತ ದೋಣಿಗಳನ್ನು ಕೊಟ್ಟಾಕ್ಷಣ ನಮ್ಮ ಮತ್ಸ್ಯೋದ್ಯಮವನ್ನು ಅಭಿವೃದ್ಧಿ ಮಾಡಿದ ಹಾಗಾಯಿತೇ ? ನಾವು ಇವತ್ತು ನಿರೀಕ್ಷಿಸಿದ ಮಟ್ಟದಲ್ಲಿ ಅಷ್ಟು ಯಶಸ್ವಿಯಾಗಿ ಆಗಿಲ್ಲವೆಂದು ಹೇಳಬೇಕಾಗಿದೆ. ಏತಕ್ಕೆ ಆಗಿಲ್ಲ ಎನ್ನುವ ಬಗ್ಗೆ ನನ್ನದೇ ಆದಂಥ ಕೆಲವು ಕಾರಣಗಳನ್ನು ತಾವು ದಯಪಾಲಿಸಿರತಕ್ಕಂಥ ಕಾಲದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ ಏನು ಈ ಮತ್ಸ್ಯೋದ್ಯಮದ ಅಭಿವೃದ್ಧಿಯ ಬಗ್ಗೆ ಹೊತ್ತಿಗೆಯನ್ನು ಕೊಟ್ಟಿದ್ದೀರಿ ಅದರಲ್ಲಿರತಕ್ಕಂಥ ಒಂದೆರಡು ಪ್ಯಾರಾವನ್ನು ಎತ್ತಿಕೊಂಡು ಇಲ್ಲಿ ಓದಿದರೆ ಸಾಧಾರಣವಾಗಿ ನಾನು ಇಲ್ಲಿ ಮಂಡಿಸತಕ್ಕಂಥ ವಿಚಾರದ ಮೇಲೆ ಬೆಳಕು ಬೀಳುತ್ತದೆ. "ನಮ್ಮ ರಾಜ್ಯದಲ್ಲಿ ಮೀನುಗಳನ್ನು ಹಿಡಿಯತಕ್ಕಂಥ ದೋಣಿಗಳ ಸಂಖ್ಯೆ ಜಾಸ್ತಿಯಾಗಬೇಕು. ನಮ್ಮ ರಾಜ್ಯದ ಮೀನಿನ ಹುಟ್ಟುವಳಿ ಹೆಚ್ಚಿಗೆ ಬೆಳೆಯಬೇಕು, ಇದರಿಂದ ಮೀನುಗಾರರ ಪರಿಸ್ಥಿತಿ ಉತ್ತಮಗೊಳ್ಳಬೇಕು ಎನ್ನತಕ್ಕ ಇಚ್ಛೆ ಸರ್ಕಾರಕ್ಕೆ ಇದೆ'' ಎಂದು ಇದನ್ನೆಲ್ಲಾ ಇಲ್ಲಿ ಉಸರಿಸಿದ್ದೀರಿ. ನಾನು ಇಲ್ಲಿಗೆ ಸಂಬಂಧಪಟ್ಟ ಪ್ಯಾರಾವನ್ನು ಮಾತ್ರ ತೆಗೆದುಕೊಂಡು ಓದುತ್ತೇನೆ, ತಾವು ದಯಪಾಲಿಸಿರತಕ್ಕ ವೇಳೆಯಲ್ಲಿ ಎಲ್ಲವನ್ನೂ ಓದಿ ಹೇಳುವುದಕ್ಕಾಗುವುದಿಲ್ಲ ಆದುದರಿಂದ ಸಂಬಂಧಪಟ್ಟದ್ದನ್ನು ಮಾತ್ರ ಇಲ್ಲಿ ಓದಿ ಹೇಳುತ್ತೇನೆ.

Some Purse–seines have been added and now their total strength is 230. I am only concerned with this particular aspect. In the annual report of the Fisheries Department in Para–3, sub–para 3, it is mentioned thus :

> "The apprehension that the Rampani operators had in their mind about their being thrown out of the age old profession in a few years on account of dominance of purse–seiners and the consequent non–availability of the Mackerels and Fardine within the reach of Rampani nets is no longer a dispute and matter of concerned for these fisher men.''

ಮೂಲತಃ ನಮ್ಮ ಭಾರತದಲ್ಲಿ ವಿಶೇಷವಾಗಿ ಮಲೆನಾಡಿನ ಫಿಶರೀಸ್ ಬಗ್ಗೆ ಹೇಳುವುದಾದರೆ ಅಲ್ಲಿ ಅವರು ದೊಡ್ಡ ದೊಡ್ಡ ಬಲೆಗಳನ್ನು ಬೀಸಿ ಮೀನುಗಳನ್ನು ಹಿಡಿಯುತ್ತಾರೆ. ಅವರು ಹೆಚ್ಚಿನ ಮೀನುಗಳನ್ನು ಹಿಡಿದು ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲಿ ಎನ್ನತಕ್ಕ ಉದ್ದೇಶದಿಂದ ಈಗ ಅವರ ಪರ್ಸೀನ್ ದೋಣಿಗಳನ್ನು ಒದಗಿಸಿದ್ದೀರಿ. ಆದರೆ ಅಧ್ಯಕ್ಷರೇ ಇದರಿಂದ ಮೊದಲು ಏನು ರಂಪಣಿಯನ್ನು ಉಪಯೋಗಿಸಿ ಮೀನನ್ನು ಹಿಡಿಯಲಿಕ್ಕಾಗಿ ೫೦–೬೦ ಜನ ಸಮುದ್ರದ ದಂಡೆಯ ಹತ್ತಿರ ಸೇರಿ ಬಿಸಿಲಿನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಮೀನುಗಳನ್ನು ಹಿಡಿಯುತ್ತಿದ್ದರು. ಆದರೆ ಇವತ್ತು ನಾವು ಸಮುದ್ರದ ದಂಡೆಯ ಹತ್ತಿರ ಹೋದರೆ ಆ ದೃಶ್ಯವೇ ಕಂಡು ಬರುವುದಿಲ್ಲ. ಅಲ್ಲಿ ಸ್ಮಶಾನ ಸದೃಶ್ಯ ಅಲ್ಲಿರುತ್ತದೆ. ಒಂದೊಂದು ಕುಟುಂಬದಲ್ಲಿ ೫೦–೬೦ ಜನ ಸೇರಿ ಈ ಉದ್ಯೋಗವನ್ನು ನಡೆಸುತ್ತಿದ್ದರು ಇದರಿಂದ ಸುಮಾರು ೪–೫ ಸಾವಿರ ಜನಕ್ಕೆ ಉದ್ಯೋಗ ಸಿಗುತ್ತಿತ್ತು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಸರ್ಕಾರದ ಇಚ್ಛೆ ಏನಿತ್ತು ಅವರ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಬೇಕೆಂದಿತ್ತು ಆದರೆ ಅದು ವ್ಯವಹಾರದಲ್ಲಿ ಆಗಲಿಲ್ಲ. ರಂಪಣಿ ಕುಟುಂಬದವರ ಪರಿಸ್ಥಿತಿ ಇವತ್ತು ಇನ್ನೂ ಹದಗೆಟ್ಟು ಅವರಲ್ಲಿ ಕೇವಲ ೪–೫ ಮಂದಿ ಮಾತ್ರ ಯಾರು ಸಮುದ್ರದೊಳಗೆ ಪರ್ಸಿಯನ್ ಬೋಟ್‌ಗಳನ್ನು ತೆಗೆದುಕೊಂಡು ಹೋಗಿ ಮೀನುಗಳನ್ನು ಹಿಡಿದುಕೊಂಡು ಬರುತ್ತಿದ್ದಾರೋ ಅವರು ಮಾತ್ರ ದುಂಡುದುಂಡಾಗುತ್ತಿದ್ದಾರೆ. ಇದರಿಂದ ಬಡ ಮೀನುಗಾರರು ಉಪವಾಸ ಬೀಳಲಿಕ್ಕೆ ಹತ್ತಿದ್ದಾರೆ. ಇದಕ್ಕಾಗಿ ಸರ್ಕಾರದವರ ಹತ್ತಿರ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ;

೬–೩೦ ಪಿ. ಎಂ.

ತಾವು ಇಂಟ್ರಡ್ಯೂಸ್ ಮಾಡಿದ ಯೋಜನೆಯಿಂದಾಗಿ ಮೀನುಗಾರರ ಪಾಲಿಗೆ ತುಸು ಮಾತ್ರವಾದರೂ ಆನಂದ ಪ್ರಾಪ್ತವಾಗಿದೆಯೋ ಅಥವಾ ದುಃಖ ಪ್ರಾಪ್ತವಾಗಿದೆಯೋ ? ಈ ಯೋಜನೆಯಿಂದ ಕೆಲವೇ ಜನರು ಶ್ರೀಮಂತರಾಗಲಿಕ್ಕೆ ಅವಕಾಶ ಇದೆ ಆದ್ದರಿಂದ ಇದರಲ್ಲಿ ದೋಷ ಎಲ್ಲಿದೆ ಎಂಬುದನ್ನು ಪತ್ತೆ ಮಾಡುವ ಆವಶ್ಯಕತೆ ಇಲ್ಲವೆ ಎಂದು ಕೇಳುತ್ತೇನೆ. ಈ ಯೋಜನೆಯಿಂದ ಕೇವಲ ೪–೫ ಮಂದಿಯನ್ನು ಶ್ರೀಮಂತರನ್ನಾಗಿ ಮಾಡಿ ಉಳಿದವರನ್ನು ಉಪವಾಸ ಕೆಡವಿದರೆ ಏನು ಪ್ರಯೋಜನ ? ಆದಕಾರಣ, ಈ ಯೋಜನೆಯನ್ನು ಪುನರ್ವಿಮರ್ಶಿಸುವ ಪ್ರಸಂಗ ಬಂದಿದೆ ಎಂದು ಹೇಳುತ್ತೇನೆ. ನನ್ನ ಮಾಹಿತಿ ಪ್ರಕಾರ ಇಲ್ಲಿಯವರೆಗೆ ನಮ್ಮ ಏರಿಯಾದಲ್ಲಿ ೨೫–೩೦ ಪರ್ಸಿನ್ ದೋಣಿಗಳನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ನಾಳೆ ತಮ್ಮ ಭಾಷಣವನ್ನು ಮುಂದುವರಿಸಬಹುದು. ಚರ್ಚೆ ನಾಳೆ ಮುಂದುವರಿಯುತ್ತದೆ. ಈಗ ಸಭೆ ಇಲ್ಲಿಗೆ ಮುಕ್ತಾಯಗೊಂಡು ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುವುದು.

The House adjourned at Thirty eight minutes past Six of the Clock to meet again at Nine of the Clock on Saturday the 18th July 1981.

W D 4601